ಜ್ಞಾನ ಅತೀಂದ್ರಿಯ ಸುಖದ ಹಿಂದೆ - ಹಿಂದೆಯೇ ಧಾವಿಸುತ್ತಾರೆ. ಅಯ್ಯಾ ! ಸಮ್ಯಕ್‌ದೃಷ್ಟಿ ಜೀವವು ಕಪ್ಪೆಯಾಗಿರಲಿ ಅಥವಾ ಸಾವಿರ ಯೋಜನದ ಮಹಾಮತ್ಸ್ಯವಾಗಿರಲಿ ಅದು ಕೂಡ ನನ್ನ ಸಂಪತ್ತು ನನ್ನ ಹತ್ತಿರವೇ ಇದೆಯೆಂದು ಮನ್ನಿಸುತ್ತದೆ. ಪುಣ್ಯ - ಪಾಪದ ಭಾವ ಮತ್ತು ಅವುಗಳ ಫಲದಲ್ಲಿ ಪ್ರಾಪ್ತವಾದ ಸಂಯೋಗಗಳು ನನ್ನ ಸಂಪತ್ತು ಅಲ್ಲವೆಂಬ ದೃಢ ಶ್ರದ್ಧೆಯಿರುತ್ತದೆ.

ಈ ಪ್ರಕಾರ ಸಮ್ಯಕ್‌ದೃಷ್ಟಿಯು ಶ್ರದ್ಧೆ - ಜ್ಞಾನ ಪರಿಣತಿಯ ಅಪೇಕ್ಷೆಯಿಂದ ಪರಭಾವದ ಪರಮ ತ್ಯಾಗಿಯಿದ್ದಾನೆ-ಸನ್ಯಾಸಿಯಿದ್ದಾನೆ. ಮತ್ತು ಸಹಜಾತ್ಮ ಸ್ವಭಾವದ ಯಥಾರ್ಥ ಪ್ರತೀತಿಯಿಲ್ಲದೆ ವ್ಯವಹಾರದಿಂದ ಸಂಯೋಗಗಳ ತ್ಯಾಗ ಮಾಡಿದರೆ ಅದು ನಿಜವಾದ ತ್ಯಾಗವೇ ಎನಿಸುವುದಿಲ್ಲ.

ಮಿಥ್ಯಾದೃಷ್ಟಿಯು ಶುಭ ರಾಗದಲ್ಲಿ ಲಾಭವಿದೆಯೆಂದು ಮನ್ನಿಸುತ್ತಾನೆ ಮತ್ತು ಶರೀರದ ಕ್ರಿಯೆಯನ್ನು ಧರ್ಮದ ಸಾಧನವೆಂದು ಮನ್ನಿಸುತ್ತಾನೆ. ಆದರೆ ಸಮ್ಯಕ್‌ದೃಷ್ಟಿಯು ರಾಗವನ್ನು ರೋಗವೆಂದು ತಿಳಿಯುತ್ತಾನೆ. ಮತ್ತು ಆ ರೋಗವನ್ನು ದೂರ ಮಾಡುವ ಉಪಾಯ ಮಾಡುತ್ತಿರುತ್ತಾನೆ. ಅಜ್ಞಾನಿಯು ಶರೀರದ ರೋಗವನ್ನಂತೂ ರೋಗವೆಂದು ತಿಳಿಯುತ್ತಾನೆ, ಅದನ್ನು ದೂರ ಮಾಡುವ ಉಪಾಯವನ್ನೂ ಮಾಡುತ್ತಿರುತ್ತಾನೆ. ಅವನಿಗೆ ಶರೀರ ಮೊದಲಾದವುಗಳಲ್ಲಿ ತನ್ನತನದ ಬುದ್ಧಿರೂಪವಾದ ಸನ್ನಿಪಾತದ ರೋಗವು ಅಂಟಿಕೊಂಡಿದೆ ಆದರೆ ಅಜ್ಞಾನಿಗೆ ಅದರ ಪ್ರಜ್ಞೆಯಿಲ್ಲ. ಜ್ಞಾನಿಗಂತೂ ಈ ರೋಗವೇ ಇಲ್ಲ. ಆದರೆ ಪುಣ್ಯ - ಪಾಪಗಳ ಭಾವರೂಪದ ಬೊಕ್ಕೆಗಳು ಬರುತ್ತಿರುತ್ತವೆ, ಅವನ್ನು ದೂರ ಮಾಡುವ ಪ್ರಯತ್ನ ಮಾಡುತ್ತಿರುತ್ತಾನೆ.

ಆತ್ಮನು ಅತೀಂದ್ರಿಯ ಆನಂದದ ಮಹಾನ ಗಣಿಯಿದಾನೆ. ಅವನಲ್ಲಿ ದೃಷ್ಟಿ - ಜ್ಞಾನ ಮತ್ತು ಸ್ಥಿರತೆ ಮಾಡುತ್ತಿದ್ದಂತೆಯೇ ಅನಂತ ಅತೀಂದ್ರಿಯ ಆನಂದವು ಹೊರಗೆ ಬರುತ್ತದೆ, ಅನುಭವದಲ್ಲಿ ಬರುತ್ತದೆ. ಆತ್ಮನು ಜ್ಞಾನ ಮತ್ತು ಆನಂದಮಯನಿದ್ದಾನೆ. ಆತ್ಮನು ಮೂರು ಕಾಲದಲ್ಲಿಯೂ ಪುಣ್ಯ - ಪಾಪ ಹಾಗೂ ರಾಗಮಯನಿಲ್ಲ. ಅಯ್ಯಾ ಸೋದರನೇ ! ನೀನು ಶರೀರದ ಶೋಧನೆ ಮಾಡುತ್ತಿರುವೆ ಆದರೆ ಒಂದು ಸಲ ನಿನ್ನ ಆತ್ಮನ ಪರಿಶೋಧನೆ ಮಾಡಿ ಅವನಲ್ಲಿ ಏನು ತುಂಬಿದೆಯೆಂಬುದನ್ನು ನೋಡಿಕೊಳ್ಳು !

ಶ್ರೀಮದ್ ರಾಜಚಂದರವರು ಹೀಗೆ ಹೇಳುತ್ತಾರೆ -

ಆತ್ಮ ಭ್ರಾಂತಿ ಸಮ ರೋಗ ನಹೀ ಸದ್ಗುರು ವೈದ್ಯ ಸುಜಾನ ।
ಗುರು ಆಜ್ಞಾ ಸಮ ಪಥ್ಯ ನಹೀ ಔಷಧ ವಿಚಾರ ಧ್ಯಾನ ॥

ಭಗವಾನ ಆತ್ಮನು ಅತೀಂದ್ರಿಯ ಜ್ಞಾನ ಮತ್ತು ಆನಂದಮಯನಿದ್ದಾನೆಂಬುದನ್ನು ಮನ್ನಿಸದೆ, ಆತ್ಮನನ್ನು ರಾಗವುಳ್ಳವನು, ಶರೀರವುಳ್ಳವನು , ಪುಣ್ಯ - ಪಾಪವುಳ್ಳವನು, ಸಂಯೋಗವುಳ್ಳವನೆಂದು ಮನ್ನಿಸುವುದು ಅದು ಶುದ್ಧ ಭ್ರಾಂತಿಯಿದೆ. ಇದಕ್ಕೆ ಸಮಾನವಾದ ರೋಗವು ಜಗತ್ತಿನಲ್ಲಿ ಬೇರೆ ಯಾವುದೂ ಇಲ್ಲ. ಆ ರೋಗ ದೂರ ಮಾಡುವ ಉಪಾಯವನ್ನು ಸದ್ಗುರುಗಳು ತಿಳಿಸಿಕೊಡುತ್ತಾರೆ. ಸದ್ಗುರುಗಳು ಎಲ್ಲಿಯವರೆಗೆ ತಿಳಿಸಿಕೊಡುತ್ತಾರೆಂದರೆ ನೀನು ನಮ್ಮ ಕುರಿತು ರಾಗ ಮಾಡಿದರೆ ಅದು ಕೂಡ ರೋಗವಿದೆಯೆಂದು ಹೇಳುತ್ತಾರೆ.

ಪ್ರಶ್ನೆ :- ಪ್ರಭು ! ಈ ರೋಗವನ್ನು ದೂರ ಮಾಡುವ ಉಪಾಯವೇನು ?

ಉತ್ತರ :- 'ಅನುಭವ ಚಿಂತಾಮಣಿ ರತನ ಅನುಭವ ಹೈ ರಸಕೂಪ ।
ಅನುಭವ ಮಾರಗ ಮೋಕ್ಷಕಾ ಅನುಭವ ಮೋಕ್ಷ ಸ್ವರೂಪ ॥

ನಿಜ ಶುದ್ಧಾತ್ಮನ ಅನುಭವ ಮಾಡುವುದೇ ರೋಗ ನಿವಾರಣೆ ಮಾಡುವ ಏಕಮಾತ್ರ ಉಪಾಯವಿದೆ. ಆದುದರಿಂದಲೇ ಜ್ಞಾನಿಗಳು ವ್ಯಾಪಾರ - ಉದ್ಯೋಗ ಮೊದಲಾದ ಕಾರ್ಯಗಳ ಮಧ್ಯದಲ್ಲಿ ಕೂಡ ಅನುಭವದ

ಸಮಯವನ್ನು ತೆಗೆದಿರಿಸುತ್ತಾರೆ. ಆತ್ಮನ ಸ್ಪರ್ಶ ಮಾಡಿ ಅನುಭವ ಮಾಡಿಕೊಳ್ಳುತ್ತಾರೆ. ಅನುಭವವು ಹೇಗೆ ಹೇಗೆ ವೃದ್ಧಿಸುತ್ತ ಹೋಗುತ್ತದೆ ಹಾಗೆ ಹಾಗೆ ಅವರಿಗೆ ಹೊರಗಿನ ಪ್ರವೃತ್ತಿನಲ್ಲಿ ಮತ್ತು ಸಂಯೋಗಗಳಿಂದ ವೈರಾಗ್ಯವು ವೃದ್ಧಿಸುತ್ತ ಹೋಗುತ್ತದೆ. ವ್ಯಾಪಾರ ಮೊದಲಾದ ಬಾಹ್ಯ ಪ್ರವೃತ್ತಿಯಲ್ಲಿ ಅವರ ಮನಸ್ಸು ತೊಡಗುವುದಿಲ್ಲ ಅವು ಯಾವುದರಲ್ಲೂ ನೆಮ್ಮದಿಯೆನಿಸುವುದಿಲ್ಲ, ಇದೇ ಕಾರಣದಿಂದ ಆತ್ಮನಲ್ಲಿ ವಿಶೇಷ ಲೀನವಾಗುವ ಸಲುವಾಗಿ ಧರ್ಮಾತ್ಮರುಗಳು ಬಾಹ್ಯ ಸಂಯೋಗಗಳ ತ್ಯಾಗ ಮಾಡಿ ಮುನಿಯಾಗಿ ಅರಣ್ಯಕ್ಕೆ ಹೊರಟು ಹೋಗುತ್ತಾರೆ.

ತಮ್ಮ ಆತ್ಮನ ಸಾಧನೆಯ ಪುರುಷಾರ್ಥವು ಉಗ್ರರೂಪದಿಂದ ಆಗುತ್ತಿದ್ದಂತೆಯೇ ಬಾಹ್ಯದಲ್ಲಿನ ವಸ್ತುಗಳ ತ್ಯಾಗವು ಸ್ವಾಭಾವಿಕವಾಗಿಯೇ ಆಗಿ ಹೋಗುತ್ತದೆ. ಯಾವ ಪ್ರಕಾರ ಹುಚ್ಚು ಹಿಡಿದ ನಾಯಿಯು ಯಾವನಿಗೆ ಕಚ್ಚಿರುತ್ತದೆ ಅವನಿಗೆ ನೀರು, ಹವೆ, ಭೋಜನ ಮೊದಲಾದವುಗಳು ಸ್ವಲ್ಪ ಕೂಡ ರುಚಿಸುವುದಿಲ್ಲ. ಅವನಿಗೆ ಎಲ್ಲಿಯೂ ನೆಮ್ಮದಿಯೆನಿಸುವುದಿಲ್ಲ, ಅದೇ ಪ್ರಕಾರ ಯಾವನಿಗೆ ಅಂತರ್ಯದಲ್ಲಿ ಸಮ್ಯಗ್ದರ್ಶನ - ಜ್ಞಾನ - ಚಾರಿತ್ರಗಳ ಹುಚ್ಚು ಹಿಡಿದಿದೆ ಅಂಥ ಧರ್ಮಾತ್ಮನಿಗೆ ಬಾಹ್ಯದಲ್ಲಿ ನೆಮ್ಮದಿಯೆನಿಸುವುದಿಲ್ಲ, ರುಚಿಯೆನಿಸುವುದಿಲ್ಲ, ವ್ಯಾಪಾರ - ಉದ್ಯೋಗ, ಮನೋರಂಜನೆ, ಪ್ರಸಿದ್ಧಿ, ಎಲ್ಲಿಯಾದರೂ ಹೋಗುವುದು, ಯಾರೊಡನಾದರೂ ಮಾತುಕತೆ ಮಾಡುವುದು ಇವೇ ಮೊದಲಾದ ಯಾವುದರಲ್ಲಿಯೂ ಮನಸ್ಸು ತೊಡಗುವುದಿಲ್ಲ, ಕೇವಲ ಓರ್ವ ಆತ್ಮನ ಹುಚ್ಚು ಹಿಡಿದಿರುತ್ತದೆ. ಅವನು ತನ್ನ ಅಂತರ್ಯದ ಸ್ವಭಾವದಲ್ಲಿ ವಿಶೇಷ ಲೀನತೆಯ ಸಲುವಾಗಿ ಮನೆ - ಮಾರು, ಬಟ್ಟೆ-ಬರೆ ಮೊದಲಾದ ಬಾಹ್ಯ ಸಂಯೋಗಗಳ ತ್ಯಾಗ ಮಾಡುತ್ತಾನೆ. ಆಗ ಅವನನ್ನು ಜಗತ್ತು ನಿರ್ಗ್ರಂಥನೆಂದು ಹೇಳುತ್ತದೆ.

ಮಾಲವ ದೇಶದ ಅಧಿಪತಿಯಾದ ದೊರೆ ಭರ್ತೃಹರಿಯು ತನ್ನ ಪ್ರಾಣಕ್ಕಿಂತಲೂ ಪ್ರಿಯಳಾದ ಮಹಾರಾಣಿ ಪಿಂಗಳೆಯ ಮಾಯಾಚಾರವನ್ನು ಯಾವಾಗ ತಿಳಿಯುತ್ತಾನೆ. ಆಗ ಅವನಿಗೆ ಎಂಥ ವೈರಾಗ್ಯ ಬಂದಿರಬೇಕು ! ಅದೇ ಪ್ರಕಾರ ನಾಲ್ಕನೆಯ ಗುಣಸ್ಥಾನದಲ್ಲಿರುವ ಧರ್ಮಾತ್ಮನಿಗೆ ಸಂಪೂರ್ಣ ಜಗತ್ತಿನ ಕುರಿತು ಅಂತರ್ಯದಲ್ಲಿ ನಿಜವಾದ ವೈರಾಗ್ಯವು ಪ್ರಕಟವಾಗಿ ಹೋಗುತ್ತದೆ.

ಪ್ರಭು ! ನಿನಗೆ ನಿನ್ನ ಮಹಿಮೆಯ ಪ್ರಜ್ಞೆಯೇ ಇಲ್ಲ. ಅನಂತ ..... ಅನಂತ ..... ಅತೀಂದ್ರಿಯ ಆನಂದದ ಪ್ರವಾಹವು ಪರ್ಯಾಯದಲ್ಲಿ ಅನಂತಕಾಲದವರೆಗೆ ಪ್ರವಹಿಸಿದರು ಕೂಡ ಎಂದೂ ಸಮಾಪ್ತವಾಗದಂಥ ಅನಂತ ಅತೀಂದ್ರಿಯ ಆನಂದದ ಮಹಾಸಾಗರನು ನೀನು ಸ್ವಯಂ ಇರುವೆ. ಅಯ್ಯಾ ಸೋದರನೇ ! ಇಂಥ ಆತ್ಮನ ದೃಷ್ಟಿಯು ಒಂದು ಬಾರಿ ಪ್ರಕಟವಾದರೆ ಶ್ರದ್ಧೆ - ಜ್ಞಾನದಲ್ಲಿರುವ ರಾಗವು ನಾಶವಾಗಿ ಹೋಗುತ್ತದೆ. ಚಾರಿತ್ರದಲ್ಲಿ ರಾಗವು ಬರುತ್ತದೆ, ಆದರೆ ಜ್ಞಾನಿಗಳು ಅದನ್ನು ಒಂದು ಕೃಷ್ಣ ಸರ್ಪದ ಸಮಾನವಾಗಿ ತಿಳಿದುಕೊಂಡು ಅದರ ತ್ಯಾಗ ಮಾಡುತ್ತಾರೆ. ಮತ್ತು ಸ್ವರೂಪದಲ್ಲಿ ವಿಶೇಷ ಸ್ಥಿರತೆಯ ಸಲುವಾಗಿ - ಸ್ವಾನುಭವದ ಸಲುವಾಗಿ ಇನ್ನೂ ಹೆಚ್ಚು ಅಭ್ಯಾಸ ಮಾಡುವುದಕ್ಕೋಸ್ಕರ ಮುನಿತನದ ಅಂಗೀಕಾರ ಮಾಡುತ್ತಾರೆ. ಮುನಿದಶೆಯಲ್ಲಿ ಹೆಚ್ಚು - ಹೆಚ್ಚಾಗಿ ವೀತರಾಗತೆಯ ವೃದ್ಧಿಯಾಗುತ್ತದೆ.

ಆತ್ಮನು ಯಾವಾಗ ಉಗ್ರ ಪುರುಷಾರ್ಥ ಮಾಡಿ ಸ್ವರೂಪದಲ್ಲಿ ಸ್ಥಿರಗೊಳ್ಳುವ ಸಲುವಾಗಿ ಪರಿಪೂರ್ಣ ಅಭ್ಯಾಸ ಮಾಡುತ್ತಾನೆ ಆಗ ಕೇವಲಜ್ಞಾನವು ಧಾವಿಸುತ್ತ ಬಂದು ಬಿಡುತ್ತದೆ. ಆತ್ಮಜ್ಞಾನದ ಉಗ್ರತೆಯು ಕೇವಲ ಜ್ಞಾನವನ್ನು ಕೂಗಿ ಕೂಗಿ ಕರೆಯುತ್ತದೆ.

ಈ ಗಾಥೆಯಲ್ಲಿ ಸಮ್ಯಗ್ದರ್ಶನ, ಮುನಿದಶೆ ಮತ್ತು ಕೇವಲಜ್ಞಾನ ಈ ಮೂರರ ಭೂಮಿಕೆಯ ಮಾತು ಬಂದು ಬಿಟ್ಟಿತು.

ಈಗ ರತ್ನತ್ರಯಯುಕ್ತ ಜೀವನೇ ಉತ್ತಮ ತೀರ್ಥನಿದ್ದಾನೆಂಬ ಮಾತನ್ನು ಹೇಳುತ್ತಾರೆ -

ರಯಣತ್ತಯ-ಸಂಜುತ್ತ ಜೀಉ ಉತ್ತಿಮು ತಿತ್ಥು ಪವಿತ್ತು
ಮೋಕ್ಖಹ ಕಾರಣ ಜೋಇಯಾ ಅಣ್ಣು ಣ ತಂತು ಣ ಮಂತು ॥83॥

ರತ್ನತ್ರಯಮಯ ಜೀವನೆ ತಾ ಉತ್ತಮ ಪಾವನ ತೀರ್ಥನಿಹ
ಯತ್ನವೆ ಮೋಕ್ಷದ ಕಾರಣ ಋಷಿ ಮಂತ್ರ-ತಂತ್ರಗಳು ಬೇರಿಲ್ಲ ॥83॥

ಅರ್ಥ :- ಎಲೈ ಯೋಗಿಯೇ ! ರತ್ನತ್ರಯ ಸಹಿತನಾದ ಜೀವನು ಉತ್ತಮ ಮತ್ತು ಪವಿತ್ರನಾದ ತೀರ್ಥ-ನಿದ್ದಾನೆಂಬುದೇ ಮೋಕ್ಷದ ಉಪಾಯವಿದೆ. ಇದನ್ನು ಹೊರತು ಪಡಿಸಿ ಉಳಿದ ಯಾವ ಮಂತ್ರ - ತಂತ್ರಗಳಿಲ್ಲ.

ಆಚಾರ್ಯ ಯೋಗೀಂದು ದೇವರೆಂಬ ಹೆಸರಿನ ನಗ್ನ ದಿಗಂಬರ ಮಹಾ ಮುನಿರಾಜರು ಇಂದಿಗೆ ಸುಮಾರು ಸಾವಿರದಾನಾನೂರು ವರುಷಗಳ ಮೊದಲು ಆಗಿ ಹೋಗಿದ್ದಾರೆ. ಕಾನನದಲ್ಲಿ ಯಾವ ಪ್ರಕಾರ ಸಿಂಹವು ಗರ್ಜನೆ ಮಾಡುತ್ತ ವಿಹರಿಸುತ್ತದೆ ಅದೇ ಪ್ರಕಾರ ದಿಗಂಬರ ಸಂತರು ಆತ್ಮನ ಮಸ್ತಿಯಿಂದ ಗರ್ಜನೆ ಮಾಡುತ್ತ ಹೀಗೆ ಹೇಳುತ್ತಾರೆ. ರತ್ನತ್ರಯ ಯುಕ್ತನಾದ ಜೀವನೇ ನಿಜವಾಗಿ ಉತ್ತಮ ತೀರ್ಥನಿದ್ದಾನೆ. ಅವನನ್ನು ಹೊರತು ಪಡಿಸಿ ಸಮ್ಮೇದಶಿಖರ, ಗಿರಿನಾರ, ಶತ್ರುಂಜಯ ಮೊದಲಾದ ತೀರ್ಥಗಳೆಲ್ಲವೂ ಶುಭ ಭಾವದಲ್ಲಿ ನಿಮಿತ್ತವಿವೆ. ಅವುಗಳಿಂದ ಮಾತ್ರ ಶುಭ ಭಾವಗಳಾಗುತ್ತವೆ. ಆದರೆ ಧರ್ಮವೆಂದೂ ಆಗುವುದಿಲ್ಲ. ಭವಸಾಗರದಿಂದ ದಡ ತಲುಪಿಸುವಂಥ ತೀರ್ಥವೆಂದರೆ ನಿಜ ಶುದ್ಧಾತ್ಮನ ದರ್ಶನ, ಜ್ಞಾನ ಮತ್ತು ಚಾರಿತ್ರವೇ ಇದೆ. ಅದನ್ನು ಹೊರತುಪಡಿಸಿ ಬೇರೆ ಯಾವ ಉಪಾಯವೇ ಇಲ್ಲ.

ನಿಶ್ಚಯ ರತ್ನತ್ರಯವೇ ಪ್ರತ್ಯಕ್ಷ ತೀರ್ಥವಿದೆ, ಉತ್ತಮ ತೀರ್ಥವಿದೆ, ಪವಿತ್ರ ತೀರ್ಥವಿದೆ. ಆ ತೀರ್ಥದ ಯಾತ್ರೆ ಮಾಡುವುದರಿಂದಲೇ ಜನ್ಮ - ಮರಣಗಳು ನಾಶವಾಗಿ ಮುಕ್ತಿಯ ಪ್ರಾಪ್ತಿಯಾಗುತ್ತದೆ. ಇದನ್ನು ಬಿಟ್ಟು ಬೇರೆ ಯಾವುದೂ ಮುಕ್ತಿಯ ಉಪಾಯವಿಲ್ಲ. ಮುಕ್ತಿಯ ಉಪಾದಾನ ಕಾರಣವೆಂದರೆ ಶುದ್ಧಾತ್ಮನ ಶ್ರದ್ಧೆ - ಜ್ಞಾನ - ಚಾರಿತ್ರರೂಪದ ರತ್ನತ್ರಯವೇ ಇದೆ.

ಭಗವಾನ ಆತ್ಮನು ಸ್ವಯಂ ಜ್ಞಾನ ಚೇತನಾಮಯನಿದ್ದಾನೆ. ಜ್ಞಾನ ಸ್ವರೂಪದ ಅನುಭವವು ಅದು ಜ್ಞಾನ ಚೇತನಾವಿದೆ. ರಾಗ ಮೊದಲಾದವುಗಳ ಅನುಭವವು ಅದು ಅಜ್ಞಾನ ಚೇತನಾವಿದೆ. ನಿರಾಕುಲನಾದ ಭಗವಾನ ಆತ್ಮನ ದೃಢ ಶ್ರದ್ಧೆಯಾಗುವುದು ಅದು ನಿಶ್ಚಯ ಸಮ್ಯಗ್ದರ್ಶನವಿದೆ. ಅದು ಆತ್ಮನ ಭೂಮಿಕೆಯಲ್ಲಿಯೇ ಆತ್ಮನ ಆಶ್ರಯದಿಂದಲೇ ಪ್ರಕಟವಾಗುತ್ತದೆ. ರಾಗದ ಭೂಮಿಕೆಯಲ್ಲಿ ಸಮ್ಯಗ್ದರ್ಶನವು ಪ್ರಕಟವಾಗುವುದಿಲ್ಲ.

ಆತ್ಮನ ಜ್ಞಾನವು ಅದು ಸಮ್ಯಕ್ ಜ್ಞಾನವಿದೆ ಮತ್ತು ಆತ್ಮನ ಆಶ್ರಯದಿಂದ ಆತ್ಮನಲ್ಲಿ ಆಗುವ ಸ್ಥಿರತೆಯ ಹೆಸರು ಅದು ಸಮ್ಯಕ್ಚಾರಿತ್ರವಿದೆ. ಈ ನಿಶ್ಚಯ ರತ್ನತ್ರಯ ಸ್ವರೂಪದ ತೀರ್ಥವೇ ಉತ್ತಮ ತೀರ್ಥವಿದೆ, ಶಾಶ್ವತ ತೀರ್ಥವಿದೆ. ಸಮ್ಯಗ್ದರ್ಶನ - ಜ್ಞಾನ - ಚಾರಿತ್ರರೂಪದ ಮೂರು ಧರ್ಮಸಹಿತನಾದ ಈ ಆತ್ಮನೇ ಉತ್ತಮ ತೀರ್ಥನಿದ್ದಾನೆ. ಆತ್ಮರೂಪದ ಜಹಜನ್ನು ಆತ್ಮರೂಪದ ಸಾಗರದಲ್ಲಿ ಸಾಗಿಸುತ್ತ - ಸಾಗಿಸುತ್ತ ಆತ್ಮನು ಮೋಕ್ಷದ್ವೀಪದಲ್ಲಿ ತಲುಪಿ ಬಿಡುತ್ತಾನೆ. ಮುಕ್ತಿಯನ್ನು ಪಡೆಯುತ್ತಾನೆ.

ದಿಗಂಬರ ಸಂತರು ತತ್ತ್ವಗಳ ಮಂಥನ ಮಾಡಿ ಸಂಪೂರ್ಣ ಸಾರವನ್ನು ತೆಗೆದಿರಿಸಿದ್ದಾರೆ. ಯೋಗಸಾರವು ಇದು ಪರ್ಯಾಯವಿದ್ದರೂ ಇದರ ವಿಷಯವು ತ್ರಿಕಾಲ ಧ್ರುವ - ಶಾಶ್ವತ ಶುದ್ಧ ಸತ್ ವಸ್ತುವಿದೆ. ಅದನ್ನು ಧ್ಯೇಯ ಮಾಡಿಕೊಂಡು ಅದರ ಶ್ರದ್ಧೆ, ಜ್ಞಾನ ಮತ್ತು ಸ್ಥಿರತೆ ಮಾಡುವುದನ್ನು ಯೋಗಸಾರವೆಂದು ಹೇಳಲಾಗಿದೆ.

ಈಗ ಆಚಾರ್ಯ ಭಗವಂತರು ರತ್ನತ್ರಯದ ಸ್ವರೂಪ ಹೇಳುತ್ತಾರೆ -

ದಂಸಣು ಜಂ ಪಿಚ್ಛಿಯಇ ಬುಹ ಅಪ್ಪಾ ವಿಮಲ ಮಹಂತು
ಪುಣು ಪುಣು ಅಪ್ಪಾ ಭಾವಿಯಏ ಸೋ ಚಾರಿತ್ತ ಪವಿತ್ತು ॥84॥

ಆತ್ಮನು ನಿರ್ಮಲ ಮಹನೆಂಬ ನಂಬುಗೆ ಸಮ್ಯಕ್‌ದರ್ಶನಿದೆ
ಆತ್ಮನ ಜ್ಞಾನವೆ ಜ್ಞಾನವಿದೆ ಆತ್ಮನ ಭಾವನೆ ಚರಿತವಿದೆ ॥84॥

ಅರ್ಥ :- ಈ ಆತ್ಮನು ಮಲರಹಿತ ಶುದ್ಧ ಮತ್ತು ಮಹಾನ ಪರಮಾತ್ಮನಿದ್ದಾನೆಂದು ಶ್ರದ್ಧೆ ಮಾಡುವುದು ಅದು ಸಮ್ಯಗ್ದರ್ಶನವಿದೆ, ಮತ್ತು ಹಾಗೆ ತಿಳಿದುಕೊಳ್ಳುವುದು ಅದು ಜ್ಞಾನವಿದೆ. ಪುನಃ ಪುನಃ ಆ ಆತ್ಮನ ಭಾವನೆ ಮಾಡುವುದು ಅದು ಪವಿತ್ರವಾದ ಶುದ್ಧ ನಿಶ್ಚಯ ಚಾರಿತ್ರವಿದೆ.

ಈ ಆತ್ಮನು ಮಲರಹಿತ - ದೋಷರಹಿತ ವಿಮಲ ಮತ್ತು ಮಹಾನನಿದ್ದಾನೆ. ಒಂದು ಸಮಯದಲ್ಲಿ ಅನಂತ ಪರಮಾತ್ಮ ದಶೆಯು ನಿನ್ನ ಗರ್ಭದಲ್ಲಿ ಸದಾ ಬಿದ್ದು ಕೊಂಡಿರುವಂಥ ಧ್ರುವ - ಶಾಶ್ವತ ಭಗವಂತನು ಸ್ವಯಂ ಇರುವೆ. ಅವನನ್ನು ನೋಡುವುದು ಎಂದರೆ ಅವನ ಶ್ರದ್ಧೆ ಮಾಡುವುದು ಅದು ಸಮ್ಯಗ್ದರ್ಶನವಿದೆ. ಹೇಗೆ ನೋಡುವುದು - ಶ್ರದ್ಧೆ ಮಾಡುವುದೆಂದರೆ ಪರಸನ್ಮುಖತೆಯನ್ನು ತ್ಯಜಿಸಿ, ಭೇದದ ವಿಕಲ್ಪವನ್ನು ಬಿಟ್ಟುಕೊಟ್ಟು ಸ್ವಸನ್ಮುಖತೆಯೊಡನೆ ಆತ್ಮನನ್ನು ನೋಡುವುದರ - ಶ್ರದ್ಧೆ ಮಾಡುವುದರ ಹೆಸರು ಸಮ್ಯಗ್ದರ್ಶನವಿದೆ. ತನ್ನ ಆತ್ಮನನ್ನು ಜ್ಞೇಯ ಮಾಡಿಕೊಂಡು ಅವನ ಯಥಾರ್ಥ ಜ್ಞಾನ ಮಾಡಿಕೊಳ್ಳುವುದು ಅದು ಸಮ್ಯಕ್‌ಜ್ಞಾನವಿದೆ.

ಭಗವಾನ ಆತ್ಮನು ಅನಂತಗುಣ ಸ್ವರೂಪಿಯಿದ್ದಾನೆ ಮತ್ತು ಅಸಂಖ್ಯಾತ ಪ್ರದೇಶಿಯಿದ್ದಾನೆ. ಆದರೆ ಅವನಲ್ಲಿ ಗುಣದ ಅಥವಾ ಪ್ರದೇಶದ ಭೇದವಿಲ್ಲ, ಅವನು ನಿಜವಾಗಿ ಏಕರೂಪ ಅಖಂಡನಿರುವುದರಿಂದ ಅವನನ್ನು ನೋಡುವ ದೃಷ್ಟಿಯು ಕೂಡ ಏಕರೂಪವಿದ್ದಾಗಲೇ ಆತ್ಮನ ದರ್ಶನವಾಗುತ್ತದೆ - ಆತ್ಮನ ಶ್ರದ್ಧೆಯಾಗುತ್ತದೆ. ಅನ್ಯಥಾ ಆಗುವುದಿಲ್ಲ.

ಆತ್ಮನು ಮಹಾನ ಪದಾರ್ಥನಿದ್ದಾನೆ, ಅವನ ಒಂದೊಂದು ಗುಣವೂ ಮಹಾನವಿದೆ. ಅನಂತ ಶಕ್ತಿಯ ಧಾರಕನಾದಂಥ ಅನಂತ ಶಕ್ತಿಯ - ಅನಂತ ಗುಣಗಳ ಅಖಂಡ ಪಿಂಡನಾದಂಥ ಆತ್ಮನು ಮಹಾನನೇ ಇರುವನಲ್ಲವೇ ಭಗವಂತರು ಪ್ರತಿಯೊಬ್ಬ ಆತ್ಮನನ್ನು ಹೀಗೆಯೇ ಅಸಂಖ್ಯ ಪ್ರದೇಶಿ ಅನಂತಗುಣಸ್ವರೂಪವಾಗಿಯೇ ನೋಡಿದ್ದಾರೆ. ಇಂಥ ತನ್ನ ಆತ್ಮನ ಶ್ರದ್ಧೆ - ಜ್ಞಾನ ಮತ್ತು ಸ್ಥಿರತೆ ಮಾಡಬೇಕಾಗುವುದನ್ನು ಭಗವಂತರು ಸಮ್ಯಗ್ದರ್ಶನ - ಜ್ಞಾನ - ಚಾರಿತ್ರವೆಂದು ಅಪ್ಪಣೆ ಕೊಡಿಸಿದ್ದಾರೆ .

ಜ್ಞಾನ ಸ್ವರೂಪನಾದ ಆತ್ಮನ ಆ ಜ್ಞಾನ ಪರ್ಯಾಯವು ತನ್ನ ಸ್ವರೂಪದ ಜ್ಞಾನ ಮಾಡುವುದು ಅದು ಸಮ್ಯಕ್‌ಜ್ಞಾನವಿದೆ. ಶಾಸ್ತ್ರದ ಜ್ಞಾನವು ಅದು ಜ್ಞಾನವಲ್ಲ, ಅದಂತೂ ಪರಸತ್ತಾವಲಂಬಿಯಾದ ಜ್ಞಾನವಿದೆ. ಸ್ವಸತ್ತಾವಲಂಬಿಯಾದ ಜ್ಞಾನವು ಅದು ಸ್ವರೂಪದೊಳಗಿಂದ ಪ್ರಕಟವಾಗುತ್ತದೆ, ಅದುವೇ ನಿಜವಾದ ಜ್ಞಾನವಿದೆ; ತನ್ನ ಜ್ಞಾನವಿದೆ.

ಯಾವ ಅಭೇದ - ಅಖಂಡ - ಏಕರೂಪನಾದ ಆತ್ಮನನ್ನು ದೃಷ್ಟಿಯಲ್ಲಿ - ಜ್ಞಾನದಲ್ಲಿ ತೆಗೆದುಕೊಳ್ಳಲಾಗಿತ್ತು. ಅದೇ ಶುದ್ಧ ಪೂರ್ಣಾನಂದ ಸ್ವರೂಪನಾದ ಆತ್ಮನಲ್ಲಿ ಸ್ಥಿರತೆ - ಲೀನತೆ ಮಾಡುವುದು ಎಂದರೆ ಅತೀಂದ್ರಿಯ ಆನಂದದ ಅನುಭವ ಮಾಡಿಕೊಳ್ಳುವುದನ್ನು ಸರ್ವಜ್ಞ ದೇವರು ಯಥಾರ್ಥ ಚಾರಿತ್ರವೆಂದು ಹೇಳಿದ್ದಾರೆ. ಅದುವೇ ನಿಜವಾದ ಮತ್ತು ಪವಿತ್ರವಾದ ಚಾರಿತ್ರವಿದೆ.

ಅಸಂಖ್ಯ ಪ್ರದೇಶಿಯಾದ ಆತ್ಮನು ಕ್ಷೇತ್ರದಿಂದ ಬೇಕಾದಷ್ಟು ಚಿಕ್ಕವ ಅಥವಾ ದೊಡ್ಡವನಾಗಿರಲಿ, ಆದರೆ ಅವನು ಭಾವದಿಂದ ಮಹಾನನಿದಾನೆ. ಈ ಅನಂತ ಗುಣ ಸ್ವರೂಪನಾದ ಆತ್ಮನಲ್ಲಿ ನಿಮಗ್ನತೆ ಮಾಡುವುದು ಅದು ಚಾರಿತ್ರವಿದೆ. ಈ ಚಾರಿತ್ರವೇ ನಿಜವಾಗಿ ಮೋಕ್ಷದ ಮಾರ್ಗವಿದೆ. ಮತ್ತು ಈ ಚಾರಿತ್ರದ ಕಾರಣವು ಸಮ್ಯಗ್ದರ್ಶನ - ಜ್ಞಾನವಿದೆ. ಆದುದರಿಂದ ಸಮ್ಯಗ್ದರ್ಶನ - ಜ್ಞಾನ - ಚಾರಿತ್ರದ ಏಕತೆಯು ಅದು ಮೋಕ್ಷಮಾರ್ಗವಿದೆ.

ಭಗವಾನ ಆತ್ಮನು ಅನಂತ ಗುಣಗಳ ಪಿಂಡನಿದ್ದಾನೆ. ಈ ಗುಣಗಳ ಸ್ವಭಾವವು ಪರಿಣಮನ ಮಾಡುವುದು ಅದು ದ್ರವ್ಯದ ಧರ್ಮವಿದೆ - ದ್ರವ್ಯದ ಪರ್ಯಾಯದ ಧರ್ಮವಿದೆ. ಪರಿಣಮನದ ಶಕ್ತಿಯಿಂದ ಪರ್ಯಾಯದ ಪರಿಣಮನವಾಗುತ್ತದೆ ಅದು ದ್ರವ್ಯದ ಪರ್ಯಾಯಧರ್ಮವಿದೆ. ಅದು ವ್ಯವಹಾರದ ವಿಷಯವಿದೆ. ಆದುದರಿಂದ

ಅದು ಆಶ್ರಯ ಮಾಡಲು ಯೋಗ್ಯವಾಗಿಲ್ಲ. ವ್ಯವಹಾರದ ವಿಷಯವೇ ಇಲ್ಲವೆನ್ನುವಂತಿಲ್ಲ, ವಿಷಯವಂತೂ ಇದೆ, ಆದರೆ ಅದು ಆದರಿಸಲು ಯೋಗ್ಯವಾಗಿಲ್ಲ.

ಹದಿನಾಲ್ಕು ಗುಣಸ್ಥಾನ, ಮಾರ್ಗಣಾಸ್ಥಾನ ಮೊದಲಾದವುಗಳ ಪರ್ಯಾಯಗಳು ಆಶ್ರಯ ಮಾಡಲು ಯೋಗ್ಯವಿಲ್ಲದಿರುವುದರಿಂದ ಅವನ್ನು ವ್ಯವಹಾರವೆಂದು ಹೇಳಿದೆ. ಪರ್ಯಾಯವನ್ನು ಗೌಣ ಮಾಡಿ ವ್ಯವಹಾರವೆಂದು - ಅಭೂತಾರ್ಥವೆಂದು ಹೇಳಿದೆ. ಮತ್ತು ದ್ರವ್ಯದ ಪೂರ್ಣ ಧ್ರುವ ಸ್ವರೂಪವನ್ನು ಮುಖ್ಯ ಮಾಡಿ ನಿಶ್ಚಯವೆಂದು ಮತ್ತು ಭೂತಾರ್ಥವೆಂದು ಹೇಳಿದೆ. ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳು ಮೋಕ್ಷಮಾರ್ಗ ರೂಪದ ಪರ್ಯಾಯಗಳಿವೆ. ಪರ್ಯಾಯವೇ ಇಲ್ಲ-ಪರಿಣಮನವೇ ಇಲ್ಲವೆಂದು ಮನ್ನಿಸಿದರೆ ಮೋಕ್ಷಮಾರ್ಗದ ಅಭಾವವಾಗಿ ಹೋಗುವುದು, ಆದರೆ ಹಾಗೆ ಇಲ್ಲ, ಪರ್ಯಾಯಗಳಿವೆ, ಆದರೆ ಅವುಗಳ ಲಕ್ಷ್ಯ ಮಾಡುವುದರಿಂದ ಜೀವದ ಪ್ರಯೋಜನದ ಸಿದ್ಧಿಯಾಗುವುದಿಲ್ಲ, ಆದುದರಿಂದ ಅದನ್ನು ಗೌಣ ಮಾಡಿ ವ್ಯವಹಾರವೆಂದು - ಅಭೂತಾರ್ಥವೆಂದು ಹೇಳಿದೆ. ಮತ್ತು ತ್ರಿಕಾಲ ಧ್ರುವ ಸ್ವಭಾವದ ಆಶ್ರಯ ತೆಗೆದುಕೊಳ್ಳುವುದರಿಂದ ಪ್ರಯೋಜನದ ಸಿದ್ಧಿಯಾಗುತ್ತದೆ. ಆದುದರಿಂದ ಸ್ವಭಾವವನ್ನು ಮುಖ್ಯ ಮಾಡಿ ಭೂತಾರ್ಥವೆಂದು ಹೇಳಿದೆ.

ಜೀವದ ಪ್ರಯೋಜನವು ಶಾಂತಿ ಮತ್ತು ಆನಂದವಿದೆ ಮತ್ತು ಅದು ಸಮ್ಯಗ್ದರ್ಶನ - ಜ್ಞಾನ - ಚಾರಿತ್ರದಿಂದ ಪ್ರಕಟವಾಗುತ್ತದೆ.

ಭಗವಾನ ಆತ್ಮನು ಅನಾದಿ - ಅನಂತ ಸ್ವಯಂ ಸಿದ್ಧವಸ್ತುವಿದ್ದಾನೆ. ಜನ್ಮ - ಮರಣಗಳಿಂದ ರಹಿತನಿದ್ದಾನೆ. ಜಗತ್ತಿನಲ್ಲಿ ಸಂಖ್ಯೆಯ ಅಪೇಕ್ಷೆಯಿಂದ ಅನಂತ ಜೀವರುಗಳಿದ್ದಾರೆ. ಅವರೆಲ್ಲರು ಜಾತಿಯ ಅಪೇಕ್ಷೆಯಿಂದ ಸಮಾನರಿದ್ದಾರೆ. ಆಲೂಗಡ್ಡೆಯ ಅತ್ಯಂತ ಚಿಕ್ಕದಾದ ತುಂಡಿನಲ್ಲಿ ಅನಂತ ಜೀವಗಳಿವೆ ಎಂದರೆ ಇಂದಿನವರೆಗೆ ಎಷ್ಟು ಸಿದ್ಧರಾಗಿದ್ದಾರೆ ಅವರಿಗಿಂತ ಅನಂತ ಗುಣಿತ ಅಧಿಕ ಜೀವಗಳಿವೆ. ಅವೆಲ್ಲ ಜೀವಗಳು ಸ್ವಭಾವದಿಂದ ಸಮಾನವಿವೆ ಮತ್ತು ಪ್ರತಿಯೊಂದು ಜೀವದ ಸತ್ತಾ ಭಿನ್ನ ಭಿನ್ನವಿದೆ. ಸ್ವತಂತ್ರವಿದೆ.

ಎಲೈ ಸೋದರನೇ ! ಹೀಗೆ ಅನಂತಾನಂತ ಪರದ್ರವ್ಯಗಳ ಸತ್ತಾ ಮತ್ತು ಸ್ವಯಂ ನಿನ್ನ ಸತ್ತಾವನ್ನು ಒಂದು ಸಲ ಸ್ವೀಕಾರ ಮಾಡುವ ಸಾಮರ್ಥ್ಯವು ನಿನ್ನ ಒಂದು ಸಮಯದ ಪರ್ಯಾಯದಲ್ಲಿದೆ, ನೀನು ಅದರ ಸ್ವೀಕಾರ ಮಾಡು!

ಭಗವಾನ ಆತ್ಮನು ಯಾವುದೇ ಪರದ್ರವ್ಯದ ಕಾರ್ಯ ಮಾಡುವುದಿಲ್ಲ ಮತ್ತು ಯಾವುದೇ ಪರದ್ರವ್ಯದ ಕಾರ್ಯದ ಕಾರಣನೂ ಇಲ್ಲ, ಅವನಲ್ಲಿ ಇಂಥ ಒಂದು ಅಕಾರ್ಯಕಾರಣ ಶಕ್ತಿಯಿದೆ. ಆದರಿಂದಾಗಿ ಅವನ ಸಮಸ್ತ ಗುಣಗಳು ಕೂಡ ಅಕಾರ್ಯಕಾರಣ ಸ್ವರೂಪವಿವೆ.

ಅಧ್ಯಾತ್ಮದಲ್ಲಿ ಅಂತರ್ಯದ ಮಾತುಗಳನ್ನು ಗ್ರಹಣ ಮಾಡುವ ಸಲುವಾಗಿ ಬಹಳಷ್ಟು ಪುರುಷಾರ್ಥವು ಬೇಕಾಗುವುದು. ಇವಂತೂ ಸರ್ವಜ್ಞ ಭಗವಂತರ ಮನೆಯ ಮಾತುಗಳಿದ್ದು ಇವನ್ನು ತಿಳಿದುಕೊಳ್ಳುವ ಸಲುವಾಗಿ ತೀವ್ರ ಪುರುಷಾರ್ಥವು ಬೇಕಾಗುವುದು. ಧರ್ಮವೇನು ಸಾಧಾರಣ ವಸ್ತುವಿಲ್ಲ, ಇದರ ಫಲದಲ್ಲಿ ಕಳೆದುಹೋದ ಭೂತಕಾಲಕ್ಕಿಂತಲೂ ಅನಂತ ಗುಣಿತವಾದ ಭವಿಷ್ಯಕಾಲದ ಪರ್ಯಾಯಗಳಲ್ಲಿ ಅತೀಂದ್ರಿಯ ಆನಂದದ ಫಲವು ದೊರಕುವಂಥ ಧರ್ಮದ ಮಾತನ್ನೇನು ಹೇಳುವುದು? ಮತ್ತು ಇಂಥ ಧರ್ಮವು ಯಾವುದರ ಆಶ್ರಯದಿಂದ ಪ್ರಕಟವಾಗುವುದು ಆ ದ್ರವ್ಯದ ಮಾತನ್ನೇನು ಹೇಳುವುದು? ಅದರ ಮಹಿಮೆಯು ಸೀಮಾತೀತವಿದೆ.

ಆದರೇನು ಮಾಡುವುದು ! ಅಜ್ಞಾನಿ ಜೀವನಿಗೆ ತನ್ನ ಸ್ವತಂತ್ರ ಮಹಾನ ಸತ್ತಾದ ಮಾತು ರುಚಿಸುವುದೇ ಇಲ್ಲ, ಅನಾದಿ ಕಾಲದಿಂದ ತನ್ನನ್ನು ಶಕ್ತಿಹೀನನೆಂದು ನಂಬಿ ಪರಾಧೀನ ದಶೆಯಲ್ಲಿಯೇ ಉಳಿದಿರುವುದರಿಂದ ಸ್ವತಂತ್ರತೆಯು ರುಚಿಸುವುದಿಲ್ಲ, ಆದರೆ ಪ್ರಿಯ ಮಹಾನುಭಾವನೇ ! ನೀನಂತೂ ಸಿಂಹನಂತೆ ಮಹಾಪರಾಕ್ರಮಿಯಿರುವೆ;ನಿನಗೆ ಈ ಪರಾಧೀನತೆಯು - ಈ ಹೇಡಿತನವು ಶೋಭಿಸುವುದಿಲ್ಲ.

ಆತ್ಮನು ಸ್ವಭಾವದಿಂದ ಅಕರ್ತೃ ಮತ್ತು ಅಭೋಕ್ತೃ ಇದ್ದಾನೆ. ಆತ್ಮನು ಪರದ ಕರ್ತಾ - ಭೋಕ್ತಾನಂತೂ ಇಲ್ಲವೇ ಇಲ್ಲ. ಇಷ್ಟೇ ಏಕೆ ಆತ್ಮನು ಸ್ವಭಾವದಿಂದ ಕೂಡ ರಾಗದ ಕರ್ತಾ - ಭೋಕ್ತಾ ಇಲ್ಲ, ಸೋದರನೇ ! ಮಾತು ಅದ್ಭುತವಿದ್ದು ಅವಶ್ಯವಾಗಿ ತಿಳಿದುಕೊಳ್ಳುವಂತಿದೆ.

ಆತ್ಮನು ರಾಗ ಮಾಡುತ್ತಾನೆನ್ನಬೇಕಾದರೆ ರಾಗವು ಆತ್ಮನ ಸ್ವಭಾವದ ಗಣಿಯಲ್ಲಿ ಬಿದ್ದುಕೊಂಡಿದೆಯೇನು, ರಾಗವು ಆತ್ಮನ ಶಕ್ತಿಯಲ್ಲಿ ವಾಸ ಮಾಡಿದೆಯೇನು? ನಿಜವಾಗಿ ಆತ್ಮನು ರಾಗದ ಕರ್ತೃವಾಗಿದ್ದರೆ ಇಡೀ ದ್ರವ್ಯವು ವಿಕಾರಿಯಾಗಿ ಹೋಗಬೇಕಾಗುವುದು ಆದರೆ ಹಾಗೆ ಇಲ್ಲ. ಆದುದರಿಂದ ಆತ್ಮನು ರಾಗದ ಕರ್ತೃವಿಲ್ಲವೆಂಬುದು ತಾನೇ ಸಿದ್ಧವಾಗಿ ಬಿಡುತ್ತದೆ.

ವಸ್ತುವಿನ ಸ್ವರೂಪವು ಹೇಗೆ ಇದೆ ಹಾಗೆ ಸರ್ವಜ್ಞ ದೇವರು ತಿಳಿಸಿದ್ದಾರೆ; ಅವರೇನು ರಚನೆ ಮಾಡಿಲ್ಲ. ಹೇಗೆ ಸ್ವರೂಪವಿದೆ ಹಾಗೆ ಸರ್ವಜ್ಞರು ತಿಳಿದುಕೊಂಡಿದ್ದಾರೆ, ಹೇಗೆ ತಿಳಿದುಕೊಂಡಿದ್ದಾರೆ ಹಾಗೆ ವಾಣಿಯಲ್ಲಿ ಬಂದು ಬಿಟ್ಟಿದೆ ಮತ್ತು ಹೀಗೆಯೇ ವಸ್ತುವಿನ ಸ್ವರೂಪವಿದೆ.

ಅಯ್ಯಾ ಸೋದರನೇ ! ನೀನು ಆತ್ಮನಿರುವೆಯಲ್ಲವೇ ! ನಿನ್ನಲ್ಲಿ ಮಹಾನ ಪವಿತ್ರತೆಯು ತುಂಬಿಕೊಂಡಿದೆ. ಆ ಪವಿತ್ರತೆಯ ರೂಪದಿಂದ ಪರಿಣಮಿಸಿ ಬಿಡು . ಈ ಪರಿಣಮನವು ವ್ಯವಹಾರವಿದ್ದರೆ ಧ್ರುವವು ಸ್ವಯಂ ನಿಶ್ಚಯವಿದೆ.

ಆತ್ಮನು ಒಂದು ರಜಕಣದ ಕರ್ತೃವು ಕೂಡ ಇಲ್ಲವೆಂದ ಮೇಲೆ ಅವನನ್ನು ಪರ ಜೀವಗಳನ್ನು ರಕ್ಷಿಸುವಂಥವನು, ದಯೆ ಪಾಲಿಸುವಂಥವನು ಅಥವಾ ಪರಜೀವಗಳನ್ನು ಕೊಲ್ಲುವಂಥವನೆಂದು ಹೇಗೆ ಹೇಳುವುದು? ಹೀಗೆ ಹೇಳುವುದೆಂದರೆ ಭಗವಾನ ಆತ್ಮನ ಸಲುವಾಗಿ ಕಲಂಕವಿದೆ. ಯಾವುದು ಸ್ವಭಾವವಿಲ್ಲ ಅದನ್ನು ಸ್ವಭಾವವೆಂದು ಮನ್ನಿಸುವುದೆಂದರೆ ನಿಜವಾಗಿ ಕಲಂಕವಿದೆ. ಈ ಕಲಂಕದ ಫಲವು ಅತ್ಯಂತ ಹಾನಿಕಾರಕವಿದೆ. ಅಯ್ಯಾ ಸೋದರನೇ ! ನೀನು ನಿನಗೆ ಹಾನಿಯಾಗುವಂಥದ್ದನ್ನೇಕೆ ಮನ್ನಿಸುತ್ತಿರುವೆ ?

ಸೋದರನೇ ! ಇವು ಭಗವಂತರ ಸ್ವದೇಶದ ಮಾತುಗಳಿವೆ. ಯಾರಿಗೆ ಪರದೇಶದಿಂದ ಹೊರಗೆ ಬಂದು ನಿಜ ದೇಶದಲ್ಲಿ ಹೋಗುವುದಿದೆ ಅವರ ಸಲುವಾಗಿ ಈ ಮಾತುಗಳಿವೆ. ಭಗವಾನ ಆತ್ಮನು ಅತೀಂದ್ರಿಯ ಆನಂದದ ರಸದಿಂದ ಪರಿಪೂರ್ಣವಾಗಿ ತುಂಬಿ ಹೋಗಿದ್ದಾನೆ. ಇಡೀ ಅಸಂಖ್ಯಾತ ಪ್ರದೇಶಗಳೆಲ್ಲವು ಅತೀಂದ್ರಿಯ ಆನಂದದಿಂದ ತುಂಬಿ ಹೋಗಿವೆ. ಅದರಲ್ಲಿ ಆನಂದವು ಒತ್ತೊತ್ತಾಗಿ ತುಂಬಿಕೊಂಡಿದೆ. ಅದರಲ್ಲಿ ಬೇರೆ ಯಾವುದರ ಪ್ರವೇಶದ ಸಲುವಾಗಿ ಅವಕಾಶವೇ ಇಲ್ಲ. ಆತ್ಮನು ನಿಜವಾಗಿ ಇಂಥ ಅತೀಂದ್ರಿಯ ಆನಂದದ ಭೋಕ್ತೃ ಇದ್ದಾನೆ. ಆದರೆ ಹೀಗೆ ಭೇದ ಮಾಡಿ ಹೇಳುವುದು ಅದು ಕೂಡ ವ್ಯವಹಾರವಿದೆ.

ಆತ್ಮನು ಎಂಥ ವಸ್ತುವಿದ್ದಾನೆ, ಅವನ ಮಹಿಮೆಯು ಯಾವ ಪ್ರಕಾರವಿದೆಯೆಂಬುದರ ಕುರಿತು ಅಜ್ಞಾನಿಯು ಅಂತರ್ಯದಿಂದ ವಿಚಾರವನ್ನೇ ಮಾಡಲಿಲ್ಲ, ಅಯ್ಯಾ ಸೋದರನೇ ! ನೀನು ಆತ್ಮನನ್ನು ಸರಿಯಾಗಿ ತಿಳಿದುಕೊಳ್ಳಲಿಲ್ಲ, ಆ ಆತ್ಮನ ಹೊಟ್ಟೆಯೊಳಗಿಂದ ಪರಮಾತ್ಮನ ಪ್ರಸವವಾಗುತ್ತದೆ. ಆತ್ಮನು ಪರಮಾತ್ಮನಪ್ರಸೂತಿಗೃಹನಿದ್ದಾನೆ. ಪರಮಾತ್ಮನ ಅನಂತ ಪರ್ಯಾಯಗಳು ಆತ್ಮನ ಉದರದಲ್ಲಿ ತುಂಬಿಕೊಂಡಿವೆ. ಯಾವಾಗ ಆತ್ಮನು ಸ್ವಭಾವದಲ್ಲಿ ಏಕಾಕಾರನಾಗುತ್ತಾನೆ ಆಗ ಒಂದರ ನಂತರ ಒಂದು ಪರಮಾತ್ಮನ ಪರ್ಯಾಯಗಳು ಪ್ರಕಟವಾಗಲಾರಂಭಿಸುತ್ತವೆ.

ಒಂದು ಪೂರ್ಣ ಶಾಶ್ವತವಾದ ನಿಜ ತತ್ತ್ವವನ್ನು ಪ್ರಾಪ್ತ ಮಾಡಿಕೊಂಡು ಇಂದೇ ಅವ್ಯಾಕುಲತೆಯಿಂದ ನರ್ತಿಸಿರಿ; ಇಂದೇ ಆತ್ಮನ ಅತೀಂದ್ರಿಯ ಆನಂದ ಅನುಭವಿಸಿರೆಂದು ಪ್ರವಚನಸಾರದ ಕೊನೆಯ ಗಾಥೆಯಲ್ಲಿ ಆಚಾರ್ಯ ಭಗವಂತರು ಹೇಳುತ್ತಾರೆ. ಅವರು ಇನ್ನೂ ಮುಂದುವರೆದು ಹೇಳುವುದೇನೆಂದರೆ ಈ ಶಾಸ್ತ್ರದ ರಚನೆಯು ನಮ್ಮಿಂದ ಆಗಲಿಲ್ಲ. ಇದಂತೂ ಪುದ್ಗಲಮಯ ಶಬ್ದಗಳ ರಚನೆಯಿದೆ. ಆದುದರಿಂದ ಈ ಟೀಕೆಯನ್ನು ಅಮೃತ ಚಂದ್ರ ಸೂರಿಗಳು

ರಚಿಸಿದ್ದಾರೆಂದು ನರ್ತಿಸಬೇಡಿರಿ. ಭಾಷೆಯಲ್ಲಿ ನಿಜ-ಪರಗಳನ್ನು ಹೇಳುವ ಸಾಮರ್ಥ್ಯವಿದೆ ಮತ್ತು ಜ್ಞಾನದಲ್ಲಿ ನಿಜ-ಪರಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯವಿದೆ. 'ಈ ಚೈತನ್ಯವನ್ನು ಚೈತನ್ಯರೂಪವಾಗಿ ಈ ಹೊತ್ತೇ ಅತ್ಯಂತ ಪ್ರಬಲತೆಯಿಂದ ಅನುಭವಿಸಿರಿ!' ಚತುರಪುರುಷರು ಒಳ್ಳೆಯ ಕಾರ್ಯ ಮಾಡುವಲ್ಲಿ ವಿಲಂಬ ಮಾಡುವುದಿಲ್ಲ, ಆದುದರಿಂದ ಭಗವಾನ ಆತ್ಮನು ಯಾವುದರದೂ ಕರ್ತಾ-ಹರ್ತಾ ಇಲ್ಲ, ಕೇವಲ ನೋಡುವಂಥವನು-ತಿಳಿದುಕೊಳ್ಳುವಂಥವನು ಇದ್ದಾನೆಂದು ಸ್ವೀಕಾರ ಮಾಡಿ ಈಗಲೇ ಅತೀಂದ್ರಿಯ ಆನಂದದ ಅನುಭವ ಮಾಡಿಕೊಳ್ಳಿರಿ ! ತಡಮಾಡಬೇಡಿರಿ !!

ಸೋದರನೇ! ಅನಂತ ಕಾಲದಲ್ಲಿ ಅತ್ಯಂತ ದುರ್ಲಭತೆಯಿಂದ ಒಂದಿಷ್ಟು ಸಮಯವು ದೊರಕಿದೆ. ಅಯ್ಯಾ ! ಮನುಷ್ಯ ಭವದ ಕಾಲವು ತೀರ ಅತ್ಯಲ್ಪವಿದೆ; ಇದನ್ನು ನೀನು ಇತರ ಕಾರ್ಯಗಳಲ್ಲಿ ಕಳೆದು ಬಿಟ್ಟರೆ ನಿನ್ನ ಕಲ್ಯಾಣ ಮಾಡಿಕೊಳ್ಳುವ ಸಮಯವು ಹೊರಟು ಹೋಗುವುದು. ಆದುದರಿಂದ ಅನಾದಿಕಾಲದಿಂದ ಪೋಷಿಸಿಕೊಂಡು ಬಂದಿರುವ ಮಿಥ್ಯಾ ಮನ್ನಣೆಯನ್ನು ಬಿಟ್ಟುಕೊಟ್ಟು ಸ್ವಾನುಭವ ಮಾಡಿಕೊಳ್ಳು ! ಹಾಗೆ ಹೇಳಿಯೂ ಇದ್ದಾರೆ -

ಅನುಭವ ಚಿಂತಾಮಣಿ ರತ್ನವಿದೆ ಅನುಭವವಿದೆ ರಸಕೂಪ ।
ಅನುಭವ ಮೋಕ್ಷದ ಮಾರ್ಗವಿದೆ ಅನುಭವ ಮೋಕ್ಷಸ್ವರೂಪ ॥

ಆತ್ಮ ಸ್ವರೂಪದ ಅನುಸರಣೆ ಮಾಡಿದ ಮೇಲೆ ಯಾವ ದಶೆಯಾಗುವುದು ಅದು ಅನುಭವವಿದೆ. ಆದುದರಿಂದ ಪುನಃ ಪುನಃ ಆತ್ಮ ಸ್ವರೂಪದ ಭಾವನೆ ಭಾವಿಸುವುದು. ಅದು ಮುಮುಕ್ಷುವಿನ ಕರ್ತವ್ಯವಾಗಿದೆ. ಆ ಭಾವನೆಯಲ್ಲಿ ನೆಲೆಸುವುದು ಅದು ಚಾರಿತ್ರವಿದೆ. ಆತ್ಮನು ತಾನು ತನ್ನಿಂದ ತನ್ನಲ್ಲಿ ಏಕಾಕಾರವಾಗಿ ಹೋಗುವುದೆಂದರೇನೇ ರತ್ನತ್ರಯವಿದೆ. ಈ ರತ್ನತ್ರಯ ಧರ್ಮವೇ ತನ್ನ ಆತ್ಮನ ಸ್ವಭಾವವಿದೆ.

ಇಂದಿಗೆ ಒಂದು ಸಾವಿರ ವರುಷಗಳ ಮೊದಲು ಆಗಿ ಹೋದ ಆಚಾರ್ಯ ಅಮೃತಚಂದ್ರದೇವರು ಕೇವಲ ಅಮೃತದ ಮಂಥನವನ್ನೇ ಮಾಡುವಂಥವರಿದ್ದರು. ಈ ಆಚಾರ್ಯ ಭಗವಂತರು ಆಗ ನಡೆದಾಡುವ ಸಿದ್ಧರಂತೆಯೇ ಜನರ ಕಣ್ಣಿಗೆ ಕಂಡು ಬರುತ್ತಿರಬಹುದಲ್ಲವೇ ! ಇಂಥ ಆಚಾರ್ಯ ಅಮೃತಚಂದ್ರದೇವರು ಆತ್ಮನ ನಿಶ್ಚಯವಾಗುವುದು ಅದು ಸಮ್ಯಗ್ದರ್ಶನವಿದೆಯೆಂದು, ಆತ್ಮನ ಜ್ಞಾನವು ಅದು ಸಮ್ಯಕ್ ಜ್ಞಾನವಿದೆಯೆಂದು ಮತ್ತು ಆತ್ಮನಲ್ಲಿ ನಿಮಗ್ನವಾಗುವುದು ಅದು ಸಮ್ಯಕ್ಚಾರಿತ್ರವಿದೆಯೆಂದು ಪುರುಷಾರ್ಥ ಸಿದ್ಧ್ಯುಪಾಯದಲ್ಲಿ ಹೇಳಿದ್ದಾರೆ. ಈ ಮೂರರಿಂದ ಕರ್ಮ ಬಂಧನವಾಗುವುದಿಲ್ಲ.

ಈಗ ಆತ್ಮಾನುಭವದಲ್ಲಿ ಸಮಸ್ತ ಗುಣಗಳಿವೆಯೆಂದು ಹೇಳುತ್ತಾರೆ, -

ಜಹಿಂ ಅಪ್ಪಾ ತಹಿಂ ಸಯಲ-ಗುಣ ಕೇವಲಿ ಏಮ ಭಣಂತಿ
ತಿಹಿಂ ಕಾರಣಏ ಜೋಇ ಫುಡು ಅಪ್ಪಾ ವಿಮಲು ಮುಣಂತಿ ॥85॥

ಆತ್ಮನು ಇರುವೆಡೆ ಸಕಲಗುಣ ಇವೆಯೆನ್ನುವರು ಕೇವಲಿ ಜಿನ
ಆತ್ಮನ ತಿಳಿವರು ಯೋಗಿ ಜನ ಅದು ಕಾರಣದಿಂ ನಿಶ್ಚಯದಿ ॥85॥

ಅರ್ಥ :- ಎಲ್ಲಿ ಆತ್ಮನಿದ್ದಾನೆ ಅಲ್ಲಿ ಆವನ ಸಕಲ ಗುಣಗಳಿವೆಯೆಂದು ಕೇವಲೀ ಭಗವಂತರು ಹೇಳುತ್ತಾರೆ. ಆದರಿಂದಾಗಿ ಯೋಗಿ ಸಮೂಹವು ನಿಶ್ಚಯದಿಂದ ನಿರ್ಮಲ ಆತ್ಮನ ಅನುಭವ ಮಾಡುತ್ತಾರೆ.

ಮುನಿರಾಜರು ಕೇವಲೀ ಭಗವಂತರ ಸಾಕ್ಷ್ಯ ಕೊಡುತ್ತ ಮಾತು ಹೇಳುತ್ತಾರೆ. ಯಾವ ಪ್ರಕಾರ ಸ್ವಚ್ಛ ನಿರ್ಮಲವಾದ ನೀರಿನೊಳಗೆ ಆಕಾಶದಲ್ಲಿ ಸ್ಥಿರವಿರುವ ನಕ್ಷತ್ರಗಳು ಕಂಡು ಬರುತ್ತವೆ. ಆ ನಕ್ಷತ್ರಗಳನ್ನು ನೋಡುವ ಸಲುವಾಗಿ ಮುಖ ಮೇಲೆತ್ತಿ ನೋಡಬೇಕಾಗುವುದಿಲ್ಲ; ಅದೇ ಪ್ರಕಾರ ಭಗವಂತರಿಗೆ ತಮ್ಮ ಆತ್ಮನ ಅವಲಂಬನದಿಂದ ಪ್ರಕಟವಾಗಿರುವ

ಕೇವಲಜ್ಞಾನದ ಒಂದು ಸಮಯದ ಪರ್ಯಾಯದಲ್ಲಿ ಮೂರು ಕಾಲ ಮತ್ತು ಮೂರು ಲೋಕಗಳು ತಿಳಿದು ಬರುತ್ತವೆ. ಆದರೆ ಯಾವ ಪ್ರಕಾರ ನೀರಿನಲ್ಲಿ ನಕ್ಷತ್ರಗಳು ಬರುವುದಿಲ್ಲ ಅದೇ ಪ್ರಕಾರ ಜ್ಞಾನದಲ್ಲಿ ಲೋಕಾಲೋಕಗಳು ಬರುವುದಿಲ್ಲ, ಕೇವಲ ಲೋಕಾಲೋಕಗಳ ಸಂಬಂಧದ ಜ್ಞಾನವಾಗುತ್ತದೆ.

ಕೇವಲಜ್ಞಾನದ ಒಂದು ಸಮಯದ ಪರ್ಯಾಯದಲ್ಲಿ ಇಷ್ಟು ಸಾಮರ್ಥ್ಯವಿದೆ. ಇಂಥ ಅನಂತ ಪರ್ಯಾಯಗಳನ್ನು ಧಾರಣ ಮಾಡಿರುವಂಥದು ಒಂದು ಗುಣವಿದೆ. ಮತ್ತು ಇಂಥ ಅನಂತ ಗುಣಗಳ ಪುಂಜನು ಒಬ್ಬ ಆತ್ಮನಿದ್ದಾನೆ. ಅವನ ಮಹಿಮೆಯ ಮಾತುಗಳನ್ನೇನು ಹೇಳುವುದು? ಜನರಿಗೆ ಧರ್ಮವನ್ನೇನೋ ಮಾಡುವುದಿದೆ; ಆದರೆ ಸ್ವಯಂ ಧರ್ಮ ಮಾಡುವಂಥವನು ಹೇಗಿದ್ದಾನೆ, ಅವನ ಮಹಿಮೆಯೆಂಥದಿದೆಯೆಂಬುದರ ಕುರಿತು ಅರಿವಿಲ್ಲ. ಓ ಪ್ರಭೂ ! ಚೈತನ್ಯ ಸಂಪತ್ತು ನಿನ್ನ ಮನೆಯಲ್ಲಿಯೇ ಇದೆ, ಅದನ್ನು ನೀನು ರಕ್ಷಣೆ ಮಾಡು; ಇದುವೇ ನಿನ್ನ ಧರ್ಮವಿದೆ. ಆದರೆ ಸೋದರನೇ ! ಇಂಥ ಮಹಿಮಾವಂತನಾದ ಆತ್ಮನ ಮಹಿಮೆಯು ನಿನಗೆ ಬರುವುದಿಲ್ಲ, ಆದರೆ ರಾಗದ, ಪುಣ್ಯದ, ವೈಭವದ ಮಹಿಮೆಯು ಬರುತ್ತದೆ.

ಪ್ರಶ್ನೆ :- ಪ್ರಭು ! ತಾವು ಇಂಥ ಮಾತುಗಳನ್ನು ಹೇಳುತ್ತಿರುವಾಗ ಕೇಳುತ್ತಿದ್ದಂತೆ ಪ್ರಮೋದ - ಪ್ರಮೋದವೇ ಬಂದು ಬಿಡುತ್ತದೆ.

ಉತ್ತರ :- ಭಗವಾನ ! ನಿನ್ನ ಮನೆಯ ಮಾತಿದೆಯಲ್ಲವೆ ಸೋದರನೇ ! ಇದು ನಿನಗೆ ರುಚಿಸಲೇಬೇಕಾಗುವುದು. ಯಾರೂ ಯಾರಿಗೆ ಏನನ್ನೂ ಮಾಡಿಕೊಡುವುದಿಲ್ಲ, ಮೂರು ಲೋಕದ ಪ್ರಭುವಾದ ತೀರ್ಥಂಕರ ದೇವರು ಕೂಡ ಯಾರಿಗೆ ಆತ್ಮನ ಅಭಿರುಚಿ ಅಥವಾ ದೃಷ್ಟಿ ಮಾಡಿಸುವ ಸಾಧ್ಯತೆಯಿಲ್ಲ, ಸ್ವಯಂ ತಾವೇ ತಮ್ಮ ಅಭಿರುಚಿ - ದೃಷ್ಟಿ - ಜ್ಞಾನ ಮತ್ತು ಅನುಭವ ಮಾಡಿಕೊಳ್ಳುವುದಿದೆ. ಮಹಾವಿದೇಹ ಕ್ಷೇತ್ರದಲ್ಲಿ ಈಗಲೂ ಧರ್ಮಧುರಂಧರರಾದ ತೀರ್ಥಂಕರರು ವಿಹರಿಸುತ್ತಾರೆಂದರೆ ಅಲ್ಲಿನ ಸಮಸ್ತ ಜೀವರುಗಳು ಸಮ್ಯಕ್‌ದೃಷ್ಟಿಯಿರುವರೇನು? ಅಯ್ಯಾ ! ಅಲ್ಲಿ, ಏಳನೆಯ ನರಕಕ್ಕೆ ಹೋಗುವಂಥ ಜೀವರುಗಳು ಇದ್ದಾರೆ ಮತ್ತು ಅಲ್ಲಿ ಮೋಕ್ಷಕ್ಕೆ ಹೋಗುವಂಥ ಜೀವರುಗಳು ಕೂಡ ಇದ್ದಾರೆ. ಇದುವೇ ಪ್ರತಿಯೊಂದು ಜೀವದ ಸ್ವತಂತ್ರತೆಯನ್ನು ತಿಳಿಸಿಕೊಡುತ್ತದೆ.

ಈ ಗಾಥೆಯಲ್ಲಿ ಆಚಾರ್ಯ ಭಗವಂತರು ಹೇಳುವುದೇನೆಂದರೆ ಅಯ್ಯಾ ಸೋದರನೇ ! ಪ್ರಶಂಸೆ ಮಾಡಲು ಯೋಗ್ಯವಾದಂಥ ಸಮಸ್ತ ಒಳ್ಳೊಳ್ಳೆಯ ಗುಣಗಳು ನಿನ್ನ ಆತ್ಮನಲ್ಲಿಯೇ ಇವೆ. ಸಂಯೋಗಗಳಲ್ಲಂತೂ ಇಲ್ಲವೇ ಇಲ್ಲ, ಆದರೆ ನಿನ್ನ ಒಂದು ಸಮಯದ ಪರ್ಯಾಯದಲ್ಲಿ ಕೂಡ ಎಲ್ಲ ಗುಣಗಳು ಬಂದು ಬಿಡುವುದಿಲ್ಲ, ಶ್ರದ್ಧೆ, ಜ್ಞಾನ, ಆನಂದ, ಶಾಂತಿ, ಸ್ವಚ್ಛತೆ, ಪರಮೇಶ್ವರತೆ, ಕರ್ತಾ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣ, ಭಾವ, ಅಭಾವ ಮೊದಲಾದ ಅನಂತ ಗುಣಗಳು ಎಲ್ಲಿ ಆತ್ಮನಿದ್ದಾನೆ ಅಲ್ಲಿ ಅಸಂಖ್ಯಾತ ಪ್ರದೇಶಗಳಲ್ಲಿ ಒತ್ತೊತ್ತಾಗಿ ತುಂಬಿಕೊಂಡಿವೆ. ಓರ್ವ ಭಗವಾನ ಆತ್ಮನನ್ನು ಆಂತರ್ಯದ ದೃಷ್ಟಿಯಿಂದ ಅನುಭವಿಸುತ್ತಿದ್ದಂತೆಯೇ ಅವನಲ್ಲಿ ಇರುವಂಥ ಅನಂತ ಗುಣಗಳೆಲ್ಲವು ಒಟ್ಟಿಗೆ ಅನುಭವದಲ್ಲಿ ಬಂದು ಬಿಡುತ್ತವೆ.

ನಾಲ್ಕನೆಯ ಗುಣಸ್ಥಾನದಲ್ಲಿ ಸ್ವರೂಪಾಚರಣ ಚಾರಿತ್ರವಿರುವುದಿಲ್ಲವೆಂದು ಅದೆಷ್ಟೋ ಜನರು ಹೇಳುತ್ತಾರೆ. ಆದರೆ ಸೋದರರೇ! ಒಂದು ವೇಳೆ ಸ್ವರೂಪಾಚರಣ ಚಾರಿತ್ರವಿಲ್ಲದಿದ್ದರೆ ಆ ಚಾರಿತ್ರದ ಅಂಶವಿಲ್ಲದೆ ಆನಂದದ ಅಂಶವು ಕೂಡ ಬರಲಾರದು ಮತ್ತು ಅನಂತ ಆನಂದದ ಧಾರಕವಾದಂಥ ದ್ರವ್ಯ ದೃಷ್ಟಿಯಲ್ಲಿ - ಪ್ರತೀತಿಯಲ್ಲಿ ಬರುವುದರ ಫಲವಾದರೂ ಏನೆಂಬುದನ್ನು ಒಂದಿಷ್ಟು ಯೋಚನೆ ಮಾಡಬೇಕು ! ಸಮ್ಯಗ್ದರ್ಶನವೆಂದರೆ ಅದು ಸಮಸ್ತ ಗುಣಗಳ ಅಂಶವನ್ನು ಪ್ರಕಟಮಾಡಿ ಅನುಭವಿಸುವಂಥ ವಸ್ತುವಿದೆ. ಅದಕ್ಕಾಗಿಯೇ ಭಗವಂತರ ಜ್ಞಾನದಲ್ಲಿ ಎಷ್ಟು ಗುಣಗಳು ಬಂದಿವೆ ಅವೆಲ್ಲ ಗುಣಗಳ ಅಂಶವು ಅದು ಸಮ್ಯಗ್ದರ್ಶನವಿದೆಯೆಂದು ಹೇಳಲಾಗಿದೆ. ಅವೆಲ್ಲ ಗುಣಗಳ ಆಂಶಿಕ ಅನುಭವವು ಸಮ್ಯಕ್‌ದೃಷ್ಟಿಗೆ ಆಗುತ್ತದೆ.

ಯಾವ ಪ್ರಕಾರ ಮಾವಿನ ಹಣ್ಣನ್ನು ಗ್ರಹಣ ಮಾಡುತ್ತಿರುವಂತೆಯೇ ಅದರ ಸ್ಪರ್ಶ - ರಸ ಮೊದಲಾದ ಸಮಸ್ತ ಗುಣಗಳ ಗ್ರಹಣವಾಗಿ ಹೋಗುತ್ತದೆ. ಅದೇ ಪ್ರಕಾರ ಆತ್ಮನನ್ನು ಗ್ರಹಣ ಮಾಡುತ್ತಿರುವಂತೆಯೇ ಅವನ ಸಮಸ್ತ ಗುಣಗಳ ಗ್ರಹಣವಾಗಿ ಹೋಗುತ್ತದೆ. ಅದರ ಹೆಸರು ಸ್ವಾನುಭೂತಿಯೆಂದು ಹೇಳಿರಿ, ಸಮ್ಯಗ್ದರ್ಶನವೆಂದು ಹೇಳಿರಿ ಅಥವಾ ಧರ್ಮವೆಂದು ಹೇಳಿರಿ ಎಲ್ಲವೂ ಒಂದೇ ಇದೆ.

ಆತ್ಮನು ಅನಂತ ಗುಣ ಸಂಪನ್ನನಾದ ಒಂದು ವಸ್ತುವಿದ್ದಾನೆ. ಅಂತರ್ಯದ ದೃಷ್ಟಿ ಮಾಡಿ ಅವನ ಅನುಭವ ಮಾಡಿದರೆ ಓರ್ವ ಆತ್ಮನ ಗ್ರಹಣದಲ್ಲಿ ಅನಂತ ಗುಣಗಳ ಗ್ರಹಣವಾಗಿ ಹೋಗುತ್ತದೆ.

ಭಗವಾನ ಆತ್ಮನು ಒಂದು ಸಮಯದಲ್ಲಿ ಅನಂತ ಗುಣರೂಪನಾದ ವಸ್ತು ಇದ್ದಾನೆ. ಅನಂತ ಗುಣಗಳೆಂದರೆ ಆಕಾಶ ಪ್ರದೇಶಗಳಿಂದ ಅನಂತ ಗುಣಿತವಾದ ಗುಣಗಳು ಪ್ರತಿಯೊಬ್ಬ ಆತ್ಮನಲ್ಲಿ ಇವೆ.

ಆಕಾಶದ ಪ್ರದೇಶಗಳು ಅನಂತವಿವೆ. ಆ ಅನಂತವೆಂದರೆ ಎಷ್ಟೆಂಬುದನ್ನು ಹೇಳುತ್ತಾರೆ. ಪ್ರತಿ ಆರು ತಿಂಗಳು ಎಂಟು ಸಮಯದಲ್ಲಿ ಆರು ನೂರಾ ಎಂಟು ಜೀವರುಗಳು ಮೋಕ್ಷದಲ್ಲಿ ಹೊರಟು ಹೋಗುತ್ತಾರೆ. ಇಂದಿನವರೆಗೆ ಎಷ್ಟು ಜೀವರುಗಳು ಮುಕ್ತರಾಗಿದ್ದಾರೆ ಅವರಿಗಿಂತ ಅನಂತ ಗುಣಿತವಾದ ಜೀವರುಗಳು ಒಂದು ನಿಗೋದದ ಶರೀರದಲ್ಲಿದ್ದಾರೆ. ಅವರೆಲ್ಲರು ಸೇರಿ ಸಿದ್ಧರಿಗಿಂತ ಅನಂತ ಗುಣಿತವಾದ ಜೀವರುಗಳಿದ್ದಾರೆ. ಜೀವರಿಗಿಂತ ಅನಂತ ಗುಣಿತವಾಗಿ ಪುದ್ಗಲಗಳಿವೆ. ಈ ಪುದ್ಗಲಗಳಿಂದ ಅನಂತ ಗುಣಿತವಾಗಿ ಮೂರು ಕಾಲದ ಸಮಯಗಳಿವೆ. ಆ ಮೂರು ಕಾಲದ ಸಮಯಗಳಿಂದ ಅನಂತ ಗುಣಿತವಾಗಿ ಆಕಾಶದ ಪ್ರದೇಶಗಳಿವೆ. ಆ ಆಕಾಶ ಪ್ರದೇಶಗಳಿಂದ ಅನಂತ ಗುಣಿತವಾದ ಗುಣಗಳು ಒಂದೊಂದು ಜೀವದಲ್ಲಿ ಇವೆ.

ಪ್ರತಿಯೊಂದು ಜೀವದಲ್ಲಿ ಅನಂತಾನಂತ ಗುಣಗಳಿವೆಯೆಂದು ಭಗವಂತರು ಹೇಳುತ್ತಾರೆ. ಯಾವ ದೋಷಗಳು ಕಂಡು ಬರುತ್ತವೆ ಅವಂತೂ ಯಾವುದೇ ಗುಣದ ಯಾವುದೇ ಒಂದು ಪರ್ಯಾಯದಲ್ಲಿ ಅಲ್ಪ ದೋಷಗಳಿವೆ. ಅನಂತ ಗುಣಗಳಲ್ಲಿ ದೋಷವಿಲ್ಲ, ಗುಣಗಳಂತೂ ಅನಂತಾನಂತವಿವೆ. ಅವುಗಳಲ್ಲಿ ಪ್ರತಿಯೊಂದು ಗುಣವು ಆತ್ಮನ ಅಸಂಖ್ಯಾತ ಪ್ರದೇಶಗಳಲ್ಲಿ ವ್ಯಾಪಕವಿವೆ.

ಎಲ್ಲಿ ಆಕಾಶದ ಕೊನೆಯೇ ಇಲ್ಲ! ಎಷ್ಟು ಬೇಕಾದಷ್ಟು ಹೋದರೂ ಹೋಗಿ ನೋಡಿದರೂ ಎಲ್ಲಿ ಆಕಾಶದ ಕೊನೆಯೇ ಕಂಡು ಬರುವುದಿಲ್ಲ! ಈ ಮಾತನ್ನು ನಾಸ್ತಿಕರು ಕೂಡ ಸ್ವೀಕಾರ ಮಾಡಬೇಕೆನ್ನುವಂತಿದೆ. ಅಂತರ್ಯದಲ್ಲಿ ಇಂಥ ವಸ್ತುವಿನ ವಿಶ್ವಾಸವು ಮೂಡಿ ಬರಬೇಕಾಗುವುದು. ಕೇವಲ ಧಾರಣಾದಲ್ಲಿ, ವಿಚಾರದಲ್ಲಿ ಅಥವಾ ಕ್ಷಯೋಪಶಮದಲ್ಲಿ ಸ್ವೀಕಾರ ಮಾಡುವ ಮಾತ್ರದಿಂದ ನಡೆಯಲಾರದು. ಅನಂತ ಗುಣಗಳ ಏಕರೂಪನಾದಂಥ ಆತ್ಮನನ್ನು ದೃಷ್ಟಿಯಲ್ಲಿ ತಂದುಕೊಳ್ಳುವುದರಿಂದ, ಜ್ಞಾನದಲ್ಲಿ ಜ್ಞೇಯಮಾಡುವುದರಿಂದ, ಚಾರಿತ್ರದಲ್ಲಿ ಅವನ ಆಶ್ರಯ ತೆಗೆದುಕೊಳ್ಳುವುದರಿಂದ ಅನಂತ ಗುಣಗಳ ಪರ್ಯಾಯವು ಒಂದು ಸಮಯದಲ್ಲಿ ಪ್ರಕಟವಾಗುತ್ತದೆ. ಅನಂತ ಗುಣಗಳ ಸಮುದಾಯವೆನ್ನಿರಿ ಅಥವಾ ಭಾವಸಮುದಾಯವೆನ್ನಿರಿ, ಇಂಥ ತನ್ನ ಆತ್ಮನ ಪೋಷಣೆಯು ಅಂತರ್ಯದಲ್ಲಿ ಆಗಬೇಕಾಗುವುದು. ಏಕಸ್ವರೂಪನಾದ ಭಗವಾನ ಆತ್ಮನಲ್ಲಿ ಶ್ರದ್ಧೆ, ಜ್ಞಾನ, ಚಾರಿತ್ರ, ಶಾಂತಿ ಸ್ವಚ್ಛತೆ, ಪ್ರಭುತೆ, ವಿಭುತೆ ಮೊದಲಾದ ಅನಂತ ಗುಣಗಳ ಪರ್ಯಾಯಗಳು ಒಟ್ಟಿಗೆ ಪ್ರಕಟವಾಗುತ್ತವೆ. ಅದಕ್ಕಾಗಿಯೇ 'ಸರ್ವಗುಣಾಂಶವು ಅದು ಸಮ್ಯಕ್ತ್ವ'ವೆಂದು ಹೇಳಲಾಗುತ್ತದೆ.

ಪ್ರಭು! ನಿನ್ನಲ್ಲಿ ಅನಂತ ಗುಣಗಳಿವೆ; ಅವನ್ನು ನೀನು ಪರದಲ್ಲಿನ ಹಾಗೂ ರಾಗದಲ್ಲಿನ ಪ್ರೀತಿಯನ್ನು ತೊಲಗಿಸಿ ಪ್ರತೀತಿಯಲ್ಲಿ ತಂದುಕೊಂಡರೆ, ಅನುಭವದಲ್ಲಿ ತಂದುಕೊಂಡರೆ ನಿನ್ನ ಪ್ರತೀತಿಯಲ್ಲಿ ಅನಂತ ಗುಣಗಳ ಸ್ವರೂಪನಾದ ಒಬ್ಬ ಆತ್ಮನ ಶ್ರದ್ಧೆಯಾಗುವುದು. ಅನಂತ ಗುಣಗಳ ಅಂಶಿಕ ಅನುಭವವಾಗುವುದೆಂದು ಕೇವಲೀ ಭಗವಂತರು ಹೇಳುತ್ತಾರೆ.

ಆದರೆ ಅನಾದಿಯಿಂದ ಅಜ್ಞಾನಿ ಜೀವನು ಪರದ್ರವ್ಯ ಮತ್ತು ರಾಗಾದಿಗಳ ಪ್ರೀತಿಯಲ್ಲಿ ಸಿಕ್ಕಿ ಬಿದ್ದು ಅನಂತ ಗುಣಗಳ ಪಿಂಡರೂಪನಾದ ಭಗವಾನ ಆತ್ಮನ ಅನಾದರ ಮಾಡಿದ್ದಾನೆ, ತಿರಸ್ಕಾರ ಮಾಡಿದ್ದಾನೆ, ಅದರದು ಅವನಿಗೆ ಪ್ರಜ್ಞೆಯಿಲ್ಲ.

ಒಂದೊಂದು ಗುಣವನ್ನು ಗ್ರಹಣ ಮಾಡುವುದರಲ್ಲಿ ಇಡೀ ಆತ್ಮನ ಗ್ರಹಣವಾಗುವುದಿಲ್ಲ, ಆದರೆ ಅಖಂಡ ಅಭೇದ ಆತ್ಮನ ಗ್ರಹಣದಲ್ಲಿ ಅನಂತ ಗುಣಗಳ ಗ್ರಹಣವಾಗಿ ಹೋಗುತ್ತದೆ.

ಯಾವುದೇ ರೀತಿಯಿಂದ ಭಾಷೆಯಲ್ಲಿ ಬಂದು ಬಿಡುವಂತೆ ವಸ್ತುವಿಲ್ಲ. ಅನಂತಾನಂತ ಗುಣಗಳ ಏಕಸ್ವರೂಪನಾದ ಪ್ರತ್ಯಕ್ಷ ಪರಮಾತ್ಮನೇ ನಾನಿದ್ದೇನೆಂದು ಮಹಿಮೆ ತಂದುಕೊಂಡು ಅಂತರ್ಯದಲ್ಲಿ ಪ್ರವೇಶಿಸಿದರೆ ಅವನಿಗೆ ವಸ್ತುವಿನ ಅನುಭವವು ಬಂದು ಬಿಡುವುದು.

ಯಾವ ಪ್ರಕಾರ ಚಿನ್ನವು ಕಾವಿ ಬಣ್ಣದಿಂದ ಶೋಭಿಸುತ್ತದೆ ಅದೇ ಪ್ರಕಾರ ಭಗವಾನ ಆತ್ಮನು ತನ್ನ ಉಗ್ರ ದೃಷ್ಟಿಯಿಂದ ಆತ್ಮನನ್ನು ಹಿಡಿದುಕೊಳ್ಳುತ್ತಾನೆ. ಆಗಂತೂ ಅತೀಂದ್ರಿಯ ಆನಂದದ ಪ್ರತಪನದಿಂದ ಪರಿಶೋಭಿಸುತ್ತಾನೆ. ಮತ್ತು ಬಾಹ್ಯದಲ್ಲಿ ಇಚ್ಛೆಯ ನಿರೋಧವಾಗುತ್ತದೆ ಅದರ ಹೆಸರು ತಪಸ್ಸು ಇದೆ. ಅದೇ ಸಮಯದಲ್ಲಿ ರಾಗ - ದ್ವೇಷಗಳ ಅಭಾವವಾಗುವುದರಿಂದ ನಿಶ್ಚಯ ಅಹಿಂಸಾವ್ರತವು ಕೂಡ ಪ್ರಕಟವಾಗಿ ಬಿಡುತ್ತದೆ ದಯೆಯ ಪರಿಣಾಮವು ಅದು ವಾಸ್ತವಿಕ ಅಹಿಂಸಾವ್ರತವಲ್ಲ. ಆದರೆ ಪರಮಾರ್ಥ ಸ್ವಭಾವದ ಲಕ್ಷ್ಯದಿಂದ ರಾಗರಹಿತ ವೀತರಾಗ ಪರಿಣಾಮವಾಗುವುದು ಅದು ನಿಜವಾದ ಅಹಿಂಸಾವ್ರತವಿದೆ.

ಆತ್ಮನು ಯಾವಾಗ ಪರದ ಲಕ್ಷ್ಯದಿಂದ ವಿಕಲ್ಪದಲ್ಲಿ ಹೊರಟು ಹೋಗುತ್ತಾನೆ, ಆಗ ನಿರ್ವಿಕಲ್ಪ ಸ್ವಭಾವದ ಹಿಂಸೆಯಾಗುತ್ತದೆ. ಆದುದರಿಂದ ಪರದ ದಯೆಯ ಭಾವದಲ್ಲಿ ಕೂಡ ತನ್ನ ಸ್ವಭಾವದ ಹಿಂಸೆಯಾಗುತ್ತದೆ, ಆದರೆ ಜಗತ್ತಿನ ಜನರ ಮನ್ನಣೆಯು ಮಾತ್ರ ಹೀಗಿದೆ -

> **ದಯಾ ಧರಮ ಕಾ ಮೂಲ ಹೈ ಪಾಪ ಮೂಲ ಅಭಿಮಾನ ।**
> **ತುಲಸೀ ದಯಾ ನ ಛೋಡಿಯೆ ಜಬತನ ಘಟಮೆ ಪ್ರಾಣ ॥**

ಇಲ್ಲಿಯಂತೂ ಸರ್ವಜ್ಞ ಪರಮೇಶ್ವರರು ಹೇಳಿರುವ ಈ ಆತ್ಮನ ಅಂತರದೃಷ್ಟಿ ಮಾಡಿ ಏಕಾಕಾರವಾಗುವುದು, ಅನುಭವ ಮಾಡಿಕೊಳ್ಳುವುದು ಅದುವೇ ಸತ್ಯ ದಯೆಯಿದೆಯೆಂದು ಹೇಳುತ್ತಾರೆ. ಪರದ ದಯೆಯನ್ನಂತೂ ಜೀವನು ಪಾಲಿಸುವ ಸಾಧ್ಯತೆಯೇ ಇಲ್ಲ, ಏಕೆಂದರೆ ಪರದ್ರವ್ಯದ ಪರ್ಯಾಯವನ್ನು ಆತ್ಮನು ಮೂರು ಕಾಲದಲ್ಲಿ ಎಂದೂ ಮಾಡುವ ಸಾಧ್ಯತೆಯೇ ಇಲ್ಲ. ಆತ್ಮನು ಪರದ್ರವ್ಯದ ಪರ್ಯಾಯವನ್ನು ಮಾಡಬೇಕಾದರೆ ಆ ಪರದ್ರವ್ಯವು ವರ್ತಮಾನ ಪರ್ಯಾಯದಿಂದ ರಹಿತವಿದೆಯೇನು ? ಆದರೆ 'ಯಾವುದೇ ಪದಾರ್ಥವು ಯಾವುದೇ ಸಮಯದಲ್ಲಿ ಪರ್ಯಾಯದಿಂದ ರಹಿತವಿರುವುದಿಲ್ಲ 'ವೆಂಬುದು ಮಹಾಸಿದ್ಧಾಂತವಿದೆ.

ಸತ್ ಪರಮೇಶ್ವರನಾದ ಭಗವಾನ ಆತ್ಮನ ದೃಷ್ಟಿ ಮಾಡುತ್ತಿರುವಂತೆಯೇ ಸತ್ಯ ವ್ರತವು ಪ್ರಕಟವಾಗುತ್ತದೆ. ಮತ್ತು ಅನಂತ ಗುಣರೂಪನಾದ ಭಗವಾನ ಆತ್ಮನ ಅನುಭವವಾಗುತ್ತಿರುವಂತೆಯೇ ಎಂದರೆ ತಮ್ಮ ಸ್ವಭಾವದ ಸ್ವೀಕಾರವಾಗುತ್ತಿರುವಂತೆಯೇ ರಾಗದ ಒಂದು ಕಣದ ಗ್ರಹಣ ಕೂಡ ಮಾಡದಿರುವುದು ಅದು ನಿಜವಾದ ಅಚೌರ್ಯವ್ರತವಿದೆ.

> **ಜಹಾಂ ಚೇತನ ತಹಾಂ ಅನಂತಗುಣ ಕೇವಲೀ ಬೋಲೆ ಏಮ ।**
> **ಪ್ರಕಟ ಅನುಭವ ಆಪನೋ ನಿರ್ಮಲ ಕರೋ ಸಪ್ರೇಮ ।**
> **ಚೇತನ ಪ್ರಭು ! ಚೈತನ್ಯ ಸಂಪದಾ ಲೇ ತಾರಾ ಧಾಮ ಮಾ ॥**

ಚೈತನ್ಯ ಸಂಪತ್ತು ವೈಕುಂಠದಲ್ಲಿ ಅಥವಾ ಸಿದ್ಧಶಿಲೆಯಲ್ಲಿ ಇಲ್ಲ. ಚೈತನ್ಯ ಸಂಪತ್ತಂತೂ ಪ್ರಭು ! ನಿನ್ನ ಸ್ವಭಾವ ನಿಲಯದಲ್ಲಿಯೇ ತುಂಬಿಕೊಂಡಿದೆ. ಜ್ಞಾನಿಗಳು ಆತ್ಮನ ಪರಮ ಬ್ರಹ್ಮಸ್ವರೂಪನಾದ ತಮ್ಮ ಆತ್ಮನಲ್ಲಿ ವಿಹಾರ ಮಾಡುತ್ತಾರೆ ಎಂದರೆ ಬ್ರಹ್ಮಾನಂದನಾದ ತನ್ನ ಭಗವಂತನಲ್ಲಿ ಏಕಾಕಾರರಾಗುತ್ತಾರೆ. ಆಗ ನಿಶ್ಚಯ ಬ್ರಹ್ಮಚರ್ಯ ವ್ರತವು ಪ್ರಕಟವಾಗುತ್ತದೆ. ಅದನ್ನು ನಿಶ್ಚಯ ಬ್ರಹ್ಮವ್ರತವೆಂದೂ ಹೇಳುತ್ತಾರೆ.

ಅನಂತ ಗುಣಗಳ ಪಿಂಡಸ್ವರೂಪನಾದ ಆತ್ಮನಲ್ಲಿ ಲೀನವಾಗುತ್ತಿರುವಂತೆಯೇ ಎಂದರೆ ಅಸಂಗ ಭಾವದಲ್ಲಿ ವಿಹಾರ ಮಾಡುತ್ತಿರುವಂತೆಯೇ ಸಮಸ್ತ ವಿಭಾವಗಳ ಹಾಗೂ ಪರಪದಾರ್ಥಗಳ ಆಸಕ್ತಿಯು ಹೊರಟು ಹೋಗುತ್ತದೆ. ಅದನ್ನು ಅಪರಿಗ್ರಹ ವ್ರತವೆಂದು ಹೇಳುತ್ತಾರೆ.

ಆತ್ಮನು ತನ್ನ ಆತ್ಮ ಸ್ವಭಾವದಲ್ಲಿ ರಾಗ-ದ್ವೇಷಗಳಿಂದ ರಹಿತನಾಗಿ ಸ್ಥಿರವಾಗುವುದನ್ನು ನಿಶ್ಚಯ ಸಾಮಾಯಿಕವೆಂದು ಹೇಳುತ್ತಾರೆ.

ಅಯ್ಯಾ ಸೋದರನೇ ! ನಿನಗೆ ನಿನ್ನ ಗುಣಗಳನ್ನು ಶೋಧಿಸುವ ಸಲುವಾಗಿ ಬೇರೆಕಡೆಗೆ ಹೋಗಬೇಕೆನ್ನಬೇಕಾದರೆ ನಿನ್ನ ಕ್ಷೇತ್ರದಲ್ಲಿ ಗುಣಗಳ ಕೊರತೆಯೆಲ್ಲಿದೆ ! ಭಗವಾನ ಆತ್ಮನು ಅನಂತ ಗುಣಗಳ ಸಂಗ್ರಹಾಲಯನಿದ್ದಾನೆ. ಅಯ್ಯಾ ! ಕೇವಲೀ ಭಗವಂತರು ಕೂಡ ಒಂದು ವೇಳೆ ಆತ್ಮನ ಅನಂತ ಗುಣಗಳ ವರ್ಣನೆ ಮಾಡಿದರೂ ಕೂಡ ಕೋಟ್ಯಂತರ ಪೂರ್ವ ಆಯುಷ್ಯದ ಸ್ಥಿತಿಯಲ್ಲಿ ಕೂಡ ಸಂಪೂರ್ಣ ವರ್ಣನೆ ಮಾಡುವ ಸಾಧ್ಯತೆಯಿಲ್ಲ.

ಆತ್ಮನ ದೃಷ್ಟಿ ಮತ್ತು ಅನುಭವ ಮಾಡುತ್ತಿರುವಂತೆಯೇ ಭೂತಕಾಲದ ಕರ್ಮಗಳ ನಿವೃತ್ತಿಯಾಗುತ್ತದೆ ಎಂದರೆ ಕರ್ಮಗಳು ಸ್ವಯಂ ನಿರ್ಜರೆಗೆ ಪ್ರಾಪ್ತವಾಗುತ್ತವೆ, ಅದರ ಹೆಸರು ಪ್ರತಿಕ್ರಮಣವಿದೆ. ಮತ್ತು ಭವಿಷ್ಯದಲ್ಲಿ ಸಂಭವಿಸುವಂಥ ರಾಗ ಮೊದಲಾದ ಭಾವಗಳ ತ್ಯಾಗವಾಗುತ್ತದೆ ಅದು ನಿಶ್ಚಯ ಪ್ರತ್ಯಾಖ್ಯಾನವಿದೆ. ಈ ಪ್ರಕಾರ ಪಂಚಮಹಾವ್ರತ, ಮೂರು ಗುಪ್ತಿ ಮೊದಲಾದ ಭಾವಗಳು ಒಬ್ಬ ಆತ್ಮನ ಅನುಭವದಲ್ಲಿ ಸಮಾವೇಶವಾಗಿ ಹೋಗುತ್ತವೆ. ಏಕೆಂದರೆ ಭಗವಾನ ಆತ್ಮನ ಅಂತರ್ಯ ಸ್ವರೂಪದ ಆಶ್ರಯ ಮಾಡಿದರೆ ಯಾವ ಅವಸ್ಥೆಯು ಪ್ರಾಪ್ತವಾಗುತ್ತದೆ ಅದರಲ್ಲಿ ಯಾವುದರ ಕೊರತೆಯು ಉಳಿಯುವುದು? ಸಮಸ್ತ ಗುಣಗಳ ಪರ್ಯಾಯದ ಪರಿಣಮನವಾಗಿ ಹೋಗುತ್ತದೆ.

ಚಿದಾನಂದ ನಿಜಾತ್ಮ ಸ್ವಭಾವದ ದೃಷ್ಟಿ ಅನುಭವ ಮಾಡುವುದೆಂದರೇನೇ ಭಗವಂತನ ಸ್ತುತಿಯಿದೆ. 'ಶರೀರ, ಮನಸ್ಸು, ವಾಣಿ, ವಿಕಲ್ಪ, ರಾಗ ಮೊದಲಾದವುಗಳಿಂದ ರಹಿತನಾದ ತನ್ನ ಪರಮಾತ್ಮ ಸ್ವರೂಪದಲ್ಲಿ ನಿಮಗ್ನತೆ ಮಾಡುವುದೇ ಕೇವಲಿಯ ಸ್ತುತಿಯಿದೆ 'ಯೆಂದು ಸಮಯಸಾರದಲ್ಲಿ ಭ. ಕುಂದಕುಂದಾಚಾರ್ಯ ದೇವರು ಶಿಷ್ಯನಿಗೆ ಕೇವಲಿಯ ಸ್ತುತಿಯ ಸ್ವರೂಪ ತಿಳಿಸಿಕೊಡುತ್ತ ಹೇಳಿದ್ದಾರೆ. ಮತ್ತು ಇದನ್ನು ನಾವು ಹೇಳುವುದಿಲ್ಲ, ಆದರೆ ಸರ್ವಜ್ಞ ಭಗವಂತರೇ ಹೇಳಿದ್ದಾರೆಂದು ಹೇಳುತ್ತಾರೆ. ಅದಕ್ಕಾಗಿಯೇ ಇಲ್ಲಿ ಕೂಡ 'ಕೇವಲೀ ಬೋಲೆ ಏಮ' ಎಂದು ಹೇಳಿದ್ದಾರೆ.

ಪೂರ್ಣಾನಂದ ಸ್ವರೂಪನಾದ ಭಗವಾನ ಆತ್ಮನ ಆರಾಧನೆ ಮಾಡುವುದು, ಸೇವೆ ಮಾಡುವುದು, ಸ್ವಭಾವ ಸನ್ಮುಖತೆ ಮಾಡುವುದು ಇದುವೇ ನಿಜವಾದ ವಿನಯವಿದೆ ಮತ್ತು ಇದುವೇ ನಿಜವಾಗಿ ಗುರುಗಳ ವಂದನೆಯಿದೆ. ಎಲ್ಲಿಯವರೆಗೆ ನಿಶ್ಚಯ ಸ್ವರೂಪದಲ್ಲಿ ಪೂರ್ಣ ಲೀನತೆಯಾಗುವುದಿಲ್ಲ ಅಲ್ಲಿಯವರೆಗೆ ಮಧ್ಯದಲ್ಲಿ ವ್ಯವಹಾರವು ಬಂದಲ್ಲದೆ ಇರಲಾರದು. ಭಕ್ತಿ, ಸ್ತುತಿ, ವಂದನೆ, ಪೂಜೆ ಮೊದಲಾದವುಗಳ ಭಾವಗಳು ಬರುತ್ತವೆ, ಆದರೆ ಅವುಗಳ ಮರ್ಯಾದೆಯು ಕೇವಲ ಪುಣ್ಯ ಬಂಧಕ್ಕೆ ಸೀಮಿತವಿದೆ. ವಸ್ತುವಿನ ಸ್ವರೂಪದಲ್ಲಿ ಆ ಭಾವಗಳು ಸಮಾವೇಶವಾಗುವ ಸಾಧ್ಯತೆಯಿಲ್ಲ.

ವ್ಯವಹಾರವಿದ್ದರೆ ನಿಶ್ಚಯವಿರುತ್ತದೆಯೆಂಬುದಾಗಿಲ್ಲ. ರಾಗದ ಮಂದತೆಯಿದ್ದರೆ ಅರಾಗ ಪರಿಣಾಮವಾಗುತ್ತದೆಯೆಂಬುದಾಗಿಲ್ಲ. ಎಲ್ಲಿಯವರೆಗೆ ಸ್ವಭಾವದ ಪೂರ್ಣ ಆಶ್ರಯ ತೆಗೆದುಕೊಳ್ಳುವುದಿಲ್ಲ ಅಲ್ಲಿಯವರೆಗೆ ಪರಾಶ್ರಿತವಾದ ವ್ಯವಹಾರವು ಬಂದಲ್ಲದೆ ಇರುವುದಿಲ್ಲ, ಆ ವ್ಯವಹಾರವು ಆ ಸಮಯದಲ್ಲಿ ತಿಳಿದುಕೊಂಡುದು

ಪ್ರಯೋಜನವುಳ್ಳದ್ದಿದೆ. ವ್ಯವಹಾರ ಮತ್ತು ನಿಶ್ಚಯ ಇವೆರಡರ ದಿಶೆಗಳು ಭಿನ್ನವಿವೆ, ಇವೆರಡರ ಫಲಗಳು ಭಿನ್ನವಿವೆ ಮತ್ತು ಇವೆರಡರ ಭಾವಗಳು ಕೂಡ ಭಿನ್ನಭಿನ್ನವಿವೆ.

ಸೋದರನೇ ! ನೀನು ಶುದ್ಧಾತ್ಮನಿರುವೆ. ನಿನಗೆ ಎಲ್ಲಿ ಒಳ್ಳೆಯದೆನಿಸದಿದ್ದರೆ, ನೆಮ್ಮದಿಯೆನಿಸದಿದ್ದರೆ ನಿನಗೆ ಅಂತರ್ಯದಲ್ಲಿ ಒಳ್ಳೆಯದೆನಿಸುವಂತಿದೆ. ಅಂತರ್ಯದಲ್ಲಿ ಹೋಗು. ನೀನು ಕರೆಯುವುದರಿಂದ ಜತೆಯಲ್ಲಿ ಯಾರೂ ಬರುವುದಿಲ್ಲ; ನೀನು ಒಬ್ಬನೇ ಹೋಗು. ನಿನಗೆ ಯಾರ ಜತೆಯಲ್ಲಿ ಯಾವುದೂ ಕೆಲಸವಿಲ್ಲವೆಂಬುದನ್ನು ನಿಶ್ಚಿತವಾಗಿ ಲಕ್ಷ್ಯದಲ್ಲಿ ಇಡು !

ಅಯ್ಯೋ ! ಈ ಯೋಗಸಾರವು ಒಂದು ಅಲೌಕಿಕವಾದ ಶಾಸ್ತ್ರವಿದೆ. ದಿಗಂಬರ ಸಾಧುಗಳ ಮಾತನ್ನೇನು ಹೇಳುವುದು? ಇಲ್ಲಿನ ಒಂದೊಂದು ಗಾಥೆಯಲ್ಲಿ ಹದಿನಾಲ್ಕು ಪೂರ್ವಗಳ ಸಾರವನ್ನು ತುಂಬಿ ಬಿಟ್ಟಿದ್ದಾರೆ. ದಿಗಂಬರ ಸಂತರು ಕ್ಷಣ ಕ್ಷಣದಲ್ಲಿ ಪ್ರತ್ಯಕ್ಷ ಪರಮಾತ್ಮನನ್ನು ಸ್ಪರ್ಶಿಸುತ್ತಾರೆ. ಒಂದು ದಿವಸದಲ್ಲಿ ಸಾವಿರಾರು ಬಾರಿ ಆತ್ಮನ ಸ್ಪರ್ಶ ಮಾಡುತ್ತಾರೆ. ಇಂಥ ಮಹಾನ ಸಂತರಿಂದ ಈ ಗ್ರಂಥದ ರಚನೆಯಾಗಿ ಹೋಗಿದೆ.

ಭಗವಾನ ಆತ್ಮನು ಯಾವಾಗ ತನ್ನ ಸ್ವರೂಪದಲ್ಲಿ ಸಾವಧಾನನಾಗುತ್ತಾನೆ ಆಗ ಮನ-ವಚನ-ಕಾಯಗಳ ಕಡೆಗಿರುವ ಲಕ್ಷ್ಯವು ಹೊರಟು ಹೋಗುತ್ತದೆ, ಅದರ ಹೆಸರು ತ್ರಿಗುಪ್ತಿಯಿದೆ. ಅತೀಂದ್ರಿಯ ಸ್ವರೂಪದಲ್ಲಿ ಏಕಾಕಾರವಾಗುತ್ತಿರುವಂತೆಯೇ ಐದೂ ಇಂದ್ರಿಯಗಳ ಕಡೆಗಿರುವ ಲಕ್ಷವುಬಿಟ್ಟು ಹೋಗುತ್ತದೆ. ಅದರ ಹೆಸರು ಸಂಯಮವಿದೆ. ಇದುವೇ ಉತ್ತಮ ಕ್ಷಮೆ ಮೊದಲಾದ ದಶಧರ್ಮವಿದೆ.

ಆತ್ಮನು ಸಮಸ್ತ ವಿಶುದ್ಧ ಗುಣಗಳ ನಿವಾಸ ಸ್ಥಾನನಿದ್ದಾನೆ. ಯಾವನು ಆತ್ಮನ ಆರಾಧನೆ ಮಾಡಿದ್ದಾನೆ ಅವನು ಸಮಸ್ತ ಆತ್ಮಿಕ ಗುಣಗಳ ಆರಾಧನೆ ಮಾಡಿಕೊಂಡಿದ್ದಾನೆ. ಆತ್ಮನ ಧ್ಯಾನದಿಂದ ಆತ್ಮನ ಗುಣಗಳು ವಿಕಸಿತವಾಗುತ್ತವೆ ಎಂದರೆ ಅವು ಪರ್ಯಾಯದಲ್ಲಿ ಪ್ರಕಟವಾಗುತ್ತವೆ. ಜತೆಯಲ್ಲಿ ಅವಧಿಜ್ಞಾನ ಮತ್ತು ಮನಃಪರ್ಯಾಯಜ್ಞಾನದ ವೃದ್ಧಿಯು ಕೂಡ ಪ್ರಕಟವಾಗುತ್ತದೆ. ಅನಂತರ ಕೇವಲಜ್ಞಾನದ ಲಾಭವಾಗುತ್ತದೆ. ಈ ಪ್ರಕಾರ ನಿರ್ವಾಣದ ಪರಮ ಉಪಾಯವೆಂದರೆ ತನ್ನ ಆತ್ಮನ ಧ್ಯಾನವಿದೆ.

ಯಾವ ಆತ್ಮನು ವೀತರಾಗ ಆತ್ಮನಲ್ಲಿ ಆತ್ಮನ ಮೂಲಕ ಆತ್ಮನನ್ನು ತಿಳಿಯುತ್ತಾನೆ - ನೋಡುತ್ತಾನೆ ಅವನು ಸ್ವಯಂ ಸಮ್ಯಗ್ದರ್ಶನ-ಜ್ಞಾನ- ಚಾರಿತ್ರರೂಪನಾಗುತ್ತಾನೆ. ಮತ್ತು ಇದನ್ನೇ ಜಿನೇಂದ್ರ ದೇವರು ಮೋಕ್ಷ ಮಾರ್ಗವೆಂದು ಹೇಳಿದ್ದಾರೆಂಬುದು ತತ್ತ್ವಾನುಶಾಸನದಲ್ಲಿ ಬರುತ್ತದೆ.

ದಿಗಂಬರ ಸಂತರು ಪ್ರತಿಯೊಂದು ಸ್ಥಾನದಲ್ಲಿ ಜಿನೇಂದ್ರ ದೇವರನ್ನು ಮುಖ್ಯವಾಗಿ ಇಡುತ್ತಾರೆ. ಸೋದರನೇ! ಪರಮಾತ್ಮರು ಹೀಗೆ ಹೇಳುತ್ತಾರೆ. ಸೋದರನೇ! ನೀನು ಇದನ್ನು ನಿರಾಕರಿಸಬೇಡ. ಸೋದರನೇ! ಇಲ್ಲವೆನ್ನಬೇಡ. ಅಹಹ! ಸಂತರ ಕರುಣೆಗೆ ಕೊನೆಯಿಲ್ಲ ! ಕೊನೆಯಿಲ್ಲ !!

ಈಗ ಓರ್ವ ಆತ್ಮನ ಮನನವನ್ನೇ ಮಾಡಬೇಕೆಂದು ಹೇಳುತ್ತಾರೆ -

ಏಕ್ಕಲಉ ಇಂದಿಯ-ರಹಿಯಉ ಮಣ-ವಯ-ಕಾಯ-ತಿ-ಸುದ್ಧಿ
ಅಪ್ಪಾ ಅಪ್ಪು ಮುಣೇಹಿ ತುಹು ಲಹು ಪಾವಹಿ ಸಿವ-ಸಿದ್ಧಿ ॥86॥

ನೀನೇಕಾಕಿ ಇಂದ್ರಿಯರಹಿತ ಮನ-ವಚ-ಕಾಯದ ಶುದ್ಧಿಯಲಿ
ನೀ ನಿಜ ಆತ್ಮನ ತಿಳಿಯುತಿರೆ ಪಡೆಯುವೆ ಬೇಗನೆ ಶಿವಸಿದ್ಧಿ ॥86॥

ಅರ್ಥ :- ನೀನು ಏಕಾಕಿ ಎಂದರೆ ನಿರ್ಗ್ರಂಥನಾಗಿ ಪಂಚೇಂದ್ರಿಯ ವಿಷಯಗಳಿಂದ ರಹಿತನಾಗಿ ಮನ - ವಚನ - ಕಾಯದ ಶುದ್ಧಿಯಿಂದ ಆತ್ಮನ ಮೂಲಕ ಆತ್ಮನ ಮನನ ಮಾಡು. ಅದರಿಂದ ಶೀಘ್ರದಲ್ಲಿ ಮೋಕ್ಷದ

ಪ್ರಾಪ್ತಿಯಾಗುವುದು.

ನೀನು ಪಂಚೇಂದ್ರಿಯಗಳಿಂದ ವಿರಕ್ತನಾಗಿ ನಿರಂತರ ಒಂದು ಸ್ವಭಾವದ ಮಂಥನವನ್ನೇ ಮಾಡು. ವಿಕಲ್ಪದ ಸ್ಪರ್ಶ ಮಾಡಬೇಡ ! ಆತ್ಮನ ಮೂಲಕ ಆತ್ಮನ ಮನನ ಮಾಡು ! ಮನನ ಎಂದರೆ ವಿಕಲ್ಪಗಳಿಂದ ರಹಿತನಾಗಿ ಅಂತರ್ಯದ ಸ್ವಭಾವದಲ್ಲಿ -ಸ್ವರೂಪದಲ್ಲಿ ಏಕಾಕಾರವಾಗುವುದು. ಯಾರು ಹೀಗೆ ಮನನ ಮಾಡುತ್ತಾರೆ ಅವರು ಶೀಘ್ರದಲ್ಲಿಯೇ ಮೋಕ್ಷದ ಪ್ರಾಪ್ತಿ ಮಾಡಿಕೊಳ್ಳುವರು.

ಗೃಹಸ್ಥಾಶ್ರಮದಲ್ಲಿ ಧರ್ಮ, ಅರ್ಥ ಮತ್ತು ಕಾಮ ಇವು ಮೂರು ಪುರುಷಾರ್ಥಗಳನ್ನು ಸಾಧಿಸುವಾಗಂತೂ ವಿಕಲ್ಪದ ಜಾಲದಲ್ಲಿ ಸಿಕ್ಕಿ ಬೀಳಬೇಕಾಗುತ್ತದೆ. ಅರ್ಥ ಮತ್ತು ಕಾಮ ಇವೆರಡಂತೂ ಅಶುಭ ಪುರುಷಾರ್ಥವಿವೆ. ಧರ್ಮದ ಪುರುಷಾರ್ಥವು ಶುಭವಿದೆ. ಆದಾಗ್ಯೂ ಇವು ಮೂರು ವಿಕಲ್ಪ ಜಾಲವೇ ಇವೆ.

ಪ್ರಶ್ನೆ :- ತಾವು ಧರ್ಮವನ್ನು ಶುಭಭಾವವೆಂದೇಕೆ ಹೇಳುತ್ತೀರಿ ?

ಉತ್ತರ :- ಸೋದರನೇ ! ಈ ಧರ್ಮವನ್ನು ಸಮಯಸಾರದಲ್ಲಿ ಪುಣ್ಯವೆಂದು-ಹೇಳಿದೆ. ವ್ಯವಹಾರ ಧರ್ಮವೆನ್ನಿರಿ ಅಥವಾ ಪುಣ್ಯವೆನ್ನಿರಿ ಎರಡೂ ಒಂದೇ ಇದೆ. ಇದು ನಿಶ್ಚಯಧರ್ಮವಲ್ಲ.

ಸ್ವತಂತ್ರ ವಸ್ತುಸ್ವಭಾವದ ದೃಷ್ಟಿ ಮಾಡುವಲ್ಲಿ ಒಂದು ವೇಳೆ ರಾಗದ ಅಭಿರುಚಿಯು ಉಳಿದುಕೊಂಡರೆ, ರಾಗದಲ್ಲಿ ಲಾಭವಿದೆಯೆಂದು ಮನ್ನಿಸ ಹೋದರೆ ದೃಷ್ಟಿಯು ಅಲ್ಲಿಂದ ಹೊರಗೆ ಬರುವುದಿಲ್ಲ. ಪ್ರಭು ! ನಿನಗೆ ನಿನ್ನ ಶಾಂತಿಯು ರುಚಿಸದಿದ್ದರೆ ಮತ್ತು ರಾಗವು ರುಚಿಸುತ್ತಿದ್ದರೆ ನೀನು ಎಲ್ಲಿಗೆ ಹೋಗಬಯಸಿರುವೆ ? ಎಲ್ಲಿಯವರೆಗೆ ರಾಗದ ಅಭಿರುಚಿಯಿರುತ್ತದೆ ಅಲ್ಲಿಯವರೆಗೆ ಅಂತರ್ಯದಲ್ಲಿ ವೀರ್ಯವು ಕೆಲಸ ಮಾಡುವ ಸಾಧ್ಯತೆಯಿಲ್ಲ. ವೀರ್ಯ ಗುಣದ ನಿಜವಾದ ಕಾರ್ಯವೆಂದರೆ ಅದು ತನ್ನ ಸ್ವಭಾವದ ರಚನೆ ಮಾಡುವುದಿದೆ. ಆದರೆ ಎಲ್ಲಿಯವರೆಗೆ ವೀರ್ಯ ಗುಣವು ರಾಗ, ಪುಣ್ಯ, ಸಂಯೋಗ ಮೊದಲಾದವುಗಳಲ್ಲಿ ಉತ್ಸಾಹದಿಂದ ಕೆಲಸ ಮಾಡುವುದು ಅಲ್ಲಿಯವರೆಗೆ ಸ್ವಭಾವದ ಕಾರ್ಯ ಮಾಡುವ ಸಾಧ್ಯತೆಯಿಲ್ಲ. ಆದುದರಿಂದ ಗೃಹಸ್ಥರು ಪ್ರಾರಂಭದಲ್ಲಿಯೇ ರಾಗಾದಿಗಳ ಅಭಿರುಚಿಯನ್ನು ಬಿಟ್ಟುಕೊಡಬೇಕಾಗುವುದು.

ಕರ್ಮದ ಲಕ್ಷ್ಯದಿಂದ ಉತ್ಪನ್ನವಾದ ಯಾವ ಕರ್ಮಧಾರೆಯಿದೆ ಅದು ಜ್ಞಾನಧಾರೆಯಲ್ಲಿ ವಿಘ್ನವನ್ನು ಉತ್ಪನ್ನ ಮಾಡುವಂಥದ್ದಿದೆ. ಮೂರು ಕಾಲ ಮತ್ತು ಮೂರು ಲೋಕದಲ್ಲಿ ವಸ್ತುವಿನ ಸ್ವರೂಪವು ಹೇಗೆ ಇದೆ ಹಾಗೆಯೇ ತಿಳಿಸಿಕೊಡಲಾಗಿದೆ. 'ಮೂರು ಕಾಲದಲ್ಲಿ ಪರಮಾರ್ಥದ ಪಥವು ಒಂದೇ ಇದೆ.' ಅದರಲ್ಲಿ ಶಿಥಿಲತೆಯನ್ನಾಗಲಿ ಅಥವಾ ಅದಲು ಬದಲನ್ನಾಗಲಿ ಮಾಡುವ ಸಾಧ್ಯತೆಯಿಲ್ಲ. ಪ್ರಭು! ನಿನ್ನ ಸ್ವರೂಪದಲ್ಲಿ ಶಿಥಿಲತೆಯಾದರೂ ಎಲ್ಲಿದೆ? ಜ್ಞಾನದಿಂದ ನೋಡಿದರೆ ನೀನು ಒಂದು ಜ್ಞಾನದ ಪುಂಜನೇ ಇರುವೆ. ವೀರ್ಯದಿಂದ ನೋಡಿದರೆ ನೀನು ಒಂದು ವೀರ್ಯದ ಪಿಂಡನಿರುವೆ. ಆನಂದದಿಂದ ನೋಡಿದರೆ ನೀನು ಕೇವಲ ಆನಂದದ ಪಿಂಡನಿರುವೆ. ಆತ್ಮನು ಗುಣಗಳ ಪುಂಜನಿದ್ದಾನೆ. ಆತ್ಮನು ಅನಂತ ಗುಣಗಳ ಸಮೂಹನಿದ್ದಾನೆ.

ದಿಗಂಬರ ಸಂತರ ಕಥನ ಪದ್ಧತಿಯು ಕೂಡ ಅಲೌಕಿಕವಿದೆ. ಅವರು ಒಂದೊಂದು ಶಬ್ದದಲ್ಲಿ ಸಂಪೂರ್ಣ ಸಿದ್ಧಾಂತವನ್ನೇ ತುಂಬಿ ಬಿಟ್ಟಿದ್ದಾರೆ. ಸೋದರನೇ ! ಸರ್ವಜ್ಞ ಭಗವಂತರು ಹೇಗೆ ಸ್ವರೂಪ ನೋಡಿದ್ದಾರೆ, ಹೇಳಿದ್ದಾರೆ ಹಾಗೆಯೇ ವಸ್ತುವಿನ ಸ್ವರೂಪವಿದೆ ಮತ್ತು ಹಾಗೆಯೇ ಅನುಭವದಲ್ಲಿ ಬರುತ್ತದೆ.

ಎಲೈ ಸೋದರನೇ ! ಆತ್ಮನು ಹೇಗಿದ್ದಾನೆಂಬುದನ್ನು ತಿಳಿದುಕೊಳ್ಳುವ ಸಲುವಾಗಿ ನೀನು ಕೇವಲ ನಿನ್ನ ಆತ್ಮನನ್ನು ನೋಡು ! ಪರಮಾರ್ಥ ದೃಷ್ಟಿಯಿಂದ ಆತ್ಮನು ಕರ್ಮ, ವಿಕಾರ, ಶರೀರ ಮೊದಲಾದವುಗಳಿಂದ ರಹಿತನಿದ್ದಾನೆ. ಆದುದರಿಂದ ಎಲೈ ಸೋದರನೇ ! ನೀನು ಮನ - ವಚನ - ಕಾಯದ ಶುದ್ಧಿಯೊಡನೆ ಸ್ವಭಾವ ಸನ್ಮುಖನಾಗಿ ನಿನ್ನ ಆತ್ಮನ ಧ್ಯಾನ ಮಾಡು! ಇದುವೇ ಮೋಕ್ಷ ಮಾರ್ಗವಿದೆ ಮತ್ತು ಇದುವೇ ಯೋಗಸಾರವಿದೆ.

ಮುನಿರಾಜರಿಗೆ ಆತ್ಮನ ಉತ್ಕೃಷ್ಟ ಧ್ಯಾನವಾಗುತ್ತದೆ. ಆದರೆ ಗೃಹಸ್ಥಾವಸ್ಥೆಯಲ್ಲಿ ವಾಸಿಸುವಂಥ ಶ್ರಾವಕನು ಕೂಡ ಏಕದೇಶ ಆತ್ಮನ ಧ್ಯಾನ ಮಾಡುವ ಸಾಧ್ಯತೆಯಿದೆ. ಶ್ರಾವಕನಿರಲಿ ಅಥವಾ ಮುನಿಯಿರಲಿ ಅವರೀರ್ವರು ನಿಶ್ಚಯ ರತ್ನತ್ರಯದ ಭಕ್ತಿ ಮಾಡುತ್ತಾರೆಂದು ನಿಯಮಸಾರದ ಭಕ್ತಿ ಅಧಿಕಾರದ ಮೊದಲನೆಯ ಗಾಥೆಯಲ್ಲಿಯೇ ಭ. ಕುಂದಕುಂದಾಚಾರ್ಯದೇವರು ಸ್ಪಷ್ಟವಾಗಿ ಹೇಳಿದ್ದಾರೆ. ಇದರಿಂದ ಶ್ರಾವಕನಿಗೆ ಕೂಡ ನಿಶ್ಚಯ ರತ್ನತ್ರಯದ ಧ್ಯಾನವಾಗುತ್ತದೆಯೆಂಬುದು ಸಿದ್ಧವಾಗುತ್ತದೆ.

ಭಗವಾನ ಆತ್ಮನು ಒಂದು ಸಮಯದಲ್ಲಿ ಪೂರ್ಣಾನಂದದ ಪ್ರಭು ಇದ್ದಾನೆ. ಆತ್ಮಾನುಭವ ಪೂರ್ವಕ ಅವನ ದೃಷ್ಟಿ ಮಾಡುವುದು ಮತ್ತು ಅಂತರ್ಯದ ಸ್ವರೂಪದಲ್ಲಿ ಸ್ಥಿರವಾಗುವುದು ಅದು ನಿಶ್ಚಯ ರತ್ನತ್ರಯದ ಭಕ್ತಿಯಿದೆ. ಸರ್ವಾರ್ಥಸಿದ್ಧಿಯ ಚತುರ್ಥಗುಣಸ್ಥಾನ ವರ್ತಿಯಾದ ದೇವಗಳಿಗಿಂತಲೂ ಕೂಡ ಅಧಿಕ ಶಾಂತಿಯು ವೃದ್ಧಿಸಿರುವಂಥ ಶ್ರಾವಕನು ಅವನು ಬೇಕಾದರೆ ಸ್ತ್ರೀ - ಕುಟುಂಬದ ಮಧ್ಯದಲ್ಲಿರಲಿ, ರಾಜ್ಯ ಭೋಗ ಭೋಗಿಸುತ್ತಿರಲಿ, ಅವನಿಗೆ ವಿಷಯ ಭೋಗದ ವಾಸನೆಯು ಕೂಡ ಇರಲಿ, ಆದಾಗ್ಯೂ ಆ ಶ್ರಾವಕನು ಸ್ವಭಾವದ ಆಶ್ರಯದಿಂದ ಶುದ್ಧ ರತ್ನತ್ರಯದ ಭಕ್ತಿ ಮಾಡುತ್ತಾನೆ.

ಸೋದರನೇ ! ನೀನು ವಸ್ತುವಿನ ಸ್ವರೂಪವನ್ನು ತಿಳಿದುಕೊಳ್ಳು ! ಅಂತರ್ಯದಲ್ಲಿ ಪರಮಾನಂದದ ಮೂರ್ತಿ ಪರಮಾತ್ಮ ಸ್ವರೂಪದ ನಿಶ್ಚಯ-ಸ್ವಾಶ್ರಿತ ದೃಷ್ಟಿ ಮಾಡುವುದು ಅದು ನಿಶ್ಚಯ ಸಮ್ಯಗ್ದರ್ಶನವಿದೆ. ಸಪ್ತ ತತ್ತ್ವಗಳ ಶ್ರದ್ಧೆಯು ಅದು ವ್ಯವಹಾರ ಸಮ್ಯಗ್ದರ್ಶನವಿದೆ. ಜ್ಞಾನ ಸ್ವರೂಪದ ಜ್ಞಾನ ಮಾಡಿಕೊಳ್ಳುವುದು ಮತ್ತು ಸ್ವಸಂವೇದನ ಮಾಡುವುದು ಅದು ನಿಶ್ಚಯ ಜ್ಞಾನವಿದೆ. ಶಾಸ್ತ್ರಜ್ಞಾನ ಮಾಡಿಕೊಳ್ಳುವುದು ಅದು ವ್ಯವಹಾರ ಜ್ಞಾನವಿದೆ. ತಮ್ಮ ಸ್ವರೂಪದ ದೃಷ್ಟಿ- ಜ್ಞಾನ ಸಹಿತ ಸ್ಥಿರತೆ ಮಾಡುವುದು ಅದು ನಿಶ್ಚಯ ಚಾರಿತ್ರವಿದೆ. ಮತ್ತು ಜ್ಞಾನಿಯ ವ್ರತ, ಸಂಯಮ ಮೊದಲಾದವುಗಳ ಪರಿಣಾಮವು ಅದು ವ್ಯವಹಾರ ಚಾರಿತ್ರವಿದೆ. ಅಯ್ಯೋ ! ನಾಲ್ಕನೆಯ ಗುಣಸ್ಥಾನದಲ್ಲಿ ಕೂಡ ಯಾವಾಗ ಮುಕ್ತ ಸ್ವರೂಪನಾದ ಆತ್ಮನ ಭಾಸವಾಗುವುದು, ಆಗ ಅವನಿಗೆ ನಿರ್ವಿಕಲ್ಪ ಪ್ರತೀತಿಯಾಗುತ್ತದೆ. ಶ್ರಾವಕನಿಗೆ ಎರಡು ಕಷಾಯಗಳ ನಾಶದೊಡನೆ ವಿಶೇಷ ಶಾಂತಿಯು ವೃದ್ಧಿಸಿ ಹೋಗುತ್ತದೆ. ಸ್ವಭಾವದ ಆಶ್ರಯದಿಂದ ಪ್ರಕಟವಾದ ಶಾಂತಿಯನ್ನು ಇಲ್ಲಿ ನಿಶ್ಚಯರತ್ನತ್ರಯವೆಂದು ಹೇಳಲಾಗಿದೆ.

ನಿರ್ವಾಣದ ಪ್ರತ್ಯಕ್ಷ ಉಪಾಯವೆಂದರೆ ನಿರ್ಗ್ರಂಥ ಪದವಿದೆ. ಅಯ್ಯೋ ! ಅಲೌಕಿಕವಾದ ಮಾತುಗಳಿವೆ ಅಂತರ್ಯದಲ್ಲಿ ಮೂರು ಕಷಾಯಗಳ ಅಭಾವರೂಪವಾದ ನಿರ್ಗ್ರಂಥ ಭಾವ ಮತ್ತು ಬಾಹ್ಯದಲ್ಲಿ ನಗ್ನದಶೆ ಈ ದಶೆಯು ಪ್ರತ್ಯಕ್ಷ ಮೋಕ್ಷದ ಉಪಾಯವಿದೆ.

ಸಮ್ಯಕ್‌ದೃಷ್ಟಿಗೆ ಸ್ವಭಾವದಲ್ಲಿಯೇ ಸುಖವಿದೆ ಮತ್ತು ಇಂದ್ರಿಯ ವಿಷಯಗಳಲ್ಲಿ ಸುಖವಿಲ್ಲವೆಂಬ ದೃಢ ಪ್ರತೀತಿಯಾದ ನಂತರವೂ ಇಂದ್ರಿಯ ವಿಷಯಗಳಲ್ಲಿ ಆಸಕ್ತಿಯು ಉಳಿಯುತ್ತದೆ. ಏಕೆಂದರೆ ಆಸಕ್ತಿಯಾಗುವುದು ಅದು ಚಾರಿತ್ರದ ದೋಷವಿದೆ. ಮತ್ತು ಇಂದ್ರಿಯ ವಿಷಯಗಳಲ್ಲಿ ಸುಖವಿದೆಯೆಂದು ಮನ್ನಿಸುವುದು ಅದಂತೂ ಶ್ರದ್ಧೆಯ ದೋಷವಿದೆ. ಸಮ್ಯಕ್‌ದೃಷ್ಟಿಗೆ ಮೂರು ಕಾಲ ಮತ್ತು ಮೂರು ಲೋಕಗಳಲ್ಲಿ ಓರ್ವ ಆತ್ಮನ ಹೊರತಾಗಿ ಎಲ್ಲಿಯೂ ಸುಖ ಬುದ್ಧಿಯಿರುವುದಿಲ್ಲ, ಎಲ್ಲಿ ಸುಖವಿದೆ ಅಲ್ಲಿ ಸುಖ ಬುದ್ಧಿಯಾಗುವುದು, ಆದರೆ ಎಲ್ಲಿ ಸುಖವಿಲ್ಲ ಅಲ್ಲಿ ಸುಖ ಬುದ್ಧಿ ಹೇಗಾಗುವುದು? ತಮ್ಮ ಆನಂದವಂತೂ ತಮ್ಮಲ್ಲಿಯೇ ಇದೆ. ಪುಣ್ಯ ಪಾಪದಲ್ಲಿ ಆತ್ಮನ ಆನಂದವಿಲ್ಲವೆಂಬ ಶ್ರದ್ಧೆಯು ಧರ್ಮಾತ್ಮನಿಗೆ ಪ್ರಥಮದೃಷ್ಟಿಯಲ್ಲಿಯೇ ಆಗಿ ಹೋಗುತ್ತದೆ.

ಧರ್ಮಾತ್ಮನಿಗೆ ಇಂಥ ಶ್ರದ್ಧೆಯಿದ್ದರೂ ಕೂಡ ಎಲ್ಲಿಯವರೆಗೆ ಪಂಚೇಂದ್ರಿಯ ವಿಷಯಗಳ ಕುರಿತಾದ ಲಾಲಸೆ ಹೊರಟು ಹೋಗುವುದಿಲ್ಲ, ಆಸಕ್ತಿಯು ಬಿಟ್ಟು ಹೋಗುವುದಿಲ್ಲ ಅಲ್ಲಿಯವರೆಗೆ ಗೃಹಸ್ಥಾಶ್ರಮದಲ್ಲಿ ಪತ್ನಿ - ಕುಟುಂಬದ

ಜತೆಯಲ್ಲಿದ್ದು ಯಥಾಶಕ್ತಿ ಆತ್ಮನ ಮನನ ಮಾಡುತ್ತಾನೆ. ಅಂತರ್ಯದಲ್ಲಿ ವಿಶೇಷ ಸ್ಥಿರವಾಗುವ ಶಕ್ತಿಯಿಲ್ಲದೆ ಬಾಹ್ಯದಲ್ಲಿ ಎಲ್ಲವನ್ನೂ ತ್ಯಾಗ ಮಾಡಿ ಬಿಟ್ಟರೆ, ಬಲವಂತದಿಂದ ಪರೀಷಹ ಮೊದಲಾದವುಗಳ ಸಹನೆ ಮಾಡಿದರೆ ಎಲ್ಲವೂ ಭಾರವಾಗಿ ಬಿಡುವುದು, ಏಕೆಂದರೆ ಅಂತರ್ಯದಲ್ಲಿ ಶಕ್ತಿಯಂತೂ ಇಲ್ಲ.

ಅದಕ್ಕಾಗಿಯೇ ಆಚಾರ್ಯ ಭಗವಂತರು ಮೂಲಾಚಾರದಲ್ಲಿ ಹೇಳುತ್ತಾರೆ - ನೋಡು ಸೋದರನೇ ! ಒಂದು ವೇಳೆ ನಿನ್ನ ದೃಷ್ಟಿಯು ಸಮ್ಯಕ್ ಆಗಿದ್ದರೆ ನಿನ್ನ ಸಮ್ಯಗ್ದರ್ಶನದಲ್ಲಿ ದೋಷವು ತಗಲದಂತೆ ಸರಿಯಾಗಿ ಲಕ್ಷ್ಯವಿರಿಸಬೇಕು. ಆಸಕ್ತಿಯು ಹೊರಟು ಹೋಗಿರದಿದ್ದರೆ ನೀನು ವಿವಾಹ ಮಾಡಿಕೊಳ್ಳಬೇಕು; ಆದರೆ ಮಿಥ್ಯಾದೃಷ್ಟಿ ಸಾಧುಗಳ ಸಂಗತಿಯನ್ನು ಎಂದೂ ತಪ್ಪಿ ಕೂಡ ಮಾಡಬೇಡ. ಏಕೆಂದರೆ ವಿವಾಹ ಮಾಡಿಕೊಳ್ಳುವುದು ಅದು ಚಾರಿತ್ರದ ದೋಷವಿದೆ. ಆದರೆ ಮಿಥ್ಯಾಶ್ರದ್ಧೆಯುಳ್ಳವರ ಸಹವಾಸದಲ್ಲಿ ಇರುವುದರಿಂದ ತಮ್ಮ ಶ್ರದ್ಧೆಯು ಮಿಥ್ಯೆಯಾಗಿ ಹೋಗುವುದು ಮತ್ತು ನೀನು ಶ್ರದ್ಧೆಯಿಂದ ಭ್ರಷ್ಟನಾಗಿ ಹೋಗುವೆ.

ಪ್ರಶ್ನೆ :- ಅಯ್ಯಯ್ಯೋ ! ಸಂತರಿಗೆ ವಿವಾಹ ಮಾಡಿಕೊಳ್ಳುವುದಕ್ಕೆ ಹೇಳುವುದೇನು ?

ಉತ್ತರ :- ಅಯ್ಯಾ ಸೋದರನೇ ! ಇದರ ಅರ್ಥವನ್ನು ತಿಳಿದುಕೊಳ್ಳಬೇಕಾಗುವುದು. ಮುನಿಗಳಿಗಂತೂ ವಿವಾಹ ಮೊದಲಾದ ಕಾರ್ಯಗಳ ತ್ಯಾಗವು ಮನ-ವಚನ-ಕಾಯದಿಂದ, ಕೃತ-ಕಾರಿತ-ಅನುಮೋದನದಿಂದ ನವ ನವ ಕೋಟಿಯಿಂದ ಇರುತ್ತದೆ. ಆದರೆ ಇಲ್ಲಿ ಮಿಥ್ಯಾತ್ವದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಈ ಮಾತು ಹೇಳಲಾಗಿದೆ. ಮಿಥ್ಯಾದರ್ಶನದ ಪಾಪವು ಚಾರಿತ್ರದ ದೋಷಕ್ಕಿಂತಲೂ ಅಧಿಕ ಮಹಾನ ದೋಷವಿದೆ. ಆದರೆ ಜನರಿಗೆ ಮಿಥ್ಯಾದರ್ಶನದ ಪಾಪ ಹಾಗೂ ಸಮ್ಯಗ್ದರ್ಶನದ ಪಾಪ ಹಾಗೂ ಸಮ್ಯಗ್ದರ್ಶನ ಧರ್ಮದ ಬೆಲೆಯೇನಿದೆಯೆಂಬುದರ ಪ್ರಜ್ಞೆಯೇ ಇಲ್ಲ.

'ಸಿಜ್ಝಂತಿ ಚರಿಯಭಟ್ಠಾ ದಂಸಣಭಟ್ಠಾ ಣ ಸಿಜ್ಝಂತಿ' ಸ್ತ್ರೀಯ ಸಂಗದಲ್ಲಿ ಚಾರಿತ್ರದ ದೋಷ ತಗಲುವುದು; ಆದರೆ ಶ್ರದ್ಧೆಯ ದೋಷವು ತಗಲುವುದಿಲ್ಲ. ಯಾವನ ದೃಷ್ಟಿಯೇ ವಿಪರೀತವಿದೆ ಅವನು ಸಾಧುವಾಗಿದ್ದರು ಕೂಡ ಅವನ ಸಹವಾಸದಲ್ಲಿ ಸಮ್ಯಕ್‌ದೃಷ್ಟಿಯ ಶ್ರದ್ಧೆಯು ವಿಪರೀತವಾಗಿ ಹೋಗುವುದು. ಅದರಿಂದ ಮಹಾನ ದೋಷವು ತಗಲುವುದು. ಮೂಲಾಚಾರದಲ್ಲಿ ಮುನಿರಾಜರ ಕುರಿತು ಹೇಳಿರುವ ಉಪರೋಕ್ತ ಮಾತಿನ ಅಭಿಪ್ರಾಯವು ಇದುವೇ ಇದೆ. ಸ್ತ್ರೀಯರ ಸಹವಾಸದಲ್ಲಿ ಬೀಳುವ ಆಶಯವಿಲ್ಲ. ಬ್ರಹ್ಮಸ್ವರೂಪದಲ್ಲಿ ಲೀನವಿರುವಂಥ ಆತ್ಮಾನಂದಿಯಾದ ಮುನಿರಾಜರುಗಳು ಹೀಗೆ ಹೇಳುತ್ತಾರೆಂದರೆ ಅವರುಗಳ ಆಶಯವನ್ನು ಸರಿಯಾಗಿ ತಿಳಿದುಕೊಳ್ಳಬೇಕಾಗುವುದು.

ಶ್ರೀ ಯೋಗೀಂದುದೇವರು ಇಲ್ಲಿ ಒತ್ತು ಕೊಟ್ಟು ಹೇಳುವುದೇನೆಂದರೆ ನೀನು ಸಮ್ಯಕ್‌ದೃಷ್ಟಿಯಾಗಿದ್ದರೂ ಕೂಡ ಇನ್ನೂ ವಿಷಯಗಳ ಆಸಕ್ತಿಯು ಹೊರಟು ಹೋಗಿರದಿದ್ದರೆ ಗೃಹಸ್ಥಾವಸ್ಥೆಯಲ್ಲಿ ಇದ್ದುಕೊಂಡು ಆತ್ಮನ ಮನನ ಮಾಡಬೇಕು ಮತ್ತು ಯಾವಾಗ ಆತ್ಮಿಕ ಸುಖದ ಪ್ರೀತಿಯು ಅಧಿಕವಾಗಿ ಹೋಗುತ್ತದೆ, ವಿಷಯಗಳ ರಸವು ನೀರಸವಾಗುತ್ತದೆ, ಯಾವುದೇ ಪ್ರಕಾರದ ಆಸಕ್ತಿಯು ಉಳಿಯದಿರುವಾಗ ಜಿತೇಂದ್ರಿಯನಾಗಿ ನಿರಂತರ ಆತ್ಮನ ಮನನ - ಚಿಂತನದಲ್ಲಿ ತೊಡಗಬೇಕು ಎಂದರೆ ಮೊದಲು ಅಂತರ್ಯದಲ್ಲಿ ನಿರ್ಗ್ರಂಥರಾಗಿ ಅನಂತರ ಬಾಹ್ಯದಲ್ಲಿ ನಿರ್ಗ್ರಂಥ ಮುನಿಯಾಗಿ ಸ್ವರೂಪದಲ್ಲಿ ಲೀನವಾಗಿ ಹೋಗುವುದು ಯೋಗ್ಯವಿದೆ. ಏಕೆಂದರೆ ಮುನಿತನವೇ-ಚಾರಿತ್ರವೇ ನಿಜವಾಗಿ ಮೋಕ್ಷದ ಕಾರಣವಿದೆ.

ಮುನಿಗಳು ಪುನಃ ಪುನಃ ಸಮ್ಯಕ್‌ಜ್ಞಾನದ ಅಭ್ಯಾಸ ಮಾಡಿ ಅದನ್ನು ವೃದ್ಧಿಸುತ್ತ ಹೋಗುವುದೇ ಅವರಿಗೆ ಯೋಗ್ಯವಿದೆಯೆಂದು ಆತ್ಮಾನುಶಾಸನದಲ್ಲಿ ಆಚಾರ್ಯ ಗುಣಭದ್ರ ಸ್ವಾಮಿಗಳು ಹೇಳುತ್ತಾರೆ. ಚೈತನ್ಯ ಜ್ಯೋತಿ ಸ್ವರೂಪನಾದ ಆತ್ಮನ ದೃಷ್ಟಿಪೂರ್ವಕ ಜ್ಞಾನದ ವಿಕಾಸ ಮಾಡಬೇಕು ಎಂದರೆ ಆತ್ಮನ ಆನಂದ ಶಾಂತಿ, ಚಾರಿತ್ರ, ವೀರ್ಯ.

ಮೊದಲಾದ ಸಮಸ್ತ ಶಕ್ತಿಗಳ ವಿಕಾಸ ಮಾಡುವುದು ಮತ್ತು ರಾಗವನ್ನು ಕುಂದಿಸುವುದು, ಜ್ಞಾನವನ್ನು ವಿಸ್ತರಿಸುವುದು ಇದು ಮುನಿಯೋಗ್ಯವಾದ ಕಾರ್ಯವಿದೆ.

ಅಯ್ಯಾ ಸೋದರನೇ ! ಮೋಕ್ಷದ ಮಾರ್ಗವಂತೂ ಅತ್ಯಂತ ನಿರಾವಲಂಬಿಯಿದೆ. ನಿಶ್ಚಯ ಮೋಕ್ಷಮಾರ್ಗಕ್ಕೆ ವ್ಯವಹಾರ ಮೋಕ್ಷಮಾರ್ಗದ ಅವಲಂಬನೆಯು ಕೂಡ ಇಲ್ಲ.

ಯಾವ ಪ್ರಕಾರ ರೇಕುಗಳು ವಿಕಸಿತವಾಗಿ ಪುಷ್ಪವು ಅರಳುತ್ತದೆ, ಅದೇ ಪ್ರಕಾರ ಪರಮ ಪಾರಿಣಾಮಿಕ ಸ್ವಭಾವವು ಶಕ್ತಿರೂಪವಿದ್ದು ಅದರಲ್ಲಿ ಏಕಾಗ್ರವಾಗಿ ಪರ್ಯಾಯದಲ್ಲಿ ಅದರ ವಿಕಾಸ ಮಾಡಿರಿ. ಅನಂತ ಶಕ್ತಿಗಳನ್ನು ಪರ್ಯಾಯದಲ್ಲಿ ಅರಳಿಸಿರಿ. ಮತ್ತು ರಾಗ - ದ್ವೇಷಗಳನ್ನು ಕತ್ತರಿಸಿ ಹಾಕುತ್ತ ಸಮತಾಭಾವದಿಂದ ಆತ್ಮನನ್ನು ಧ್ಯಾನಿಸಿರಿ. ಏಕೆಂದರೆ ಪರಮಾನಂದದ ಮೂರ್ತಿಯಾದ ಆತ್ಮನ ಧ್ಯಾನ ಮಾಡುವುದು ಅದುವೇ ಮೋಕ್ಷದ ಮಾರ್ಗವಿದೆ. ದ್ರವ್ಯ ಸಂಗ್ರಹದ ನಲವತ್ತೇಳನೆಯ ಗಾಥೆಯಲ್ಲಿ ಕೂಡ ಇದೇ ಮಾತನ್ನು ಹೇಳಿದೆ.

ಅಯ್ಯಾ ! ಯಾವುದೇ ಶಾಸ್ತ್ರವನ್ನು ನೋಡು, ಅದರಲ್ಲಿ ಆಚಾರ್ಯರು ನಾಲ್ಕೂ ನಿಟ್ಟಿನಿಂದ ಒಂದು ವೀತರಾಗ ಸ್ವರೂಪವಾದ ಮೋಕ್ಷಮಾರ್ಗವನ್ನು ತಿಳಿಸಿದ್ದಾರೆ, ಸ್ಪಷ್ಟಪಡಿಸಿದ್ದಾರೆ. ವೀತರಾಗ ಮೋಕ್ಷಮಾರ್ಗದ ಘೋಷಣೆ ಮಾಡಿದ್ದಾರೆ.

ಈಗ ಬಂಧ-ಮೋಕ್ಷದ ವಿಕಲ್ಪ ಬಿಟ್ಟು ಸಹಜಸ್ವರೂಪದಲ್ಲಿ ಕ್ರೀಡೆ ಮಾಡೆಂದು ಹೇಳುತ್ತಾರೆ, -

ಜಇ ಬದ್ಧಉ ಮುಕ್ಕಉ ಮುಣಹಿ ತೋ ಬಂಧಿಯಹಿ ಣಿಭಂತು
ಸಹಜ-ಸರೂವಇ ಜಇ ರಮಹಿ ತೋ ಪಾವಹಿ ಸಿವ ಸಂತು ॥87॥

ಮನ್ನಿಸೆ ಬದ್ಧ ಅಬದ್ಧನೆಂದು ನಿಸ್ಸಂದೇಹದಿ ಬಂಧಿಸುವೆ
ನೀ ನಿಜರೂಪದಿ ರಮಿಸಿದರೆ ಪಡೆಯುವೆ ಆ ಶಿವಶಾಂತಿಯನು ॥87॥

ಅರ್ಥ :- ಒಂದು ವೇಳೆ ನೀನು ಬಂಧ - ಮೋಕ್ಷದ ಕಲ್ಪನೆ ಮಾಡಿದರೆ ನಿಸ್ಸಂದೇಹವಾಗಿ ಬದ್ಧನಾಗುವೆ. ಮತ್ತು ನೀನು ಸಹಜ ಸ್ವರೂಪದಲ್ಲಿ ಕ್ರೀಡೆ ಮಾಡಿದರೆ ಶಾಂತ ಸ್ವರೂಪದ ಮೋಕ್ಷವನ್ನು ಪಡೆಯುವೆ.

ಅಹಹ.... ! ಎಲೈ ಆತ್ಮನೇ ! ನೀನು ಒಂದು ವೇಳೆ ಬಂಧ-ಮೋಕ್ಷದ ಕಲ್ಪನೆ ಮಾಡಿದರೆ ಅದರಿಂದ ನಿಸ್ಸಂದೇಹವಾಗಿ ಬದ್ಧನಾಗುವೆ. ನನಗೆ ರಾಗವಾಗುತ್ತಿದೆ ಇದು ಹೊರಟು ಹೋದರೆ ಮೋಕ್ಷವಾಗುವುದೆಂಬ ವಿಕಲ್ಪವು ಕೂಡ ಬಂಧದ ಕಾರಣವಿದೆ. ಸಹಜಾನಂದ ಸ್ವರೂಪದ ಧ್ಯಾನವು ಅದು ಮೋಕ್ಷದ ಕಾರಣವಿದೆ.

ಸೋದರನೇ ! ನೀನು ಬಂಧ ಮತ್ತು ಮೋಕ್ಷ ಇವೆರಡನ್ನು ಪರ್ಯಾಯದೃಷ್ಟಿಯಿಂದ ನೋಡತೊಡಗಿದರೆ ನಿಯಮದಿಂದ ಬದ್ಧನಾಗುವೆ. ಇದಂತೂ ಯೋಗಸಾರವಿದೆಯಲ್ಲವೇ ! ಯೋಗಸ್ವರೂಪದಲ್ಲಿ ಏಕಾಕಾರವಾಗಿ ಬಂಧ - ಮೋಕ್ಷದ ವಿಕಲ್ಪ ಮಾಡದಿರುವುದರ ಹೆಸರು ಯೋಗಸಾರವಿದೆ. ಬಂಧ - ಮೋಕ್ಷದ ವಿಚಾರವು ನಡೆಯುತ್ತಿದ್ದರೂ ಆ ವಿಕಲ್ಪವಂತೂ ಬಂಧಕ್ಕೇನೇ ಕಾರಣವಿದೆಯೆಂದು ಆಚಾರ್ಯದೇವರು ಕಠೋರ ಭಾಷೆಯಲ್ಲಿ ಹೇಳುತ್ತಾರೆ.

ಪ್ರಶ್ನೆ :- ಒಂದೂ ಜೀವದ ಘಾತವಾಗದಿದ್ದರು ಕೂಡ ಬಂಧ ಹೇಗಾಗುವುದು ?

ಉತ್ತರ :- ಜೀವದ ಘಾತವು ಅದು ಬಂಧದ ಕಾರಣವಿಲ್ಲ; ಆದರೆ ವಿಕಲ್ಪವು ಅದು ಬಂಧದ ಕಾರಣವಿದೆ. ಪರ್ಯಾಯ ದೃಷ್ಟಿಯ - ವ್ಯವಹಾರನಯದ ಆಶ್ರಯ ಮಾಡುವುದರಿಂದ ಬಂಧವಾಗುತ್ತದೆ.

ಪರ್ಯಾಯದ ಲಕ್ಷ್ಯದಿಂದ ಮೋಕ್ಷದ ಪ್ರಯೋಜನವು ಸಿದ್ಧವಾಗುವುದಿಲ್ಲ. ಏಕೆಂದರೆ ನಿರ್ಮಲ ಪರ್ಯಾಯದೊಳಗಿಂದ ಕೂಡ ನವೀನ ಪರ್ಯಾಯವು ಉತ್ಪನ್ನವಾಗುವುದಿಲ್ಲ. ನಿಯಮಸಾರದ ಐವತ್ತನೆಯ ಗಾಥೆಯಲ್ಲಿ ಕ್ಷಾಯಿಕ ಸಮ್ಯಗ್ದರ್ಶನವನ್ನು ಕೂಡ ಪರದ್ರವ್ಯವೆಂದು ಹೇಳಲಾಗಿದೆ. ಏಕೆಂದರೆ ಪರದ್ರವ್ಯದೊಳಗಿಂದ

ಹೇಗೆ ತಮ್ಮ ನಿರ್ಮಲ ಪರ್ಯಾಯವು ಬರುವುದಿಲ್ಲ, ಅದೇ ಪ್ರಕಾರ ತಮ್ಮ ನಿರ್ಮಲ ಪರ್ಯಾಯದೊಳಗಿಂದ ಕೂಡ ನವೀನ ನಿರ್ಮಲ ಪರ್ಯಾಯವು ಬರುವುದಿಲ್ಲ. ಈ ಅಪೇಕ್ಷೆಯಿಂದ ಉದಯ, ಉಪಶಮ, ಕ್ಷಯೋಪಶಮ ಮತ್ತು ಕ್ಷಾಯಿಕ ಇವು ನಾಲ್ಕೂ ಪರ್ಯಾಯಗಳನ್ನು ಪರದ್ರವ್ಯವೆಂದು ಹೇಳಿದೆ. ನವೀನ ಪರ್ಯಾಯವು ಉತ್ಪನ್ನವಾಗುವ ಸ್ಥಾನವೆಂದರೆ ಒಂದು ಧ್ರುವ ಸ್ವಭಾವವಿದ್ದು ಅದುವೇ ಸ್ವದ್ರವ್ಯವಿದೆ.

ವಾಸ್ತವಿಕ ತತ್ತ್ವದ ತಿಳಿವಳಿಕೆಯಿಲ್ಲದೆ ಯಾರದೂ ಕಲ್ಯಾಣವಾಗುವ ಸಾಧ್ಯತೆಯಿಲ್ಲ. ಏಕೆಂದರೆ ಕಲ್ಯಾಣದ ಗಣಿಯೆಂದರೆ ಸ್ವಯಂ ಆತ್ಮನೇ ಇದ್ದಾನೆ. ಅವನ ಏಕರೂಪ ದೃಷ್ಟಿಯಾದಲ್ಲದೆ ಕಲ್ಯಾಣದ ಅಂಕುರವು ಎಲ್ಲಿಂದ ಯಾವುದರೊಳಗಿಂದ ಉತ್ಪನ್ನವಾಗುವುದು ?

ನಿರ್ವಾಣದ ಉಪಾಯವೆಂದರೆ ಓರ್ವ ಶುದ್ಧಾತ್ಮನ ಅನುಭವವೇ ಇದೆಯೆಂದು ಆಚಾರ್ಯದೇವರು ಹೇಳುತ್ತಾರೆ. ಎಲ್ಲಿ ಮನಸ್ಸಿನ ವಿಚಾರ, ವಿಕಲ್ಪ ಮೊದಲಾದವುಗಳೆಲ್ಲವು ನಿಂತು ಹೋಗುತ್ತವೆ ಮತ್ತು ಸ್ವಾನುಭವದ ಪ್ರಕಾಶವಾಗುತ್ತದೆ ಅದನ್ನು ನಿರ್ವಿಕಲ್ಪ ಸಮಾಧಿಯೆಂದು ಹೇಳುತ್ತಾರೆ. ಸಮ್ಯಗ್ದರ್ಶನ - ಜ್ಞಾನ - ಚಾರಿತ್ರದಲ್ಲಿ ಯಾವ ರಾಗ ರಹಿತ ವೀತರಾಗ ಶಾಂತಿಯಿದೆ ಅದು ನಿರ್ವಿಕಲ್ಪ ಸಮಾಧಿಯಿದೆ, ಮತ್ತು ಅದುವೇ ಮೋಕ್ಷದ ಮಾರ್ಗವಿದೆ.

ಸೋದರನೇ ! ಮಾತಂತೂ ಕಠಿಣವಿದೆ, ಆದರೆ ನೀನು ತಿಳಿದುಕೊಳ್ಳುವ ಪ್ರಯತ್ನಮಾಡು. ನಯ, ಪ್ರಮಾಣ, ನಿಕ್ಷೇಪಗಳ ವಿಕಲ್ಪಗಳನ್ನು ಬಿಟ್ಟುಕೊಟ್ಟು ಏಕರೂಪನಾದ ನಿಜಪರಮಾತ್ಮನ ಮೇಲೆ ದೃಷ್ಟಿಯಿಡು, ಅವನಲ್ಲಿಯೇ ಲೀನನಾಗಿ ಹೋಗು, ಅದರಿಂದ ನಿನ್ನ ನಿರ್ವಾಣವು ಆಗೇ ಆಗುವುದು. ಯಾವ ಪ್ರಕಾರ ಶೀತಲ ಹಿಮವು ವನವನ್ನು ಸುಟ್ಟು ಹಾಕುತ್ತದೆ, ಅದೇ ಪ್ರಕಾರ ಅಕಷಾಯ ಶಾಂತಿಯು ಸಂಸಾರರೂಪದ ವನವನ್ನು ಸುಟ್ಟು ಹಾಕುತ್ತದೆ. ಆಗ ಅವನಿಗೆ ಮೋಕ್ಷವು ಆಗಿಯೇ ಆಗುತ್ತದೆ.

'ಪ್ರಭು ! ತಮ್ಮ ನಯನಗಳಿಂದ ಉಪಶಮ ರಸವು ವರ್ಷಿಸುತ್ತಿದೆ'ಯೆಂದು ಭಕ್ತಿಪಾಠದಲ್ಲಿ ಬರುತ್ತದೆ. ಉಪಶಮ ಎಂದರೆ ಅಕಷಾಯ ಶಾಂತಿ ಮತ್ತು ಅದರ ಪೂರ್ಣತೆಯೆಂದರೇನೇ ವೀತರಾಗತೆಯಿದೆ. ಆತ್ಮನು ಅಕಷಾಯ ಸ್ವರೂಪನಿದ್ದಾನೆ, ಹಾಗೆ ಅಕಷಾಯ ಭಾವವು ಪರ್ಯಾಯದಲ್ಲಿ ಪ್ರಕಟವಾಗುವುದು ಅದು ಉಪಶಮಭಾವವಿದೆ.

ಪ್ರಭು ! ಇವೆಲ್ಲ ಮಾತುಗಳು ಭಾಷೆಯಲ್ಲಂತೂ ಸುಲಭವೆನಿಸುತ್ತವೆ; ಆದರೆ ಅದರ ಪ್ರಾಪ್ತಿಯ ಸಲುವಾಗಿ ಪುರುಷಾರ್ಥದ ಉಗ್ರತೆಯು ಬೇಕಾಗುವುದು. ಭಾಷೆಯಲ್ಲಿ ಅದೇನು ಭಾವವು ಬಂದು ಬಿಡುವುದಿಲ್ಲ, ಪುರುಷಾರ್ಥ ಮಾಡುವುದರಿಂದ ಈ ಭಾವಗಳು ಪ್ರಕಟವಾಗುತ್ತದೆ.

ಬಂಧ - ಮೋಕ್ಷದ ವಿಚಾರವು ಕೂಡ ರಾಗವಿದ್ದು, ಅದು ಬಂಧದ ಕಾರಣವಿದೆ.

ಪ್ರಶ್ನೆ :- ಆದರೆ ಪ್ರಭು ! ವಿಚಾರವಂತೂ ಜ್ಞಾನದ ಪರ್ಯಾಯದ್ದಿದೆಯಲ್ಲವೇ ?

ಉತ್ತರ :- ಸೋದರನೇ ! ಅದಂತೂ ಜ್ಞಾನದ ಪರ್ಯಾಯವಿದೆ, ಆದರೆ ಜತೆಯಲ್ಲಿ ಯಾವ ರಾಗವು ಬರುತ್ತದೆ, ಭೇದವಾಗುತ್ತದೆ ಅದು ಬಂಧದ ಕಾರಣವಿದೆ. ಸಮಯಸಾರ ಕಲಶದಲ್ಲಿ ಪಂ. ರಾಜಮಲ್ಲರವರು ಈ ಮಾತನ್ನು ಹೇಳಿದ್ದಾರೆ. ವಿಚಾರವು ಕೂಡ ಬಂಧದ ಕಾರಣವಿದೆ. ಅಲ್ಲಿ ಜ್ಞಾನವನ್ನು ಬಂಧದ ಕಾರಣವೆಂದು ಹೇಳಿಲ್ಲ, ಆದರೆ ಜ್ಞಾನವು ರಾಗದಲ್ಲಾಗಲಿ ಅಥವಾ ಭೇದದಲ್ಲಾಗಲಿ ನಿಂತು ಬಿಡುತ್ತದೆ ಅದರ ಹೆಸರು ವಿಚಾರವಿದೆ ಮತ್ತು ಅದು ಬಂಧದ ಕಾರಣವಿದೆ. ನಾನು ಮನುಷ್ಯನಿದ್ದೇನೆ, ಭವ್ಯನಿದ್ದೇನೆ, ಸಮ್ಯಕ್‌ದೃಷ್ಟಿಯಿದ್ದೇನೆ ಮೊದಲಾದವುಗಳ ವಿಚಾರ, ಗುಣಸ್ಥಾನ - ಮಾರ್ಗಣಾಸ್ಥಾನಗಳ ವಿಚಾರ, ಕರ್ಮಗಳ ಆಸ್ರವ ಭಾವಗಳ ವಿಚಾರ, ನಾಲ್ಕು ಪ್ರಕಾರದ ಬಂಧದ ವಿಚಾರ ಇವೇ ಮೊದಲಾದವುಗಳೆಲ್ಲವೂ ವ್ಯವಹಾರನಯಕ್ಕೆ ಸೇರಿದವುಗಳಾಗಿರುವುದರಿಂದ ಶುಭೋಪಯೋಗ ರೂಪವಿವೆ. ನಿಶ್ಚಯವೇ ಸತ್ಯವಿದ್ದು ವ್ಯವಹಾರವು ಉಪಚಾರವಿದೆ.

ಪರ್ಯಾಯವು ಕ್ಷಣಿಕವಿದೆ, ಆದರೆ ದುಃಖದಾಯಕವಿಲ್ಲ, ಅದರಲ್ಲಿ ಯಾವ ವಿಕಲ್ಪಗಳು ಉತ್ಪನ್ನವಾಗುತ್ತವೆ, ಅವು ದುಃಖದಾಯಕವಿವೆ. ಕೇವಲಜ್ಞಾನವು ಪರ್ಯಾಯವಿದೆ, ಕ್ಷಣಿಕವಿದೆ, ಆದರೆ ಅದು ದುಃಖದಾಯಕವಿಲ್ಲ, ಪರ್ಯಾಯದ ಕ್ಷಣಿಕತೆಯು ದುಃಖದಾಯಕವಿಲ್ಲ; ಆದರೆ ಪರ್ಯಾಯದಲ್ಲಿ ಯಾವ ರಾಗ - ದ್ವೇಷಗಳ ವಿಕಲ್ಪಗಳು ಉತ್ಪನ್ನವಾಗುತ್ತವೆ ಅವು ಜ್ಞಾತಾ - ದೃಷ್ಟಾ ಸ್ವಭಾವದಲ್ಲಿ ಪ್ರವೇಶಿಸಿದ ರೂಪವಾಗಿರುವುದರಿಂದ ದುಃಖ ರೂಪವಿವೆ. ಅದಕ್ಕಾಗಿ ಅವು ಬಿಡಲು ಯೋಗ್ಯವಿವೆ.

ಸೋದರನೇ ! ಸರ್ವಜ್ಞ ಭಗವಂತರು ಹೇಳಿರುವ ಮಾರ್ಗವೇ ನಿಜವಾಗಿ ಆತ್ಮ ಕಲ್ಯಾಣದ ಸತ್ಯಮಾರ್ಗವಿದೆ. ಅದರಲ್ಲಿ ಸ್ವಲ್ಪ ಕೂಡ ಪರಿವರ್ತನೆಯು ನಡೆಯುವ ಸಾಧ್ಯತೆಯಿಲ್ಲ, ಕಣ್ಣುಗಳಲ್ಲಿ ಸ್ವಲ್ಪ ರಜಕಣವೂ ಸೇರಬಹುದು, ಆದರೆ ಈ ಮಾರ್ಗದಲ್ಲಿ ಸ್ವಲ್ಪ ಕೂಡ ಸಮಾವೇಶವಾಗುವುದಿಲ್ಲ, ರಾಗರಹಿತ ಭೇದದ ಜ್ಞಾನ ಮಾಡುವುದು ಅದು ದುಃಖದ ಕಾರಣವಿಲ್ಲ, ಏಕೆಂದರೆ ಜ್ಞಾನವು ಅದು ಸ್ವಭಾವವಿದೆ. ಆದರೆ ಯಾವನು ರಾಗಿಯಿದ್ದಾನೆ ಮತ್ತು ಅವನು ಭೇದದ ಜ್ಞಾನ ಮಾಡಲು ಹೋಗುತ್ತಾನೆಂದರೆ ಅಲ್ಲಿ ವಿಕಲ್ಪಗಳು ಉತ್ಪನ್ನವಾಗುತ್ತವೆ ಅವು ದುಃಖದ ಕಾರಣವಿವೆ. ಭೇದದ ಜ್ಞಾನವು ಒಂದು ವೇಳೆ ದುಃಖದ ಕಾರಣವಾಗಿದ್ದಾರೆ ಸರ್ವಜ್ಞ ಭಗವಂತರಿಗೂ ದುಃಖವಾಗಬೇಕಾಗುವುದು. ಆದರೆ ಹೀಗೆ ಇಲ್ಲ, ವಿಕಲ್ಪಗಳು ದುಃಖದ ಕಾರಣವಿವೆ.

ಪ್ರಶ್ನೆ :- ಪರ್ಯಾಯವಂತೂ ದ್ರವ್ಯದ ಭೇದವೇ ಇದೆ, ಅದೇನು ಅವಸ್ತುವಾಗಿಲ್ಲ, ಎಂದ ಮೇಲೆ ಅದನ್ನು ವ್ಯವಹಾರವೆಂದೇಕೆ ಹೇಳಲಾಗುವುದು ?

ಉತ್ತರ :- ಸೋದರರೇ ! ತಮ್ಮ ವಿಚಾರವು ಸತ್ಯವಿದೆ, ಆದರೆ ಇಲ್ಲಿ ದ್ರವ್ಯ ದೃಷ್ಟಿಯಿಂದ ಅಭೇದವನ್ನು ಮುಖ್ಯ ಮಾಡಿ ಉಪದೇಶವಿದೆ. ಅಭೇದ ದೃಷ್ಟಿಯಲ್ಲಿ ಭೇದವನ್ನು ಗೌಣ ಮಾಡುವುದರಿಂದ ಅಭೇದದ ಜ್ಞಾನವು ಸರಿಯಾಗಿ ಆಗುವ ಸಾಧ್ಯತೆಯಿದೆ. ಸರಾಗಿಗೆ ಭೇದ ದೃಷ್ಟಿಯಲ್ಲಿ ವಿಕಲ್ಪಗಳು ಉಳಿದು ಬಿಡುತ್ತವೆ. ಆದುದರಿಂದ ಎಲ್ಲಿಯವರೆಗೆ ರಾಗವು ಹೊರಟು ಹೋಗುವುದಿಲ್ಲ ಅಲ್ಲಿಯವರೆಗೆ ಭೇದವನ್ನು ಗೌಣ ಮಾಡಿ ಅಭೇದವನ್ನು ಮುಖ್ಯ ಮಾಡಲಾಗುತ್ತದೆ. ವೀತರಾಗನಾದ ನಂತರವಂತೂ ಭೇದಾಭೇದ ವಸ್ತುವಿನ ಜ್ಞಾತಾನಾಗಿ ಹೋಗುತ್ತಾನೆ.

ಸರ್ವಜ್ಞ ಭಗವಂತರಂತೂ ಒಂದು ದ್ರವ್ಯದಲ್ಲಿ ಅನಂತ ಗುಣ, ಒಂದು ಗುಣದಲ್ಲಿ ಅನಂತ ಪರ್ಯಾಯ, ಒಂದೊಂದು ಪರ್ಯಾಯದಲ್ಲಿ ಅನಂತಾನಂತ ಅವಿಭಾಗ ಪ್ರತಿಚ್ಛೇದ ಮೊದಲಾದ ಸಮಸ್ತ ಭೇದಗಳನ್ನು ಒಂದು ಸಮಯದಲ್ಲಿ ತಿಳಿಯುತ್ತಾರೆ, ಆದರೆ ಅವರಿಗೆ ರಾಗವಾಗುವುದಿಲ್ಲ, ಆದುದರಿಂದ ಭೇದದ ಜ್ಞಾನವು ಅದು ರಾಗದ ಕಾರಣವಿಲ್ಲ, ಆದರೆ ರಾಗಿಗೆ ಭೇದದ ಲಕ್ಷ್ಯದಿಂದ ರಾಗವಾಗುತ್ತದೆ. ರಾಗಿಯು ಏಕರೂಪ ಸ್ವಭಾವವನ್ನು ತಿಳಿದುಕೊಂಡರೆ ಆಗ ಅವನು ನಿರ್ವಿಕಲ್ಪನಾಗಿ ಬಿಡುತ್ತಾನೆ ಮತ್ತು ಭೇದವನ್ನು ತಿಳಿದುಕೊಂಡರೆ ಆಗ ಅವನಿಗೆ ರಾಗವಾಗುತ್ತದೆ. ಅದರ ಕಾರಣ ಅವನು ರಾಗಿಯಿರುವುದರಿಂದ ರಾಗವಾಗುತ್ತದೆ. ಆದಕ್ಕಾಗಿ ವೀತರಾಗದಶೆ ಪ್ರಾಪ್ತ ಮಾಡಿಕೊಳ್ಳುವುದಕ್ಕೋಸ್ಕರ ರಾಗಿಗೆ ವ್ಯವಹಾರ ನಯದ ಲಕ್ಷ್ಯವನ್ನು ಬಿಟ್ಟುಕೊಟ್ಟು ನಿಶ್ಚಯನಯದಿಂದ ಸ್ವ-ಪರಗಳನ್ನು ತಿಳಿದುಕೊಳ್ಳಬೇಕಾಗುವುದೆಂದು ಹೇಳಲಾಗಿದೆ.

ಅಜ್ಞಾನಿ ಜೀವನು ಸ್ವಯಂ ತಿಳಿದುಕೊಳ್ಳಲು ಅಪೇಕ್ಷಿಸದಿದ್ದರೆ ಅನಂತ ತೀರ್ಥಂಕರರು ಬಂದು ಅವನಿಗೆ ತಿಳಿಸಿ ಹೇಳಿದರೂ ಕೂಡ ಅವನು ತಿಳಿದುಕೊಳ್ಳುವುದಿಲ್ಲ ಮತ್ತು ಸ್ವಯಂ ತಿಳಿದುಕೊಳ್ಳಲು ಬಯಸಿದರೆ ಅನಂತ ಪರೀಷಹಗಳು ಬಂದು ಎರಗಿದರೂ ಕೂಡ ಅಚಲವಾಗಿದ್ದುಕೊಂಡು ತಿಳಿದುಕೊಳ್ಳುತ್ತಾನೆ. ಆದುದರಿಂದ ಪ್ರಭು! ಯಾವ ಪ್ರಕಾರ ನಿನ್ನ ಶುದ್ಧತೆಯು ಮಹಾನವಿದೆ ಅದೇ ಪ್ರಕಾರ ನಿನ್ನ ಅಶುದ್ಧತೆಯು ಕೂಡ ಮಹಾನವಿದೆಯೆಂದು ಅನುಭವಪ್ರಕಾಶದಲ್ಲಿ ಹೇಳಲಾಗಿದೆ.

ಸಮ್ಯಕ್‌ದೃಷ್ಟಿ - ಜ್ಞಾನಿ ಪುರುಷನು ತನ್ನ ಸ್ವಭಾವದಲ್ಲಿ ಎಷ್ಟು ದೃಢವಾಗಿರುತ್ತಾನೆಂದರೆ ಅವನಿಗೆ ಬೇಕಾದಷ್ಟು ಪರೀಷಹಗಳುಂಟಾಗಲಿ ಇಡೀ ಜಗತ್ತೇ ವಿರೋಧವಾಗಿ ನಿಲ್ಲಲಿ, ಆದಾಗ್ಯೂ ಜ್ಞಾನಿಯು ತನ್ನ ದೃಷ್ಟಿ ಮತ್ತು ಸ್ಥಿರತೆಯಿಂದ ಸ್ವಲ್ಪವೂ ಕದಲುವುದಿಲ್ಲ.

ಜ್ಞಾನಿ ಕೂಡ ಶಾಸ್ತ್ರ ಓದುತ್ತಾನೆ, ವಿಚಾರ ಮಾಡುತ್ತಾನೆ, ಉಪದೇಶ ಕೊಡುತ್ತಾನೆ, ಉಪಯೋಗವು ಸ್ಥಿರವಾಗದಿದ್ದರೆ ವ್ಯವಹಾರನಯದ ವಿಚಾರವನ್ನೂ ಮಾಡುತ್ತಾನೆ; ಆದರೆ ಅಂತರ್ಯದಲ್ಲಿ ನಾನು ಹೇಗೆ ಶೀಘ್ರವಾಗಿ ಸ್ವಾನುಭವದಲ್ಲಿ ತಲುಪಿ ಬಿಡಬಹುದೆಂಬ ಒಂದೇ ಒಂದು ಭಾವನೆಯು ಅಖಂಡವಾಗಿರುತ್ತದೆ. ಜ್ಞಾನಿಗೆ ಕೂಡ ಎಷ್ಟು ರಾಗವು ಬರುತ್ತದೆ ಅಷ್ಟು ಬಂಧವಾಗುತ್ತದೆ. ಎಷ್ಟು ಅಬುದ್ಧಿಪೂರ್ವಕದ ರಾಗವಿರುತ್ತದೆ ಅಷ್ಟು ಬಂಧವು ಅನುಭವದ ಕಾಲದಲ್ಲಿ ಕೂಡ ಆಗುತ್ತದೆ. ಪ್ರಥಮ ಅನುಭವವಾದಾಗಲೇ ಪೂರ್ಣ ಸ್ಥಿರತೆಯಾಗುವುದಿಲ್ಲ. ಆದುದರಿಂದ ಎಷ್ಟು ಅಸ್ಥಿರತೆಯಿರುತ್ತದೆ ಅಷ್ಟು ಬಂಧವು ಜ್ಞಾನಿಗೆ ಕೂಡ ಆಗುತ್ತದೆ. ಜ್ಞಾನಿಯನ್ನು ಅಬಂಧನೆಂದು ಹೇಳಿದೆ ಅದು ದ್ರವ್ಯದೃಷ್ಟಿಯ ಅಪೇಕ್ಷೆಯಿಂದ ಹೇಳಿದೆ. ಆದರೆ ಪರ್ಯಾಯದಲ್ಲಿ ಎಷ್ಟು ರಾಗವು ಉಳಿದಿರುತ್ತದೆ ಅಷ್ಟು ಬಂಧವು ಹತ್ತನೆಯ ಗುಣಸ್ಥಾನದವರೆಗೂ ಇರುತ್ತದೆ. ಆದುದರಿಂದ ಶ್ರೀಗುರುಗಳು ಜ್ಞಾನಿಗೆ ಕೂಡ ತಿಳಿಸಿ ಹೇಳುವುದೇನೆಂದರೆ ನಿನಗೆ ಶುಭರಾಗವಿದ್ದರೂ ಕೂಡ ನಾನು ಅಂತರ್ಯದಲ್ಲಿ ಹೇಗೆ ಸ್ಥಿರಗೊಳ್ಳುವೆನೆಂಬ ಭಾವನೆಯನ್ನೇ ಇಟ್ಟುಕೊಳ್ಳಬೇಕು, ಇದುವೇ ಮೋಕ್ಷದ ಉಪಾಯವಿದೆ.

ಈಗ ಸಮ್ಯಕ್‌ದೃಷ್ಟಿ ಜೀವನು ಸುಗತಿ ಪಡೆಯುತ್ತಾನೆಂದು ಹೇಳುತ್ತಾರೆ -

ಸಮ್ಮಾ ಇಟ್ಠೀ - ಜೀವಡಹಂ ದುಗ್ಗಇ-ಗಮಣು ಣ ಹೋಇ
ಜಇ ಜಾಇ ವಿ ತೋ ದೋಸು ಣವಿ ಪುವ್ವ-ಕ್ಕಿಉ ಖವಣೇಇ ॥88॥

ಆಗದು ಎಂದು ದುರ್ಗತಿ ಗಮನ ಸಮ್ಯಕ್‌ದೃಷ್ಟಿ ಜೀವನಿಗೆ
ಆಗಮಿಸಿದರದು ಕೆಡಕಿಲ್ಲ ಪೂರ್ವಕೃತದ ಕ್ಷಯ ಮಾಡುವನು ॥88॥

ಅರ್ಥ :- ಸಮ್ಯಕ್‌ದೃಷ್ಟಿ ಜೀವದ ಗಮನವು ದುರ್ಗತಿಗಳಲ್ಲಿ ಆಗುವುದಿಲ್ಲ, ಒಂದು ವೇಳೆ ತಪ್ಪಿ ದುರ್ಗತಿಯಲ್ಲಿ ಹೋದರೂ ಹಾನಿಯಿಲ್ಲ, ಆ ಪೂರ್ವಕೃತ ಕರ್ಮದ ಕ್ಷಯ ಮಾಡುತ್ತಾನೆ.

ಸಮ್ಯಕ್‌ದೃಷ್ಟಿಯ ಗಮನವು ಅಶುಭ ಗತಿಗಳಲ್ಲಿ ಆಗುವುದಿಲ್ಲ. ಏಕೆಂದರೆ ಸಮ್ಯಕ್‌ದೃಷ್ಟಿಯ ದೃಷ್ಟಿಯಲ್ಲಿ ತನ್ನ ಪೂರ್ಣ ಸ್ವಭಾವದ್ದೇ ಆದರವಿರುತ್ತದೆ ಮತ್ತು ಸಂಸಾರದ ಕಡೆಗೆ ಉಪೇಕ್ಷೆಯ ಭಾವವಿರುತ್ತದೆ. ಒಂದು ತನ್ನ ಶುದ್ಧ ಸ್ವಭಾವದ್ದೇ ಗ್ರಹಣವಿರುತ್ತದೆ, ಉಳಿದ ಶುಭ ವಿಕಲ್ಪದಿಂದ ಹಿಡಿದು ಸಂಪೂರ್ಣ ಸಂಸಾರದ ಕುರಿತು ಜ್ಞಾನಿಗೆ ಗ್ರಹಣ ಬುದ್ಧಿಯಿರುವುದಿಲ್ಲ, ಆದರವಿರುವುದಿಲ್ಲ. ಆದರಿಂದಾಗಿ ಜ್ಞಾನಿಯು ಅಶುಭ ಗತಿಯಲ್ಲಿ ಹೋಗುವುದೇ ಇಲ್ಲ ಮತ್ತು ಎಲ್ಲಾದರೂ ಸಮ್ಯಗ್ದರ್ಶನವಾಗುವುದಕ್ಕಿಂತ ಮೊದಲು ಆಯು ಬಂಧವಾಗಿದ್ದರೆ ಹೋಗಲೂಬಹುದು, ಆದರೆ ಅದರಲ್ಲಿ ಜ್ಞಾನಿಗೆ ಹಾನಿಯಿಲ್ಲ, ಅವನ ಪೂರ್ವಕರ್ಮದ ಕ್ಷಯವೇ ಆಗುತ್ತದೆ.

ಪ್ರಶ್ನೆ :- ಯಾವನನ್ನು ಸಮ್ಯಕ್‌ದೃಷ್ಟಿಯೆಂದು ಹೇಳುತ್ತಾರೆ ?

ಉತ್ತರ :- ಯಾವನಿಗೆ ಆತ್ಮನ ಶುದ್ಧ ಸ್ವರೂಪದ ಗಾಢ ರುಚಿಯಿದೆ ಮತ್ತು ಅತೀಂದ್ರಿಯ ಸುಖದಲ್ಲಿ ಪರಮ ಪ್ರೀತಿಯಿದೆ ಅವನು ಸಮ್ಯಕ್‌ದೃಷ್ಟಿಯಿದ್ದಾನೆ. ಅವನಿಗೆ ಅಂತರ್ಯದಿಂದ ಸಮಸ್ತ ಸಂಸಾರದ ಕುರಿತು ರುಚಿ ಮತ್ತು ಪ್ರೀತಿಯು ಹೊರಟು ಹೋಗಿದೆ. ನನ್ನ ಶಾಂತಿ ಮತ್ತು ಆನಂದದ ಎದುರು ಎಲ್ಲವೂ ತುಚ್ಛವಿದೆ. ಶುಭರಾಗದಲ್ಲಿ ಕೂಡ ನನ್ನ ಆನಂದವಿಲ್ಲವೆಂದ ಮೇಲೆ ಮತ್ತು ಬೇರೆಲ್ಲಿದೆಯೆಂಬ ದೃಢ ಪ್ರೀತಿವಂತರಾದ ಜ್ಞಾನಿಗಳು ಮುಕ್ತಿಯ ಪಥಿಕರಿದ್ದಾರೆ.

ಯಾವನಿಗೆ ಮೋಕ್ಷಸ್ವರೂಪನಾದ ಆತ್ಮನ ಅಭಿರುಚಿ ಮತ್ತು ಪ್ರತೀತಿಯಾಗಿದೆ ಅವನು ಮೋಕ್ಷದ ಪಥಿಕನಿದ್ದಾನೆ. ಆತ್ಮನು ವಸ್ತು ಸ್ವಭಾವದಿಂದ ರಾಗ, ಶರೀರ ಅಥವಾ ಕರ್ಮದಿಂದ ಎಂದೂ ಬದ್ಧನಾಗಿಲ್ಲ, ವರ್ತಮಾನ ಕಾಲದ ಒಂದು ಸಮಯದ ಪರ್ಯಾಯದಲ್ಲಿ ರಾಗವಿದೆ, ಯಾರು ಪರ್ಯಾಯದ ಮೇಲಿಂದ ದೃಷ್ಟಿಯನ್ನೇ ತೆಗೆದುಹಾಕಿದ್ದಾರೆ ಮತ್ತು ಸ್ವಭಾವದ ದೃಷ್ಟಿ ಮಾಡಿದ್ದಾರೆ, ಅವರನ್ನು ಮುಕ್ತ ಸ್ವರೂಪರೆಂದೇ ತಿಳಿಯಬೇಕಾಗುವುದು. ಅವರು ಪರ್ಯಾಯದಲ್ಲಿ ಕೂಡ ಮೋಕ್ಷಮಾರ್ಗವನ್ನು ಪ್ರಾರಂಭಮಾಡಿಬಿಟ್ಟಿದ್ದಾರೆ.

ಭಗವಾನ ಆತ್ಮನಲ್ಲಿ ರಾಗ ಮತ್ತು ಕರ್ಮದ ಸಂಬಂಧವೆಲ್ಲಿದೆ ? ವಸ್ತುವಂತೂ ಪೂರ್ಣ ಮುಕ್ತವಿದೆ. ಮತ್ತು ಸಮ್ಯಕ್‌ದೃಷ್ಟಿಯ ದೃಷ್ಟಿಯು ಮುಕ್ತ ಸ್ವಭಾವದ ಮೇಲೆಯೇ ಇದೆ. ಆದುದರಿಂದ ಅಲ್ಲಿ ರಾಗ, ಕರ್ಮದ ನಿಮಿತ್ತ, ಬಂಧದ ಪರ್ಯಾಯ ಮೊದಲಾದವುಗಳ ಜ್ಞಾನವಿರುತ್ತದೆ, ಆದರೆ ಅವುಗಳ ಆದರ ಉಳಿದಿರುವುದಿಲ್ಲ.

ಭವರಹಿತ ಸ್ವಭಾವದ ದೃಷ್ಟಿಯಾಗುತ್ತಿರುವಂತೆಯೇ ಓ ಭಗವನ್ ! ನನಗೆ ಇನ್ನೂ ಅದೆಷ್ಟು ಭವಗಳು ಬಾಕಿ ಉಳಿದಿವೆಯೆಂದು ಕೇಳಲು ಜ್ಞಾನಿಗೆ ಯಾರ ಹತ್ತಿರವೂ ಹೋಗಬೇಕಾಗುವುದಿಲ್ಲ, ಅಯ್ಯಾ ! ನಾನಂತೂ ಭವರಹಿತನಾದ ವಸ್ತುವಿದ್ದೇನಲ್ಲವೇ ! ನನಗೆ ಭವದ ಪರಿಚಯವೇ ಇಲ್ಲ. ವಸ್ತು ಎಂದರೆ ಆತ್ಮನು ಅನಂತ ಗುಣಗಳ ಪಿಂಡನಿದ್ದಾನೆ. ಅವನಿಗೆ ಭವದ ಸ್ಪರ್ಶವೇ ಇಲ್ಲ. ಪರ್ಯಾಯದಲ್ಲಿ ಭವಗಳ ಪರಿಚಯವಿದೆ; ಆದರೆ ದೃಷ್ಟಿಯು ಪರ್ಯಾಯಗಳನ್ನು ಸ್ವೀಕರಿಸುವುದೇ ಇಲ್ಲ.

ಯಾವನು ತನ್ನ ದೃಷ್ಟಿಯಲ್ಲಿ ಧರ್ಮಧಾರಕನಾದ ಧರ್ಮಿಯನ್ನು ಧಾರಣ ಮಾಡಿದ್ದಾನೆ, ಅವನ ದೃಷ್ಟಿಯಲ್ಲಿ ಭವಗಳು ಇಲ್ಲವೇ ಇಲ್ಲ ಮತ್ತು ಅವನ ಪರ್ಯಾಯದ ಗಮನವು ಕೂಡ ಭವದ ಅಭಾವದ ಕಡೆಗೇನೇ ಆಗುತ್ತಲಿದೆ. ನನಗೆ ಇನ್ನು ಭವಗಳು ಇಲ್ಲವೇ ಇಲ್ಲವೆಂದು ಅವನು ನಿಃಸಂದೇಹನಾಗಿಹೋಗಿದ್ದಾನೆ. ಒಂದೆರಡು ಭವಗಳಿದ್ದರೂ ಅವು ಕೂಡ ನನ್ನ ಪುರುಷಾರ್ಥದ ಅಶಕ್ತತೆಯಿಂದ, ರಾಗದ ಕಾರಣದಿಂದ ಇವೆ. ಅವು ಕೂಡ ನನ್ನ ಜ್ಞಾನದ ಜ್ಞೇಯವಿವೆ, ಆದರೆ ನನ್ನ ಸ್ವರೂಪವಲ್ಲ. ನಾನು ಅವುಗಳ ಅಧಿಪತಿಯಿಲ್ಲ. ನಾನಂತೂ ನನ್ನ ಸಹಜಾತ್ಮ ಸ್ವರೂಪ ಪೂರ್ಣಾನಂದದ ಪ್ರಭು ಇದ್ದೇನೆಂದು ಜ್ಞಾನಿಯು ತಿಳಿಯುತ್ತಾನೆ. ಸಮ್ಯಕ್ತ್ವದ ಮಹಿಮೆಯು ಎಷ್ಟಿದೆಯೆಂಬುದನ್ನು ರತ್ನಕರಂಡ ಶ್ರಾವಕಾಚಾರದ ಎರಡು ಶ್ಲೋಕಗಳ ಆಧಾರದಿಂದ ಹೇಳಲಾಗುವುದು.

ನಾನಂತೂ ಪೂರ್ಣಾನಂದ ಸ್ವರೂಪನಿದ್ದೇನೆ, ದೋಷವು ಅದು ನನ್ನ ಸ್ವರೂಪವಲ್ಲ. ಒಂದು ಸಮಯದ ಪರ್ಯಾಯದಲ್ಲಿ ದೋಷವಿದ್ದರೂ ನನ್ನ ಇಡೀ ಆತ್ಮನು ನಿರ್ದೋಷ ಪಿಂಡನಿದ್ದಾನೆ. ಯಾವನು ಒಂದು ಸಮಯದ ಪರ್ಯಾಯದಲ್ಲಿನ ದೋಷದ ರುಚಿಯನ್ನು ಬಿಟ್ಟಿದ್ದಾನೆ ಮತ್ತು ಪೂರ್ಣಾನಂದ ಸ್ವಭಾವದಲ್ಲಿ ಅಭಿರುಚಿ ಹೊಂದಿದ್ದಾನೆ ಅವನು ಮೋಕ್ಷದ ಪಥಿಕನಿದ್ದಾನೆ. ಯಾವ ಪ್ರಕಾರ ವಸ್ತುವು ತನ್ನ ಸ್ವಭಾವದಿಂದ ಎಂದೂ ಭ್ರಷ್ಟವಾಗುವುದಿಲ್ಲ, ಅದೇ ಪ್ರಕಾರ ಯಾವನಿಗೆ ವಸ್ತುವಿನ ದೃಷ್ಟಿಯಾಗಿದೆ ಅವನು ಕೂಡ ಎಂದೂ ಮಾರ್ಗದಿಂದ ಭ್ರಷ್ಟವಾಗುವುದಿಲ್ಲ. ಯಾವನಿಗೆ ಮೋಕ್ಷಮಾರ್ಗದಿಂದ ಭ್ರಷ್ಟವಾಗುವ ಸಂದೇಹವಿದೆ ಅವನಿಗೆ ಧ್ರುವ ಸ್ವಭಾವದ-ಆತ್ಮ ವಸ್ತುವಿನ ದೃಷ್ಟಿಯೇ ಆಗಿಲ್ಲ.

ರತ್ನಕರಂಡ ಶ್ರಾವಕಾಚಾರದಲ್ಲಿ ಸ್ವಾಮಿ ಸಮಂತಭದ್ರಾಚಾರ್ಯದೇವರು ಸಮ್ಯಕ್‌ದೃಷ್ಟಿಯನ್ನು ಅವನ ಸ್ವಸನ್ಮುಖತೆಯ ಪ್ರಚಲಿತ ಧಾರೆಯ ಕರ್ಣಧಾರನೆಂದು ಹೇಳಿದ್ದಾರೆ. ಕರ್ಣಧಾರ ಎಂದರೆ ಚುಕ್ಕಾಣಿ ಹಿಡಿದು ದೋಣಿ ನಡೆಸುವ ನಾವಾಡಿಗನು. ಸಮ್ಯಗ್ದರ್ಶನದ ಮಹಿಮೆಯನ್ನು ಬಹಳಷ್ಟು ಮಾಡಿದ್ದಾರೆ. ಸಮ್ಯಗ್ದರ್ಶನವಿಲ್ಲದೆ ಸಮ್ಯಕ್ ಜ್ಞಾನ ಮತ್ತು ಸಮ್ಯಕ್ಚಾರಿತ್ರಗಳು ಆಗುವುದಿಲ್ಲ, ಸಮ್ಯಗ್ದರ್ಶನವಾಯಿತೆಂದರೆ ಏನೆಲ್ಲವೂ ಆಗಿ ಹೋದಂತಿದೆ.

ಸಮ್ಯಕ್‌ದೃಷ್ಟಿಯು ಸಂಸಾರದ ಕಡೆಗೆ ಬೆನ್ನು ಮಾಡಿರುತ್ತಾನೆ; ಎಂದರೆ ವಿಕಲ್ಪ ಮೊದಲಾದವುಗಳ ಕುರಿತು ಉಪೇಕ್ಷೆಯ ಭಾವವನ್ನೇ ಇಟ್ಟಿರುತ್ತಾನೆ, ಮತ್ತು ನಿರ್ವಿಕಲ್ಪ ಸ್ವಭಾವದ ಅಪೇಕ್ಷೆಯಿಟ್ಟಿರುತ್ತಾನೆ. ಯಾವ ಪ್ರಕಾರ ಮಕ್ಷಿಕದಂಥ ಚತುರಿಂದ್ರಿಯ ಪ್ರಾಣಿಯು ಕೂಡ ಸಕ್ಕರೆಯಲ್ಲಿ ಸಿಹಿಯಿರುವುದರಿಂದ ಅದು ಅಲ್ಲಿಂದ ಹೊರಟು ಹೋಗುವುದಿಲ್ಲ

ಮತ್ತು ಅದು ಪಟಕದ ಮೇಲೆ ಎಂದೂ ಕುಳಿತುಕೊಳ್ಳುವುದಿಲ್ಲ. ಅದೇ ಪ್ರಕಾರ ಆತ್ಮನು ಸಕ್ಕರೆಯ ಸಮಾನವಾಗಿ ಅತೀಂದ್ರಿಯ ಆನಂದದ ರಸಕಂದನಿದ್ದಾನೆ - ಪುಂಜನಿದ್ದಾನೆ. ಅಲ್ಲಿ ಯಾವನ ದೃಷ್ಟಿ ಬಿದ್ದಿದೆ ಆ ಸಮ್ಯಕ್‌ದೃಷ್ಟಿಯ ದೃಷ್ಟಿಯು ಅಲ್ಲಿಂದ ಹೊರಗೆ ಬರುವುದೇ ಇಲ್ಲ. ಆನಂದಘನರು ಕೂಡ 'ಚಾಖೇ ರಸ ಕರೀ ಛೂಟೇ' ಎಂದು ಹೇಳಿದ್ದಾರೆ. ಎಂದರೆ ಒಂದು ಬಾರಿ ರಸದ ಸ್ವಾದ ನೋಡಿದ ನಂತರ ಅಲ್ಲಿಂದ ಹೇಗೆ ಬಿಡುವುದು? ಧರ್ಮಾತ್ಮನು ಅತೀಂದ್ರಿಯ ಆನಂದದ ರಸಾಸ್ವಾದ ಮಾಡಿದ್ದಾನೆ, ಈಗ ಇದರಲ್ಲಿ ರಸವಿಲ್ಲವೆಂದು ಅವನಿಗೆ ಸ್ವರ್ಗದಿಂದ ದೇವನು ಬಂದು ಹೇಳಿದರೂ ಕೂಡ ಅವನು ನಾನು ಸ್ವಯಂ ಅನುಭವಿಸಿದ್ದೇನೆಂದು ಹೇಳುತ್ತಾನೆ. ಜ್ಞಾನಿಗೆ ತನ್ನ ಅನುಭವದಲ್ಲಿ ಸಂದೇಹವಿರುವುದಿಲ್ಲ. ಸ್ವಯಂ ವಸ್ತುವಿನ ಅನುಭವ ತೆಗೆದುಕೊಂಡ ನಂತರ ಸಂದೇಹ ಉಳಿಯುವುದಾದರೂ ಹೇಗೆ ?

ಜ್ಞಾನಿಗಳಿಗೆ ಸ್ವಭಾವದ ಕುರಿತು ಅತ್ಯಂತ ಪ್ರೀತಿಯಿರುತ್ತದೆ ಮತ್ತು ಪರಭಾವಗಳ ಕುರಿತು ಎಂದರೆ ಸಂಸಾರದ ಕುರಿತು ಅತ್ಯಂತ ಅರುಚಿಯಿರುತ್ತದೆ. ಸ್ವಭಾವದ ರುಚಿಯಾಗಿರುವುದರಿಂದ ವೀರ್ಯವು ಕೂಡ ಅದೇ ಕಡೆಗೆ ಕಾರ್ಯ ಮಾಡುತ್ತದೆ. ಏಕೆಂದರೆ 'ರುಚಿ ಅನುಯಾಯಿ ವೀರ್ಯ'ವಿದೆ. ಮತ್ತು ಜ್ಞಾನಿಗೆ ಸಂಸಾರ, ಶರೀರ ಹಾಗೂ ಭೋಗಗಳಿಂದ ವಿರಕ್ತಿಯಾಗಿ ಹೋಗಿರುತ್ತದೆ. ಸಂಸಾರದಲ್ಲಿ ನಾಲ್ಕೂ ಗತಿಗಳೊಳಗೆ ಆಕುಲತೆಯಿದೆ, ಶರೀರವು ಕಾರಾಗೃಹದ ಸಮಾನವಿದೆ ಮತ್ತು ಇಂದ್ರಿಯ ಭೋಗಗಳು ಅತೃಪ್ತಿಕಾರಿಯಿವೆಯೆಂದು ತಿಳಿದುಕೊಂಡು ಜ್ಞಾನಿಗಳಿಗೆ ವೈರಾಗ್ಯವಾಗಿರುತ್ತದೆ.

ಜ್ಞಾನಿಗಳಿಗೆ ಒಂದಿಷ್ಟು ಭೋಗಾದಿಗಳ ರಾಗವು ಬಂದು ಬಿಡುತ್ತದೆ, ಆದರೆ ಅವರಿಗೆ ಅದರ ಕುರಿತು ಖೇದವು ವರ್ತಿಸುತ್ತದೆ. ಸ್ವಯಂ ತಮ್ಮ ರಾಗದ ನಿಂದೆ ಮಾಡುತ್ತಾರೆ, ಗುರುಗಳ ಹತ್ತಿರ ಗರ್ಹೆ ಮಾಡುತ್ತಾರೆ.

ಯಾವನಿಗೆ ಆತ್ಮನ ಪ್ರತೀತಿಯಾಗಿದೆ ಮತ್ತು ಅನಂತಾನುಬಂಧಿಯ ನಾಶವಾಗಿದೆ ಅಂಥ ಧರ್ಮಾತ್ಮನು ಪರ್ಯಾಯದಲ್ಲಿ ತನ್ನನ್ನು ತುಚ್ಛವಾಗಿ ನೋಡುತ್ತಾನೆ. ಆಹಾ ! ಭಗವಂತರ ಕೇವಲಜ್ಞಾನದ ದಶೆಯೆಲ್ಲಿ, ಆ ಮುನಿರಾಜರ ಪ್ರಚುರ ಸ್ವಸಂವೇದನದ ದಶೆಯೆಲ್ಲಿ ಅವರುಗಳ ಅಪೇಕ್ಷೆಯಿಂದ ನನ್ನ ಪರ್ಯಾಯದಲ್ಲಿ ತುಂಬ ನ್ಯೂನತೆಯಿದೆ. ನಾನು ಪಾಮರನಿದ್ದೇನೆಂದು ಸ್ವಾಮಿ ಕಾರ್ತಿಕೇಯ ಮುನಿರಾಜರು ಹೇಳುತ್ತಾರೆ.

ಸಮಯಸಾರದ ಐದನೆಯ ಗಾಥೆಯಲ್ಲಿ ಭ. ಕುಂದಕುಂದಾಚಾರ್ಯ ದೇವರು ಕೂಡ ಹೇಳುವುದೇನೆಂದರೆ ಸರ್ವಜ್ಞ ಭಗವಂತರಿಂದ ಹಿಡಿದು ನಮ್ಮ ಗುರುಗಳವರೆಗೆ ಎಲ್ಲರೂ ಅಂತರ್ಯದಲ್ಲಿ ನಿಮಗ್ನರಿದ್ದಾರೆ. ಅವರು ನಮ್ಮ ಮೇಲೆ ಕೃಪೆ ಮಾಡಿ ಭಗವನ್ ! ನೀನು ಶುದ್ಧನಿರುವೆಯೆಂದು ಉಪದೇಶ ಕೊಟ್ಟಿದ್ದಾರೆ. ಅದನ್ನು ಕೇಳಿ ನಮಗೆ ಪ್ರಚುರ ಸ್ವಸಂವೇದನವು ಪ್ರಕಟವಾಗಿದೆ. ನಮ್ಮ ಪಾತ್ರತೆ ನೋಡಿ ಗುರುಗಳು ಉಪದೇಶ ಕೊಟ್ಟರೆಂದು ಆಚಾರ್ಯ ಭಗವಂತರು ಹೇಳಲಿಲ್ಲ. ಆದರೆ ಗುರುಗಳು ಕೃಪೆ ಮಾಡಿ ನೀನು ದ್ವಾದಶಾಂಗದ ಸಾರರೂಪನಾದ 'ಶುದ್ಧಾತ್ಮ'ನಿರುವೆಯೆಂದು ಉಪದೇಶ ಕೊಟ್ಟಿದ್ದಾರೆಂದು ಹೇಳಿದ್ದಾರೆ.

ಶುದ್ಧ ಚೈತನ್ಯದ ಕಡೆಗೆ ಯಾವನ ಪ್ರವೃತ್ತಿಯಿದೆ ಅವನು ತನ್ನ ರಾಗ ಪರಿಣಾಮದ ನಿಂದೆ - ಗರ್ಹೆ ಮಾಡುತ್ತಾನೆ, ಇದು ಅವನ ಲಕ್ಷಣವಿದೆ. ರಾಗವುಂಟಾಗಿದೆ ಒಳ್ಳೆಯದಿದೆಯೆಂದು ಅವನಿಗೆನಿಸುವುದಿಲ್ಲ. ಧರ್ಮಾತ್ಮನಿಗೆ ಯಾವಾಗಲೂ ಅಕಷಾಯ ಭಾವದ ಜಾಗೃತಿಯಿರುತ್ತದೆ. ಮತ್ತು ಜಿನೇಂದ್ರದೇವ, ನಿರ್ಗ್ರಂಥ ಗುರು ಹಾಗೂ ಜಿನವಾಣಿಯ ಕುರಿತು ಗಾಢತರ ಭಕ್ತಿಯು ವರ್ತಿಸುತ್ತದೆ. ಸ್ತುತಿ, ವಂದನೆ, ಪೂಜೆ ಸ್ವಾಧ್ಯಾಯಗಳನ್ನು ಕೂಡ ಮಾಡುತ್ತಾನೆ. ಆದರೆ ಈ ಸಮಸ್ತ ಶುಭಭಾವಗಳು ಕೇವಲ ಸಹಕಾರೀ ನಿಮಿತ್ತವಿವೆಯೆಂದು ಧರ್ಮಾತ್ಮನು ತಿಳಿಯುತ್ತಾನೆ.

ಧರ್ಮಾತ್ಮನಿಗೆ ಸಾಧರ್ಮಿ ಸೋದರ - ಸೋದರಿಯರ ಕುರಿತು ವಾತ್ಸಲ್ಯವು ಬರುತ್ತದೆ. ಸಾಧರ್ಮಿಯ ವಿಶೇಷ ಅವಸ್ಥೆಯನ್ನು ನೋಡಿ ದ್ವೇಷವು ಬರುವುದಿಲ್ಲ, ಆದರೆ ಅಹಹ ! ಧನ್ಯ ಅವತಾರವಿದೆಯೆಂದು ಎನಿಸುತ್ತದೆ.

ನನಗೆ ಕೂಡ ಇಂಥ ಅವಸ್ಥೆಯನ್ನು ಪ್ರಕಟ ಮಾಡಿಕೊಳ್ಳುವುದಿದೆ. ಧರ್ಮವು ಧರ್ಮಿಯಿಲ್ಲದೆ ಇರುವುದಿಲ್ಲವೆಂದು ರತ್ನಕರಂಡ ಶ್ರಾವಕಾಚಾರದಲ್ಲಿ ಬರುತ್ತದೆ. ಆದುದರಿಂದ ಯಾವನಿಗೆ ಧರ್ಮಾತ್ಮನ ಮೇಲೆ ಪ್ರೀತಿಯಿಲ್ಲ ಅವನಿಗೆ ಧರ್ಮದ ಮೇಲೆಯೂ ಪ್ರೀತಿಯಿಲ್ಲವೆಂದು ತಿಳಿಯಬೇಕು.

ಸಮ್ಯಕ್‌ದೃಷ್ಟಿಯು ಯಾರ ಜತೆಯಲ್ಲೂ ಅನ್ಯಾಯ ಸಹಿತವಾದ ವ್ಯವಹಾರ ಮಾಡುವುದಿಲ್ಲ. ಸಮ್ಯಕ್‌ದೃಷ್ಟಿಗೆ ನಲವತ್ತೊಂದು ಪ್ರಕೃತಿಗಳ ಬಂಧವಾಗುವುದಿಲ್ಲ. ಅವನು ಮರಣ ಹೊಂದಿ ದೇವ ಮತ್ತು ಮನುಷ್ಯ ಗತಿಯಲ್ಲಿಯೇ ಜನ್ಮ ತಾಳುತ್ತಾನೆ. ಎಲ್ಲಾದರೂ ಸಮ್ಯಗ್ದರ್ಶನದ ಪ್ರಾಪ್ತಿಯ ಮೊದಲು ನರಕ, ತಿರ್ಯಂಚ ಆಯುವಿನ ಬಂಧವಾಗಿ ಹೋಗಿದ್ದರೆ ಅಲ್ಲಿ ಸಮಭಾವದಿಂದ ದುಃಖದ ಸಹನೆ ಮಾಡಿ ತನ್ನ ಪೂರ್ವ ಬದ್ಧ ಕರ್ಮದ ನಿರ್ಜರೆ ಮಾಡುತ್ತಾನೆ. ಸಮ್ಯಕ್‌ದೃಷ್ಟಿಯ ಸ್ಥಿತಿಯು 'ಬಾಹ್ಯದಲ್ಲಿ ನಾರಕೀ ಕೃತ ದುಃಖವನ್ನು ಭೋಗಿಸುತ್ತಿದ್ದರೂ ಅಂತರ್ಯದಲ್ಲಿ ಸುಖರಸವನ್ನು ಗಳಗಳ ಕುಡಿಯುವಂತೆ'ರುತ್ತದೆ. ಎಷ್ಟು ಕಷಾಯ ಭಾವಗಳಿವೆ ಅಷ್ಟು ಜ್ಞಾನಿಗೆ ಕೂಡ ದುಃಖವಿದೆ. ಆದರೆ ಅದನ್ನು ಗೌಣ ಮಾಡಿ ಅತೀಂದ್ರಿಯ ಸ್ವಭಾವದ ಮುಖ್ಯತೆಯಿಂದ ಆನಂದದ ಅನುಭವವಿದೆ. ಆದುದರಿಂದ ಸಮ್ಯಕ್‌ದೃಷ್ಟಿಯು ನರಕದಲ್ಲಿದ್ದರೂ ಕೂಡ ಸುಖಿ ಮತ್ತು ಮಿಥ್ಯಾದೃಷ್ಟಿಯು ಒಂಭತ್ತನೆಯ ಗ್ರೈವೇಯಕದಲ್ಲಿದ್ದರೂ ಕೂಡ ದುಃಖಿಯೇ ಇದ್ದಾನೆ. ಸಂಯೋಗದ ಕಾರಣದಿಂದ ಸುಖ-ದುಃಖಗಳಿಲ್ಲ.

ಸಮ್ಯಗ್ದರ್ಶನವಾಗುವ ಮೊದಲು ಆಯುವಿನ ಬಂಧವಾಗಿ ಹೋಗಿದ್ದರೆ ಸಮ್ಯಕ್‌ದೃಷ್ಟಿಯು ಎಲ್ಲಾದರೂ ನರಕದಲ್ಲಿ ಹೋದರೂ ಕೂಡ ಅವನಿಗೆ ಪೂರ್ವಕೃತ ಕರ್ಮಗಳ ಹಾಗೂ ಅಶುದ್ಧ ಭಾವಗಳ ನಿರ್ಜರೆಯೇ ಆಗುತ್ತದೆ ಆದರಂತೆ ನವೀನ ಕರ್ಮದ ಬಂಧವಾಗುವುದಿಲ್ಲ. ಸಮ್ಯಕ್‌ದೃಷ್ಟಿಗೆ ಪೂರ್ಣಾನಂದ ಸ್ವಭಾವದ ಮುಖ್ಯತೆಯಿರುವುದರಿಂದ ಮತ್ತು ಸಮ್ಯಗ್ದರ್ಶನ ರೂಪಿ ಸೂರ್ಯನ ಉದಯವಾಗಿರುವುದರಿಂದ ಅವನು ಅವ್ರತಿಯಿದ್ದರು ಕೂಡ ಅವನಿಗೆ ನರಕ, ತಿರ್ಯಂಚ, ಸ್ತ್ರೀ , ನಪುಂಸಕವಾಗುವುದಕ್ಕೆ ಕಾರಣವಾಗುವಂಥ ಅಥವಾ ನೀಚ ಗತಿ ಮೊದಲಾದ ಅವಸ್ಥೆಗೆ ಪ್ರಾಪ್ತವಾಗುವಂಥ ಪಾಪದ ಬಂಧವಾಗುವುದಿಲ್ಲ.

ಸಮ್ಯಕ್‌ದೃಷ್ಟಿಯು ಅಖಂಡ ಪ್ರತಾಪವಂತನಿರುತ್ತಾನೆ, ವಿದ್ಯಾವಂತನಿರುತ್ತಾನೆ, ಸಮ್ಯಕ್‌ದೃಷ್ಟಿಯ ಬುದ್ಧಿಯು ವೃದ್ಧಿಯಾಗುತ್ತಿರುತ್ತದೆ. ಪುಣ್ಯದ ವೃದ್ಧಿಯೂ ಆಗುತ್ತಿರುತ್ತದೆ. ಮತ್ತು ಸಮ್ಯಕ್‌ದೃಷ್ಟಿಯ ಪುರುಷಾರ್ಥವು ಕೂಡ ಬೆಳೆಯುತ್ತಿರುತ್ತದೆ.

ಸಮ್ಯಕ್‌ದೃಷ್ಟಿಯು ಯಾವಾಗಲೂ ವಿಜಯವಂತನಿರುತ್ತಾನೆ. ಅವನು ಹೇಳುವುದೇನೆಂದರೆ ರಾಗ ಮತ್ತು ಕರ್ಮಗಳೆಂದೂ ನಮ್ಮನ್ನು ಸೋಲಿಸುವ ಸಾಧ್ಯತೆಯಿಲ್ಲ, ನಾವು ಹಿಂದೆ ಬೀಳುವಂಥವರಲ್ಲ, ನಮ್ಮದು ಸದಾ ವಿಜಯವಿದೆ. ಸಮ್ಯಕ್‌ದೃಷ್ಟಿಯ ಭಾವನೆಯು ಯಾವಾಗ ಪುರುಷಾರ್ಥ ಮಾಡಿ ಚಾರಿತ್ರಪ್ರಕಟಮಾಡಿಕೊಳ್ಳುವೆನು ಯಾವಾಗ ಕೇವಲಜ್ಞಾನ ಪಡೆಯುವೆನೆಂದು ಅತ್ಯಂತ ಬಲಶಾಲಿಯಾಗಿರುತ್ತದೆ., ಕರ್ಮವು ನನ್ನನ್ನು ವ್ಯಾಕುಲ ಮಾಡಬಹುದು, ಭವಗಳನ್ನು ಹೆಚ್ಚಿಸಬಹುದೆಂಬ ಶಂಕೆಯು ಅವನಿಗೆ ಇರುವುದೇ ಇಲ್ಲ.

ತನ್ನ ಆತ್ಮನನ್ನು ಮುಖ್ಯ ಮಾಡಿಕೊಂಡಿರುವಂಥ ಸಮ್ಯಕ್‌ದೃಷ್ಟಿಯು ಬಾಹ್ಯದಲ್ಲಿ ಕೂಡ ಎಲ್ಲರಿಗಿಂತ ಮುಖ್ಯನೆಂದು ಗಣಿಸಲಾಗುತ್ತದೆ. ಯಾವ ಪ್ರಕಾರ ವಜ್ರದ ಹರಳನ್ನು ಮೂಟೆಯಲ್ಲಿ ಇಡಲಾಗುವುದಿಲ್ಲ ಅದನ್ನಂತೂ ಮುಕಮಲ್ಲದ ಡಬ್ಬದಲ್ಲಿಯೇ ಇಡಲಾಗುತ್ತದೆ, ಅದೇ ಪ್ರಕಾರ ಸಮ್ಯಕ್‌ದೃಷ್ಟಿಯು ಪುಣ್ಯವಂತರಾದ ತಂದೆ-ತಾಯಿಗಳಲ್ಲಿಯೇ ಜನ್ಮ ತೆಗೆದುಕೊಳ್ಳುತ್ತಾನೆ, ಅವನು ಸಾಧಾರಣ ಮನೆತನದಲ್ಲಿ ಹುಟ್ಟುವುದಿಲ್ಲ, ಸಮ್ಯಕ್ತ್ವದ ಭೂಮಿಕೆಯಲ್ಲಿ ಯಾವ ಪುಣ್ಯವು ಕಟ್ಟುತ್ತದೆ ಅಂಥ ಪುಣ್ಯವು ಮಿಥ್ಯಾತ್ವದ ಭೂಮಿಕೆಯಲ್ಲಿ ಅನಂತಕಾಲ ಕಳೆದರೂ ಎಂದೂ ಕಟ್ಟುವುದಿಲ್ಲ, ಸಮ್ಯಕ್‌ದೃಷ್ಟಿಯ ಪುಣ್ಯದ ಜಾತಿ ಭಿನ್ನವಿರುತ್ತದೆ.

ಸಮಸ್ತ ವ್ಯವಹಾರವನ್ನು ಬಿಟ್ಟುಕೊಟ್ಟು ಸ್ವರೂಪದಲ್ಲಿ ವಿಹಾರ ಮಾಡೆಂದು ಗ್ರಂಥ ಕರ್ತೃಗಳಾದ ಆಚಾರ್ಯ ಯೋಗೀಂದ್ರದೇವರು ಹೇಳುತ್ತಾರೆ. ಸ್ವಭಾವದಲ್ಲಿ ಏಕತೆಯಾಗಿರುವಂಥ ಸಮ್ಯಕ್‌ದೃಷ್ಟಿಯು ದೃಷ್ಟಿಯ ಅಪೇಕ್ಷೆಯಿಂದ ರಾಗದಿಂದ ಮುಕ್ತನೇ ಇದ್ದಾನೆ. ಜ್ಞಾನಿಯ ದೃಷ್ಟಿಯಲ್ಲಿ ಅಥವಾ ದೃಷ್ಟಿಯ ವಿಷಯದಲ್ಲಿ ಎಲ್ಲಿಯೂ ವ್ಯವಹಾರದ ಮುಖ್ಯತೆಯಿರುವುದಿಲ್ಲ, ಅವನಿಗೆ ವ್ಯವಹಾರವು ಗೌಣರೂಪದಿಂದ ಇರುತ್ತದೆ.

ಆತ್ಮನಲ್ಲಿ ಮೂರು ಕಾಲದ ಸಮಯಗಳಿಗಿಂತಲೂ ಅನಂತ ಗುಣಿತವಾದ ಗುಣಗಳಿದ್ದು ಅವುಗಳಲ್ಲಿ ಸಮ್ಯಕ್‌ದೃಷ್ಟಿಯು ವಿಹಾರ ಮಾಡುತ್ತಾನೆ ಮತ್ತು ಶೀಘ್ರವಾಗಿ ಸಂಸಾರದಿಂದ ಬಿಡುಗಡೆಯಾಗಿ ಬಿಡುತ್ತಾನೆ.

ಜನರು ಜಮಾ - ಖರ್ಚಿನ ವಹಿಯಲ್ಲಿ 'ಶುಭ-ಲಾಭ'ವೆಂದು ಬರೆಯುತ್ತಾರೆ, ಆದರೆ ಅಲ್ಲಿ ರಜಕಣದ ಲಾಭದ ಮಾತಿದೆ. ಸಮ್ಯಕ್‌ದೃಷ್ಟಿಯಂತೂ ತನ್ನ ಅನಂತ ಗುಣಗಳ ಪರ್ಯಾಯಗಳಲ್ಲಿ ಶುದ್ಧಿಯ ವೃದ್ಧಿಯಾಗುವುದನ್ನೇ ತನ್ನ ಲಾಭವೆಂದು ಮನ್ನಿಸುತ್ತಾನೆ. ಇದು ಬರೇ ಲಾಭವಲ್ಲ, ಆದರೆ ಅನಂತ ಗುಣಿತವಾದ ಲಾಭವಿದೆ.

ನಾನು ವಸ್ತು ಸ್ವಭಾವದಿಂದ ಪರಿಪೂರ್ಣ ಶುದ್ಧನಿದ್ದೇನೆ. ದೃಷ್ಟಿಯ ವಿಷಯವು ದ್ರವ್ಯವಿದ್ದು, ದೃಷ್ಟಿಯು ಪೂರ್ಣ ಶುದ್ಧತೆಯನ್ನೇ ಸ್ವೀಕಾರ ಮಾಡುತ್ತದೆ. 'ಸಿದ್ಧ ಸಮಾನ ಸದಾ ಪದ ಮೇರೋ' ಎಂದು ಬನಾರಸೀದಾಸರು ಹೇಳಿದ್ದಾರೆ. ವ್ಯವಹಾರ ದೃಷ್ಟಿಯಲ್ಲಿ ಕರ್ಮದ ಸಂಯೋಗವಿದ್ದರೂ ಅದು ತ್ಯಾಗಯೋಗ್ಯವಿದೆ.

ಜ್ಞಾನಿಗಳು ಒಂದು ಕ್ಷಣವೂ ಸಂಸಾರದಲ್ಲಿ ಇರಲು ಬಯಸುವುದಿಲ್ಲ, ಅವರು ಆಶ್ರಯದ ರೂಪದಲ್ಲಿ ಒಂದು ಚೈತನ್ಯವನ್ನೇ ಮನ್ನಿಸುತ್ತಾರೆ. ಈ ಸಂಸಾರದಲ್ಲಿ ಉಳಿದ ಯಾವವೂ ಆಶ್ರಯರೂಪವಿಲ್ಲ. ಅದೆಷ್ಟೋ ವರುಷಗಳ ಮೊದಲು ಒಂದು ವಿಚಿತ್ರ ಘಟನೆ ಸಂಭವಿಸಿತ್ತು. ಐದಾರು ನೂರು ಮನುಷ್ಯರ ಸಮೂಹವೊಂದು ಅರಣ್ಯದೊಳಗಿಂದ ಹಾಯ್ದು ಹೋಗುತ್ತಲಿತ್ತು. ಆಗ ಆ ಅರಣ್ಯ ಮಧ್ಯದಲ್ಲಿ ಈರ್ವರು ತರುಣ ಹುಡುಗರಿಗೆ ಇದ್ದಕ್ಕಿದ್ದಂತೆ ವಾಂತಿ-ಭೇದಿಯು ಆರಂಭವಾಯಿತು. ಕ್ಷಣಾರ್ಧದಲ್ಲಿ ಅವರು ತುಂಬ ಸೋತು ಹೋದರು, ಅವರಲ್ಲಿ ನಡೆಯುವ ಶಕ್ತಿಯೇ ಉಳಿಯಲಿಲ್ಲ, ಅವರನ್ನು ಯಾರು ಹೊತ್ತುಕೊಂಡು ಹೋಗುವರು ? ಜನ್ಮಕೊಟ್ಟ ತಂದೆ - ತಾಯಿಗಳು ಕೂಡ ಅಂಥ ಸ್ಥಿತಿಯಲ್ಲಿ ಅರಣ್ಯದೊಳಗೆ ಅವರೀರ್ವರನ್ನೇ ಬಿಟ್ಟುಕೊಟ್ಟು ಹೊರಟು ಹೋಗುತ್ತಾರೆ. ಸಂಸಾರದಲ್ಲಿ ಯಾರಿಗೆ ಯಾರು ಆಶ್ರಯದಾತರಿದ್ದಾರೆ ?

ಸಮ್ಯಕ್‌ದೃಷ್ಟಿಗೆ ಸಕಲ ಚಾರಿತ್ರವಿಲ್ಲ, ಆದರೆ ತನ್ನ ಸ್ವರೂಪದಲ್ಲಿ ವಿಹಾರ ಮಾಡುವುದು ಅದುವೇ ಚಾರಿತ್ರವಿದೆಯೆಂದು ಚಾರಿತ್ರದ ಸರಿಯಾದ ಪ್ರತೀತಿಯಾಗಿ ಹೋಗಿದೆ. ಚಾರಿತ್ರವನ್ನು ಹೊರತುಪಡಿಸಿ ಮುಕ್ತಿಯ ಸಲುವಾಗಿ ಬೇರೆ ಯಾವ ಉಪಾಯವಿಲ್ಲ. ಸಮ್ಯಕ್‌ದೃಷ್ಟಿಗಳು ಸಮಸ್ತ ವ್ಯವಹಾರವನ್ನು ಗೌಣ ಮಾಡಿ ಸ್ವರೂಪದ ಧ್ಯಾನ ಮಾಡುತ್ತಾರೆ, ಅನುಭವ ಮಾಡುತ್ತಾರೆ ಮತ್ತು ಅದರಲ್ಲಿಯೇ ಸ್ಥಿರವಾಗುವಂತಿದೆಯೆಂದು ಮನ್ನಿಸುತ್ತಾರೆ. ಸ್ವರೂಪದಿಂದ ಹೊರಗೆ ಬರುವುದು ಅದು ದುಃಖವಿದೆ, ರೋಗವಿದೆ, ಶೋಕವಿದೆ. ಆದರೆ ಸ್ವರೂಪದಲ್ಲಿ ಅಖಂಡ ಸ್ಥಿರವಿರುವ ಸಾಧ್ಯತೆಯಿಲ್ಲದಿರುವುದರಿಂದ ಹೊರಗೆ ವ್ಯವಹಾರದಲ್ಲಿ ಬರುತ್ತಾರೆ. ಸಾಧುಗಳು ಕೂಡ ಸ್ವರೂಪದಲ್ಲಿ ಉಪಯೋಗವು ಸ್ಥಿರಗೊಳ್ಳದಾಗ ಹೊರಗೆ ಬರಬೇಕಾಗುತ್ತದೆ. ಆದರೆ ಸುಖರೂಪವಂತೂ ಸ್ವರೂಪ ಲೀನತೆಯೇ ಇದೆಯೆಂದು ಮನ್ನಿಸುತ್ತಾರೆ. ಬಾಹ್ಯ ವ್ಯವಹಾರದಲ್ಲಿ ಅವರಿಗೆ ಹರುಷವಿರುವುದಿಲ್ಲ, ಉಲ್ಲಸಿತವಾದ ವೀರ್ಯವಂತೂ ಸ್ವಭಾವದ ಕಡೆಗೆ ಪ್ರವೃತ್ತವಾಗಿರುತ್ತದೆ, ಆದುದರಿಂದ ವ್ಯವಹಾರದ ಕುರಿತು ಉದಾಸೀನತೆಯಿದೆ, ವ್ಯವಹಾರದ ಆದರವಿಲ್ಲ.

ಮುನಿಗಳಿಗಂತೂ ಹೇಗೆ ಹೇಗೆ ಆತ್ಮ ಧ್ಯಾನದ ಶಕ್ತಿಯು ಬೆಳೆಯುತ್ತ ಹೋಗುತ್ತದೆ, ಹಾಗೆ ಹಾಗೆ ವ್ಯವಹಾರವು ಬಿಡುತ್ತ ಹೋಗುತ್ತದೆ. ಮುನಿರಾಜರಿಗಂತೂ ಒಂದು ಅಂತರ್ಮುಹೂರ್ತಕ್ಕಿಂತ ಹೆಚ್ಚು ಕಾಲ ಉಪಯೋಗವು ಹೊರಗೆ ಇರುವುದೇ ಇಲ್ಲದಷ್ಟು ಶುದ್ಧಿಯು ಪ್ರಕಟವಾಗಿಯೇ ಇದೆ. ವಿಕಲ್ಪಗಳು ಬರುತ್ತಿರುತ್ತವೆ. ಆದರೆ ಅದರಲ್ಲಿ ತತ್ಪರತೆಯಿರುವುದಿಲ್ಲ. ಪುರುಷಾರ್ಥದ ಅಸಮರ್ಥತೆಯಿಂದ ವ್ಯವಹಾರದಲ್ಲಿ ಬರಬೇಕಾಗುತ್ತದೆ, ಆದರೆ ಭಾವನೆಯು ಮಾತ್ರ

ಪುನಃ ಪುನಃ ಶುದ್ಧ ಸ್ವರೂಪದಲ್ಲಿ ಸ್ಥಿರವಿರುವುದೇ ಇರುತ್ತದೆ. ವಿಕಲ್ಪಗಳ ಕುರಿತು ಖೇದವು ವರ್ತಿಸುತ್ತದೆ. ನಾನು ಶುದ್ಧೋಪಯೋಗದ ಪ್ರತಿಜ್ಞೆ ಮಾಡಿದ್ದೇನೆ, ಆದಾಗ್ಯೂ ಆಹಾರದ ರಾಗವು ಬರುತ್ತಿರುವುದರಿಂದ ನನ್ನ ಪ್ರತಿಜ್ಞೆಯು ಭಂಗವಾಗುತ್ತಿದೆ. ಆದುದರಿಂದ ನಾನು ಪುನಃ ಶುದ್ಧೋಪಯೋಗದ ಪ್ರತಿಜ್ಞೆ ಮಾಡುತ್ತೇನೆ. ನನಗಂತೂ ಶುದ್ಧೋಪಯೋಗದಲ್ಲಿಯೇ ಇರುವುದಿದೆಯೆಂದು ಜಯಧವಲದಲ್ಲಿ ಬರುತ್ತದೆ. ಅಯ್ಯಾ ! ಇಂಥ ದಶೆಯು ಅದು ಯಥಾರ್ಥ ಮೋಕ್ಷಮಾರ್ಗವಿದೆ. ಸ್ವರೂಪ ಲೀನತೆಯೇ ನಿಜವಾಗಿ ಮೋಕ್ಷದ ಉಪಾಯವಿದೆ, ಮಧ್ಯದಲ್ಲಿ ವ್ಯವಹಾರದ ವಿಕಲ್ಪವು ಬರುತ್ತದೆ, ಅದಂತೂ ಬಂಧದ ಕಾರಣವಿದೆ.

ತತ್ತ್ವಜ್ಞಾನಿಯಾದ ಸಮ್ಯಕ್‌ದೃಷ್ಟಿಯು ದ್ರವ್ಯ-ಕ್ಷೇತ್ರ-ಕಾಲ-ಭಾವಗಳನ್ನು ಮತ್ತು ತಮ್ಮ ಪುರುಷಾರ್ಥವನ್ನು ನೋಡಿಕೊಂಡು ಪ್ರತಿಜ್ಞೆ ಸ್ವೀಕರಿಸುತ್ತಾರೆ. ಜನರ ಜತೆಯಲ್ಲಿ ಸೇರಿ ಯಾವುದೇ ಒತ್ತಡಕ್ಕೆ ಒಳಗಾಗಿ ಅವರು ಯಾವುದೇ ಪ್ರತಿಜ್ಞೆ ತೆಗೆದುಕೊಳ್ಳುವುದಿಲ್ಲ. ಎಲ್ಲಿಯವರೆಗೆ ವೈರಾಗ್ಯವು ಸ್ವಾಭಾವಿಕವಾಗಿ ಬರುವುದಿಲ್ಲ ಅಲ್ಲಿಯವರೆಗೆ ಶ್ರಾವಕರೂಪದಲ್ಲಿ ಇದ್ದುಕೊಂಡು ತಮ್ಮ ಪರಿಣಾಮಗಳಿಗೆ ಅನುಸರಿಸಿ ದರ್ಶನ ಪ್ರತಿಮೆ ಮೊದಲಾದವುಗಳ ಪಾಲನೆ ಮಾಡುತ್ತಾರೆ. ಮತ್ತು ಆತ್ಮಾನುಭವದ ಸಲುವಾಗಿ ಹೆಚ್ಚು ಹೆಚ್ಚಾಗಿ ಸಮಯವನ್ನು ತೆಗೆದಿರಿಸುತ್ತಾರೆ.

ಮೋಕ್ಷಪಾಹುಡದ ಹದಿನಾರನೆಯ ಗಾಥೆಯಲ್ಲಿ ಭ. ಕುಂದಕುಂದಾಚಾರ್ಯದೇವರು ಹೇಳುತ್ತಾರೆ -

ತಮ್ಮ ಶುದ್ಧ ದ್ರವ್ಯದ ಅಭಿರುಚಿಯಾಗುವುದು ಅದು ಸುಗತಿಯಿದೆ. ಮತ್ತು ಪರದ್ರವ್ಯ ಹಾಗೂ ಪರಭಾವದ ಅಭಿರುಚಿಯಾಗುವುದು ಅದು ದುರ್ಗತಿಯಿದೆ ಎಂದರೆ ಸ್ವಭಾವದಿಂದ ವಿಪರೀತ ಗತಿಯಿದೆ.

ಜೀವನು ಎಲ್ಲಿಯವರೆಗೆ ಪರದ್ರವ್ಯದ ವ್ಯವಹಾರದಲ್ಲಿ ತೊಡಗಿರುತ್ತಾನೆ ಅಲ್ಲಿಯವರೆಗೆ ಭವ್ಯ ಜೀವನು ಬೇಕಾದಷ್ಟು ಕಠಿಣ ಕಠಿಣತರವಾದ ತಪಸ್ಸು ಮಾಡುತ್ತಿದ್ದರೂ ಕೂಡ ಮೋಕ್ಷ ಪಡೆಯುವುದಿಲ್ಲ. ಮತ್ತು ಯಾವನು ತನ್ನ ಶ್ರದ್ಧೆ, ಜ್ಞಾನ, ಚಾರಿತ್ರದಲ್ಲಿ ಸ್ವಭಾವದ ಲಾಭ ಮಾಡಿಕೊಳ್ಳುತ್ತಾನೆ ಅವನು ಶೀಘ್ರವಾಗಿ ಮೋಕ್ಷ ಪಡೆದುಕೊಳ್ಳುತ್ತಾನೆಂದು ಮುನಿರಾಜ ಯೋಗೀಂದು ದೇವರು ಶ್ರೀ ದೇವಸೇನಾಚಾರ್ಯದೇವ ವಿರಚಿತ ತತ್ತ್ವಸಾರ ಗ್ರಂಥದ ಆಧಾರ ಕೊಟ್ಟು ಹೇಳುತ್ತಾರೆ.

ಸಮ್ಯಕ್‌ದೃಷ್ಟಿಯ ಸರ್ವೋತ್ಕೃಷ್ಟ ಕರ್ತವ್ಯವೇನೆಂಬುದನ್ನು ಈಗ ಹೇಳುತ್ತಾರೆ, -

ಅಪ್ಪ-ಸರೂವಹ ಜೋ ರಮಇ ಛಂಡಿವಿ ಸಹು ವವಹಾರು
ಸೋ ಸಮ್ಮಾ ಇಟ್ಠೀ ಹವಇ ಲಹು ಪಾವಇ ಭವಪಾರು ॥89॥

ತೊರೆದೆಲ್ಲಾ ವ್ಯವಹಾರವನು ಆತ್ಮಸ್ವರೂಪದಿ ರಮಿಸಿದರೆ
ಇರುವನು ಅವನು ಸಮ್ಯಕ್‌ದೃಷ್ಟಿ ಪಡೆವನು ಬೇಗನೆ ಭವತೀರ ॥89॥

ಅರ್ಥ :- ಯಾವನು ಸಮಸ್ತ ವ್ಯವಹಾರವನ್ನು ಬಿಟ್ಟುಕೊಟ್ಟು ತನ್ನ ಆತ್ಮನ ಸ್ವರೂಪದಲ್ಲಿ ವಿಹರಿಸುತ್ತಾನೆ. ಅವನೇ ಸಮ್ಯಕ್ ದೃಷ್ಟಿಯಿದ್ದಾನೆ ಮತ್ತು ಅವನು ಬೇಗನೆ ಸಂಸಾರದಿಂದ ಪಾರಾಗಿ ಹೋಗುತ್ತಾನೆ.

ಮುನಿರಾಜರು ಒಂದೊಂದು ಶಬ್ದದಲ್ಲಿ ಅದೆಷ್ಟು ಸಾರವನ್ನು ತುಂಬಿ ಬಿಟ್ಟಿದ್ದಾರೆ ! ಎಲ್ಲಿಯವರೆಗೆ ಜೀವನು ಪರದ್ರವ್ಯಾಶ್ರಿತವಾದ ವ್ಯವಹಾರದಲ್ಲಿ ಇರುತ್ತಾನೆ ಮತ್ತು ತನ್ನ ಚೈತನ್ಯ ಮೂರ್ತಿಯಾದ ದ್ರವ್ಯ ಸ್ವಭಾವದ ಆಶ್ರಯದಲ್ಲಿ ಬರುವುದಿಲ್ಲ ಅಲ್ಲಿಯವರೆಗೆ ಅವನಿಗೆ ಮುಕ್ತಿಯಾಗುವುದಿಲ್ಲ.

ಸಮ್ಯಗ್ದರ್ಶನದಲ್ಲಿ ಕೂಡ ಮೊದಲು ಸ್ವದ್ರವ್ಯದ ಆಶ್ರಯವಿರುತ್ತದೆ. ಅದರ ನಂತರ ಕೂಡ ಎಲ್ಲಿಯವರೆಗೆ ಸ್ವಲ್ಪವಾದರೂ ಪರದ್ರವ್ಯದ ಆಶ್ರಯವಿರುತ್ತದೆ ಅಲ್ಲಿಯವರೆಗೆ ಮುಕ್ತಿಯಾಗುವುದಿಲ್ಲ. ವ್ಯವಹಾರವು ಪರಾಶ್ರಿತವಿದೆ ಮತ್ತು

ನಿಶ್ಚಯವು ಸ್ವಾಶ್ರಿತವಿದೆಯೆಂಬುದು ಅತ್ಯಂತ ಸರಳವಾದ ಮಾತು ಇದೆ. ಪ್ರತ್ಯಕ್ಷ ತೀರ್ಥಂಕರ ಭಗವಂತರಿರಲಿ, ಸಮವಸರಣವಿರಲಿ, ಸಮ್ಮೇದಶಿಖರವಿರಲಿ, ಗಣಧರ ಆಚಾರ್ಯ ಮೊದಲಾದವರುಗಳಿರಲಿ, ಆದರೆ ಅವರಂತೂ ಪರದ್ರವ್ಯರಿದ್ದಾರೆ, ಅವರುಗಳ ಆಶ್ರಯದಿಂದ ಮೂರು ಕಾಲದಲ್ಲೂ ಸಮ್ಯಗ್ದರ್ಶನವಾಗುವುದಿಲ್ಲ. ಸ್ವಾಶ್ರಯದಿಂದಲೇ ಸಮ್ಯಕ್‌ದರ್ಶನವಾಗುತ್ತದೆ.

ಎಲೈ ಭವ್ಯನೇ ! ನ್ಯಾಯದಿಂದ ಆಲಿಸು ! ಈ ಆತ್ಮದ್ರವ್ಯವು ಒಂದು ಸೇಕಂದದ ಅಸಂಖ್ಯಾತದ ಭಾಗದಲ್ಲಿ ಕೂಡ ಶುದ್ಧ ದ್ರವ್ಯ - ಗುಣ - ಪರ್ಯಾಯದ ಪಿಂಡನಿದ್ದಾನೆ. ಯಾವ ಪುಣ್ಯ - ಪಾಪದ ವಿಕಲ್ಪವಿದೆ ಅದು ಆಸ್ರವ ತತ್ತ್ವವಿದೆ. ಶರೀರ, ಕರ್ಮ ಮೊದಲಾದವು ಅಜೀವಗಳಿದ್ದು ಅವು ಕೂಡ ಜೀವವಿಲ್ಲ. ಮತ್ತು ದೇವ - ಶಾಸ್ತ್ರ - ಗುರುಗಳು ಕೂಡ ಪರದ್ರವ್ಯಗಳಿದ್ದು ತನ್ನ ಸ್ವದ್ರವ್ಯದಿಂದ ಭಿನ್ನರಿದ್ದಾರೆ. ಇಂಥ ಪರದ್ರವ್ಯದ ಆಶ್ರಯದಿಂದ ಧರ್ಮದ ಪ್ರಾರಂಭ ಹೇಗಾಗುವ ಸಾಧ್ಯತೆಯಿದೆ? ಸ್ವದ್ರವ್ಯದಲ್ಲಿ ಅನಂತ .... ಅನಂತ... ಶುದ್ಧತೆಯು ತುಂಬಿಕೊಂಡಿದೆ, ಅದರ ಆಶ್ರಯ ಮಾಡಿದಲ್ಲದೆ ಪರಾಶ್ರಯದಿಂದ ಧರ್ಮದ ಪ್ರಾರಂಭವಾಗುವುದಿಲ್ಲ. ಎಂದರೆ ಸಮ್ಯಗ್ದರ್ಶನವು ಎಂದೂ ಆಗುವ ಸಾಧ್ಯತೆಯಿಲ್ಲ.

ಆದುದರಿಂದ ಸ್ವಾಶ್ರಯದಿಂದಲೇ ಧರ್ಮದ ಪ್ರಾರಂಭವಾಗುತ್ತದೆ ಮತ್ತು ಪೂರ್ಣತೆಯಾಗುತ್ತದೆ, ಆದರೆ ಪರಾಶ್ರಯದಿಂದ ಇಲ್ಲವೆಂಬುದನ್ನು ಎಲ್ಲಕ್ಕಿಂತ ಮೊದಲು ಶ್ರದ್ಧೆಯಲ್ಲಿ ನಿರ್ಣಯ ಮಾಡಬೇಕಾಗುವುದು ಏಕೆಂದರೆ ಸಮ್ಯಗ್ದರ್ಶನ - ಜ್ಞಾನ - ಚಾರಿತ್ರದ ಪರ್ಯಾಯಗಳ ಪಿಂಡವು ಸ್ವದ್ರವ್ಯವಿದೆ. ವ್ಯವಹಾರದಲ್ಲಾಗಲಿ, ರಾಗದಲ್ಲಾಗಲಿ ಧರ್ಮವನ್ನು ಪ್ರಕಟಮಾಡುವ ಶಕ್ತಿಯಿಲ್ಲ, ಸಾಮರ್ಥ್ಯವಿಲ್ಲ.

ನಾನು ಪರ ಜೀವಗಳನ್ನು ಸಾಯಿಸುತ್ತೇನೆ ಅಥವಾ ಬದುಕಿಸುತ್ತೇನೆ. ಸುಖಿ - ದುಃಖಿಯನ್ನಾಗಿ ಮಾಡುತ್ತೇನೆ. ಇವೇ ಮೊದಲಾದ ಸಮಸ್ತ ಅಧ್ಯವಸಾಯಗಳು, ಪರದಲ್ಲಿನ ಏಕತ್ವ ಬುದ್ಧಿಯು ಅದು ಮಿಥ್ಯಾತ್ವವಿರುವುದರಿಂದ ಎಷ್ಟು ಪರಾಶ್ರಯತನವಿದೆ ಅದೆಲ್ಲವನ್ನು ಭಗವಂತರು ಬಿಡಿಸಿದ್ದಾರೆಂದು ಸಮಯಸಾರದ ಬಂಧ ಅಧಿಕಾರದಲ್ಲಿ ಆಚಾರ್ಯ ಅಮೃತಚಂದ್ರದೇವರು ಹೇಳುತ್ತಾರೆ.

ಆ ಮಹಾ ಸಿದ್ಧಾಂತವನ್ನು ಕೊಟ್ಟಿರುವುದರಿಂದ ಅದರಲ್ಲಿ ವಾದ - ವಿವಾದಕ್ಕೆ ಸ್ಥಾನವಾದರೂ ಎಲ್ಲಿದೆ? ತನ್ನ ಭಗವಾನ ಆತ್ಮನು ಶುದ್ಧ ಚೈತನ್ಯ ಘನನಿದ್ದು ಅವನ ಆಶ್ರಯದಿಂದಲೇ ಸಮ್ಯಗ್ದರ್ಶನ - ಜ್ಞಾನ - ಚಾರಿತ್ರದ ಪ್ರಕಟತೆಯಾಗುತ್ತದೆ. ಅವನ ಆಶ್ರಯದಿಂದಲೇ ಶುಕ್ಲಧ್ಯಾನ ಮತ್ತು ಕೇವಲಜ್ಞಾನದ ಪ್ರಾಪ್ತಿಯಾಗುತ್ತದೆ.

ಸರ್ವಜ್ಞ ಭಗವಂತರ ಆಸ್ಥಾನದೊಳಗೆ ಮೂರು ಕಾಲ ಮತ್ತು ಮೂರು ಲೋಕಗಳಲ್ಲಿ ಒಂದೇ ಸಿದ್ಧಾಂತವು ನಡೆಯುತ್ತದೆ. 'ಸ್ವಾಶ್ರಿತವು ಅದು ನಿಶ್ಚಯವಿದೆ ಹಾಗೂ ಪರಾಶ್ರಿತವು ಅದು ವ್ಯವಹಾರವಿದೆ' ಮತ್ತು 'ನಿಶ್ಚಯಾಶ್ರಿತರಾದ ಮುನಿವರರು ನಿರ್ವಾಣದ ಪ್ರಾಪ್ತಿ ಮಾಡಿಕೊಳ್ಳುತ್ತಾರೆ.

ಪರದ್ರವ್ಯದ ಆಶ್ರಯದಿಂದ ಉತ್ಪನ್ನವಾಗುವಂಥ ಭಾವಗಳು ಶುಭವಿರಲಿ ಅಥವಾ ಅಶುಭವಿರಲಿ, ಆದರೆ ಅವೆರಡೂ ಅಶುದ್ಧ ಭಾವಗಳಿವೆ. ಯಾರ ಮನಸ್ಸು ಅವುಗಳಲ್ಲಿ ನಿಮಗ್ನವಿದೆ ಅವರಿಗೆ ಸ್ವಾಶ್ರಯವಿಲ್ಲದಿರುವುದರಿಂದ ಅವರಿಗೆ ಮುಕ್ತಿಯು ಕೂಡ ಪ್ರಾಪ್ತವಾಗುವುದಿಲ್ಲ. ತಮ್ಮ ದ್ರವ್ಯ ಸ್ವಭಾವದ ಆಶ್ರಯದಿಂದಲೇ ಶುದ್ಧ ಭಾವವು ಪ್ರಕಟವಾಗುತ್ತದೆ ಮತ್ತು ಶುದ್ಧ ಭಾವದಿಂದಲೇ ಮುಕ್ತಿಯ ಪ್ರಾಪ್ತಿಯಾಗುತ್ತದೆ.

ಸೋದರನೇ ! ತ್ರಿಲೋಕನಾಥರಾದ ಸರ್ವಜ್ಞ ಪರಮಾತ್ಮರು ಯಾವ ರೂಢಿಯನ್ನು ಹೇಳಿದ್ದಾರೆ. ಆ ರೂಢಿಯು ಉಳಿಯದಿದ್ದರೆ ಎಲ್ಲವೂ ಅನ್ಯಮತದ ರೂಢಿಯೇ ಆಗಿ ಹೋಗುವುದು. ರಾಗದಿಂದ ಲಾಭವಿದೆಯೆಂದು ಮನ್ನಿಸುವುದಂತೂ ಇದು ಅನ್ಯಮತದ ರೂಢಿಯಿದೆ. ಸರ್ವಜ್ಞ ಪರಮಾತ್ಮರ ಅನಾದಿ ಪರಂಪರೆಯಿಂದ ನಡೆದುಕೊಂಡು

ಬರುತ್ತಿರುವ ರೂಢಿಯ ಶ್ರದ್ಧೆಯಂತೂ ಸರಿಯಾಗಿ ಇರಬೇಕಾಗುವುದು. ಸ್ಥಿರತೆಯು ವಿಶೇಷವಾಗಿ ಆಗುವ ಸಾಧ್ಯತೆಯಿಲ್ಲದಿದ್ದರೂ ಸ್ವಾಶ್ರಯದಿಂದಲೇ ಲಾಭವಿದೆಯೆಂಬ ದೃಷ್ಟಿಯಂತೂ ಸರಿಯಾಗಿ ಇರಬೇಕಾಗುವುದು. ಈ ಸಿದ್ಧಾಂತವು ಮೂರು ಕಾಲದಲ್ಲೂ ಬದಲಾಗುವ ಸಾಧ್ಯತೆಯಿಲ್ಲ.

ಅಸ್ತಾಚಲದ ಕಡೆಗೆ ಗಮನ ಮಾಡಿದರೆ ಉದಯಾಚಲದೆಡೆಗೆ ತಲುಪಬಹುದೇನು ಎಂದರೆ ಪಶ್ಚಿಮದ ಕಡೆಗೆ ಗಮನ ಮಾಡಿದರೆ ಎಂದಾದರೂ ಪೂರ್ವದ ಕಡೆಗೆ ತಲುಪುವ ಸಾಧ್ಯತೆಯಿದೆಯೇನು? ಹೀಗೆಂದೂ ಆಗುವ ಸಾಧ್ಯತೆಯಿಲ್ಲ. ಸ್ವಲ್ಪ ಪರಾಶ್ರಯ ಮಾಡಿದ ಮೇಲೆ ಸ್ವಾಶ್ರಯವು ಬಂದು ಬಿಡಬಹುದೆಂಬುದು ಸಾಧ್ಯವಿಲ್ಲ.

'ಪರಾಧೀನವಾದ ಸ್ವಪ್ನದಲ್ಲಿ ಸುಖವಿಲ್ಲ'ವೆಂದು ಲೋಕದಲ್ಲಿ ಗಾದೆಯ ಮಾತಿದೆಯಲ್ಲವೇ ! ಅದೇ ಮಾತು ಇಲ್ಲಿ ಇದೆ. ಪರಾಶ್ರಯದ ಭಾವವು ಅದು ಬಂಧ ಭಾವವಿದ್ದರೆ ಸ್ವಾಶ್ರಯ ಭಾವವು ಅದು ಅಬಂಧ ಭಾವವಿದೆ. ಮೂರು ಕಾಲ ಮತ್ತು ಮೂರು ಲೋಕದಲ್ಲಿ ಒಂದೇ ಸಿದ್ಧಾಂತವಿದ್ದು ಅದು ಎಂದೂ ಬದಲಾಗುವುದಿಲ್ಲ.

ಸಮ್ಯಕ್‌ದೃಷ್ಟಿಯೇ ಪಂಡಿತ ಮತ್ತು ಮುಖ್ಯನಿದ್ದಾನೆಂದು ಈಗ ಹೇಳುತ್ತಾರೆ,

ಜೋ ಸಮ್ಮತ್ತ-ಪಹಾಣ ಬುಹು ಸೋ ತಇಲೋಯ-ಪಹಾಣು
ಕೇವಲ-ಣಾಣ ವಿ ಲಹು ಲಹಇ ಸಾಸಯ-ಸುಕ್ಖ-ಣಿಹಾಣು ॥90॥

ಬುಧನಿರೆ ಸಮ್ಯಕ್ತ್ವಪ್ರಧಾನ ಮೂಲೋಕದಲಿ ಮುಖ್ಯನಿಹ
ಸಾಧಿಸುವನು ಕೇವಲಜ್ಞಾನ ಅದು ಚಿರಸೌಖ್ಯದ ನಿಧಿಯಿಹುದು ॥90॥

ಅರ್ಥ :- ಯಾವನು ಸಮ್ಯಗ್ದರ್ಶನದ ಅಧಿಪತಿಯಿದ್ದಾನೆ ಅವನು ಪಂಡಿತನಿದ್ದಾನೆ, ಅವನೇ ಮೂರು ಲೋಕದಲ್ಲಿ ಮುಖ್ಯನಿದ್ದಾನೆ. ಅವನು ಅವಿನಾಶೀ ಸುಖದ ನಿಧಾನವಾದ ಕೇವಲಜ್ಞಾನವನ್ನು ಶೀಘ್ರದಲ್ಲಿಯೇ ಪ್ರಾಪ್ತ ಮಾಡಿಕೊಳ್ಳುತ್ತಾನೆ.

ಅಹಹ ! ದಿಗಂಬರ ಸಾಧುಗಳು ಕೂಡ ಎಷ್ಟು ಆಶ್ಚರ್ಯಕರವಾದ ಕಾರ್ಯ ಮಾಡಿದ್ದಾರೆ ? ತೀರ ಕಡಿಮೆ ಶಬ್ದಗಳಲ್ಲಿ ಸಂಪೂರ್ಣ ಸಾರವನ್ನು ತುಂಬಿ ಬಿಟ್ಟಿದ್ದಾರೆ.

ಇದಂತೂ ಯೋಗಸಾರವಿದೆ, ತನ್ನ ಸ್ವಾಶ್ರಯದಿಂದ ಯಾವ ಪರ್ಯಾಯವು ಪ್ರಕಟವಾಗುತ್ತದೆ ಅದರ ಹೆಸರು 'ಯೋಗ' ವಿದೆ. ಇದು ಯೋಗದ ಸಾರವಿದೆ. ಪರಾಶ್ರಿತ ವ್ಯವಹಾರವು ಅದು ಯೋಗಸಾರವಲ್ಲ.

ಯಾವನು ಸಮ್ಯಗ್ದರ್ಶನದ ಅಧಿಪತಿಯಿದ್ದಾನೆ, ಯಾವನು ಆತ್ಮನ ಸ್ವರೂಪವನ್ನು ತಿಳಿಯುತ್ತಾನೆ ಅವನೇ ಪಂಡಿತನಿದ್ದಾನೆ. ಆದರೆ ಹನ್ನೊಂದು ಅಂಗ ಮತ್ತು ಒಂಭತ್ತು ಪೂರ್ವಗಳ ಅಧ್ಯಯನ ಮಾಡಿದವನಿದ್ದರೂ ಅವನು ಪಂಡಿತನಿಲ್ಲ. ಆತ್ಮನ ಆಶ್ರಯವಿಲ್ಲದೆ ಹನ್ನೊಂದುಅಂಗ ಮೊದಲಾದವುಗಳ ಪಾಠ ಮಾಡಿದವನ ಜ್ಞಾನವು ಕೂಡ ನಷ್ಟವಾಗಿ ಹೋಗುತ್ತದೆ. ಮತ್ತು ಅವನು ನಿಗೋದದಲ್ಲಿ ಹೊರಟು ಹೋಗುತ್ತಾನೆ. ಅಲ್ಲಿ ಅಕ್ಷರದ ಅನಂತದ ಭಾಗದಷ್ಟು ಜ್ಞಾನದ ಕ್ಷಯೋಪಶಮವಿರುತ್ತದೆ. ಆದುದರಿಂದ ಆತ್ಮನಜ್ಞಾನವಿಲ್ಲದೆ ಕೇವಲ ಹನ್ನೊಂದು ಅಂಗಗಳ ಜ್ಞಾನವು ಒಂದಿಷ್ಟೂ ಕಲ್ಯಾಣಕಾರಿಯಿಲ್ಲ, ಏಕೆಂದರೆ ಅದು ಪರಾಶ್ರಿತವಿದೆ.

ಜ್ಞಾನ ಮೂರ್ತಿಯಾದ ಭಗವಾನ ಆತ್ಮನಲ್ಲಿ ಏಕಾಗ್ರವಾಗಿ ಅವನೊಳಗಿಂದ ಜ್ಞಾನದ ಕಣವನ್ನು ಹೊರ ತೆಗೆಯುವುದು, ಆ ಕಣವು - ಅಂಶವು ಕೂಡ ಕಲ್ಯಾಣಕಾರಿಯಿದೆ. ಈ 'ಕಣ'ವನ್ನು ಹೇಳುತ್ತಿರುವಂತೆಯೇ ಪರಮಾಣುವಿನ ಸ್ಮರಣೆ ಬರುತ್ತದೆ. ಬನಾರಸೀದಾಸರೆಂಬವರು ಓರ್ವ ಮಹಾನ ಪಂಡಿತರಾಗಿ ಹೋಗಿದ್ದಾರೆ. ಅವರು ಪರಮಾರ್ಥ - ವಚನಿಕೆಯೆಂಬ ಗ್ರಂಥ ರಚಿಸಿದ್ದು ಅದರಲ್ಲಿ ಹೀಗೆ ಹೇಳುತ್ತಾರೆ - ಸ್ವರೂಪದ ದೃಷ್ಟಿ - ಜ್ಞಾನ

ಪೂರ್ವಕವಾಗಿ ಚಾರಿತ್ರದ ಪರಮಾಣುವು ಜಾಗೃತವಾದರೆ ಅದು ಮೋಕ್ಷಮಾರ್ಗವಿದೆ. ಇಲ್ಲದಿದ್ದರೆ ಮೋಕ್ಷ ಮಾರ್ಗವಿಲ್ಲ. ಬನಾರಸೀದಾಸರು ಯಥಾರ್ಥ ವಸ್ತು ಸ್ವರೂಪವನ್ನು ತಿಳಿಸಿದ್ದಾರೆ.

ಯಾವನು ಶುದ್ಧ ತತ್ತ್ವದ ಸನ್ಮುಖನಾಗಿ ಸ್ವಾಶ್ರಯದಿಂದ ಸಮ್ಯಗ್ದರ್ಶನ ಪ್ರಕಟಪಡಿಸಿಕೊಂಡಿದ್ದಾನೆ. ಅವನೇ ಜಗತ್ತಿನ ಸ್ವಾಮಿ, ಪಂಡಿತ ಮತ್ತು ಪ್ರಮುಖನಿದ್ದಾನೆ. ಆತ್ಮನನ್ನು ತಿಳಿದುಕೊಂಡರೆ ಎಲ್ಲವನ್ನೂ ತಿಳಿದುಕೊಂಡಂತಿದೆ. ಸಮ್ಯಕ್‌ದೃಷ್ಟಿಯಂತೂ ಕೇವಲಜ್ಞಾನವನ್ನು ಪಡೆಯುವನು. ಅಂತರ್ಯದಲ್ಲಿ ಸಾದಿ ಅನಂತ ಕಾಲದವರೆಗಿನ ಅನಂತ ಪರ್ಯಾಯಗಳು ಜ್ಞಾನ ಗುಣದಲ್ಲಿ ಬಿದ್ದುಕೊಂಡಿವೆ. ಆದುದರಿಂದ ಯಾವನು ಜ್ಞಾಯಕದ ದೃಷ್ಟಿ ಮಾಡಿದ್ದಾನೆ ಅವನು ಒಂದೆರಡು ಭವಗಳಲ್ಲಿ ಕೇವಲಜ್ಞಾನ ಪಡೆದೇ ಪಡೆಯುವನು.

ಯಾವನ ದೃಷ್ಟಿಯಲ್ಲಿ ತನ್ನ ಆತ್ಮನು ಉಪಾದೇಯನಿದ್ದಾನೆ, ಅದೇ ಜೀವನು ಜಗತ್ತಿನಲ್ಲಿ ಶ್ರೇಷ್ಠನಿದ್ದಾನೆ, ಮತ್ತು ಜ್ಞಾನಿಯಿದ್ದಾನೆ. ರತ್ನಕರಂಡ ಶ್ರಾವಕಾಚಾರದಲ್ಲಂತೂ ಸಮ್ಯಕ್‌ದೃಷ್ಟಿಯ ಮಹಿಮೆಯನ್ನು ಬಹಳಷ್ಟು ಹಾಡಲಾಗಿದೆ. ಸಮ್ಯಕ್ತ್ವವಂತೂ ಶ್ರೇಷ್ಠ ಆಧಾರವಿದೆ. ಅದರ ಹೊರತಾಗಿ ಜ್ಞಾನ, ವ್ರತ, ತಪಸ್ಸು, ಚಾರಿತ್ರ ಮೊದಲಾದವುಗಳೆಲ್ಲವೂ ವ್ಯರ್ಥವಿವೆ, ಧೂಳಿನ ಸಮಾನವಿವೆ. ಚೈತನ್ಯದ ಶ್ರದ್ಧೆ ಮತ್ತು ನಿರ್ವಿಕಲ್ಪವಾದ ಅನುಭೂತಿಯೇ ಸಾರವಿದೆ, ಸರ್ವಸ್ವವಿದೆ.

ಆರು ಗುರಾಣಿಯಲ್ಲಿ ಸಮ್ಯಗ್ದರ್ಶನದ ವರ್ಣನೆ ಮಾಡುತ್ತ ದೃಷ್ಟಿವಂತನಾದ ಸಮ್ಯಕ್‌ದೃಷ್ಟಿಗೆ ಅಂಶ ಮಾತ್ರವೂ ಸಂಯಮವಿಲ್ಲದಿದ್ದರು ಕೂಡ ಸ್ವರ್ಗದ ದೇವ ಬಂದು ಅವನನ್ನು ಪೂಜಿಸುತ್ತಾನೆಂದು ಹೇಳಲಾಗಿದೆ. ಸಮ್ಯಕ್‌ದೃಷ್ಟಿಯ ಮಹಿಮೆಯನ್ನು ಮುಕ್ತ ಕಂಠದಿಂದ ಹಾಡಲಾಗಿದೆ.

ಸಮ್ಯಕ್‌ದೃಷ್ಟಿಯ ದೃಷ್ಟಿಯು ಸ್ವಭಾವದಲ್ಲಿಯೇ ಬಿದ್ದುಕೊಂಡಿರುತ್ತದೆ, ಅದು ರಾಗದಲ್ಲಿ ಇರುವುದಿಲ್ಲ, ಸಮ್ಯಕ್‌ದೃಷ್ಟಿಗೆ ಸ್ವಭಾವದ ಅಭಿರುಚಿಯೇ ಇರುತ್ತದೆ, ರಾಗದ ಅಭಿರುಚಿ ಇರುವುದಿಲ್ಲ. ಹೀಗೆ ಜಗತ್ತಿನಲ್ಲಿ ಶ್ರೇಷ್ಠನಾದಂಥ ಸಮ್ಯಕ್‌ದೃಷ್ಟಿಯು ಅವಿನಾಶೀ ಸುಖದ ನಿಧಾನವಾದಂಥ ಕೇವಲಜ್ಞಾನವನ್ನು ಶೀಘ್ರದಲ್ಲಿಯೇ ಪ್ರಾಪ್ತ ಮಾಡಿಕೊಳ್ಳುತ್ತಾನೆ.

ಸಮ್ಯಕ್‌ದೃಷ್ಟಿಯು ಜಿನೇಶ್ವರರ ಲಘುನಂದನನಿದ್ದಾನೆಂದು ನಾಟಕ ಸಮಯಸಾರದಲ್ಲಿ ಬನಾರಸೀದಾಸರು ಹೇಳುತ್ತಾರೆ.

ಭೇದವಿಜ್ಞಾನ ಜಗೋ ಜಿನಕೆ ಘಟ ಶೀತಲ ಚಿತ್ತ ಭಯೋ ಜಿಮ ಚಂದನ ।
ಕೇಲೀ ಕರೇ ಶಿವಮಾರಗ ಮೇ ತೇ ಜಗಮಾಹಿ ಜಿನೇಶ್ವರ ಕೇ ಲಘುನಂದನ ॥

ಮುನಿರಾಜರು ಜೇಷ್ಠ ಪುತ್ರರಿದ್ದಾರೆ ಮತ್ತು ಸಮ್ಯಕ್‌ದೃಷ್ಟಿಯು ಕಿರಿಯ ಪುತ್ರನಿದ್ದಾನೆ.

ಇಷ್ಟು ಸಮ್ಯಗ್ದರ್ಶನದ ಮಹಿಮೆಯಿದೆಯೆಂದು ಅಂತರ್ಯದಲ್ಲಿ - ಲಕ್ಷದಲ್ಲಿ ಬಾರದಿದ್ದರೆ ಮತ್ತು ತನ್ನ ಕ್ಷಯೋಪಶಮ ಜ್ಞಾನದ ಅಥವಾ ರಾಗದ ಮಂದತೆಯ ಅಧಿಕತೆಯಿರುತ್ತಿದ್ದರೆ ಸಮ್ಯಕ್‌ದೃಷ್ಟಿಯು ನನಗಿಂತ ಹೆಚ್ಚು ಮಹಾನನಿದ್ದಾನೆಂಬ ಬಹುಮಾನವು ಬರುವುದಿಲ್ಲ ಅಲ್ಲಿಯವರೆಗೆ ಅವನಿಗೆ ಸ್ವದ್ರವ್ಯದ ಆಶ್ರಯರೂಪವಾದ ಭಾವವು ಪ್ರಕಟವಾಗುವುದಿಲ್ಲ.

ಧರ್ಮದ ಮೂಲವು ಸಮ್ಯಗ್ದರ್ಶನವಿರುವುದರಿಂದ ಈ ಕೆಳಗಿನ ವಾಕ್ಯಗಳು ವಿಶೇಷ ಪ್ರಸಿದ್ಧವಿವೆ.

೧) ದಂಸಣ ಮೂಲೋ ಧಮ್ಮೋ, ೨) ದ್ರವ್ಯ ದೃಷ್ಟಿಯು ಅವನು ಸಮ್ಯಕ್‌ದೃಷ್ಟಿಯಿದ್ದಾನೆ, ೩) ದರ್ಶನ ಶುದ್ಧಿಯೇ ಆತ್ಮಸಿದ್ಧಿಯಿದೆ, ೪) ಪೂರ್ಣತೆಯ ಲಕ್ಷ್ಯದಲ್ಲಿ ಧರ್ಮದ ಪ್ರಾರಂಭವಾಗುತ್ತದೆ. ಈ ನಾಲ್ಕು ವಾಕ್ಯಗಳನ್ನು ಜಿನಾಗಮದಲ್ಲಿ ಸಾರಭೂತವೆಂದು ಮನ್ನಿಸಲಾಗಿದೆ. ಚಾರಿತ್ರವು ಧರ್ಮವಿದ್ದರೂ ಅದರ ಮೂಲವು ಸಮ್ಯಗ್ದರ್ಶನವಿದೆ. 'ಮೂಲ ನಾಸ್ತಿ ಕುತೋ ಶಾಖಾ' ಎಲ್ಲಿ ಸಮ್ಯಗ್ದರ್ಶನ ರೂಪದ ಮೂಲವಿಲ್ಲ ಅಲ್ಲಿ ವ್ರತ, ತಪ, ಸಂವರ, ನಿರ್ಜರೆ ರೂಪದ ಚಾರಿತ್ರದ ಶಾಖೆಗಳು ಎಲ್ಲಿಂದ ಬರುವವು ? ಅಂಕವಿಲ್ಲದೆ ಸೊನ್ನೆಗಳ ಬೆಲೆಯೇನು ? ಅಂಕದ ಮುಖ್ಯತೆಯಿದೆ.

ಅಂಕ ಸಹಿತವಾಗಿರುವ ಸೊನ್ನೆಯ ಬೆಲೆಯಾಗುತ್ತದೆ. ಅದೇ ಪ್ರಕಾರ ಸಮ್ಯಕ್ತ್ವ ಸಹಿತವಾದ ಜ್ಞಾನ ಮತ್ತು ಚಾರಿತ್ರವು ಮುಕ್ತಿಯ ಕಾರಣವಿವೆ.

ಸಮ್ಯಕ್‌ದೃಷ್ಟಿಯ ಧ್ಯೇಯವು ಆತ್ಮ ದ್ರವ್ಯವಿದೆ. ದೃಷ್ಟಿಯು ದ್ರವ್ಯದಲ್ಲಿದೆ. ಪರಿಣಮನವು ಕೂಡ ದ್ರವ್ಯದ ಕಡೆಗೇ ಚಲಿಸುತ್ತಿದೆ. ಮತ್ತು ಅದು ರಾಗದಿಂದ ಮುಕ್ತವಿರುವುದರಿಂದ ಸಮ್ಯಗ್ದರ್ಶನವು ಜೀವನನ್ನು ಕ್ರಮದಿಂದ ಮೋಕ್ಷದ ಕಡೆಗೆ ತೆಗೆದುಕೊಂಡು ಹೋಗುತ್ತದೆ. ಅಬಂಧ ಸ್ವಭಾವಿಯಾದ ದ್ರವ್ಯದ ದೃಷ್ಟಿಯಾಗಿದೆ. ಪರಿಣಾಮವು ಅಬಂಧ ಸ್ವಭಾವದ ಕಡೆಗೇ ಹೋಗುತ್ತದೆ. ಅಬಂಧ ಪರಿಣಾಮವೇ ಮೋಕ್ಷಮಾರ್ಗವಿದೆ.

ಯಾವ ಪ್ರಕಾರ ಮೂಲವಿಲ್ಲದೆ - ಬೇರು ಇಲ್ಲದೆ ವೃಕ್ಷವಿರುವುದಿಲ್ಲ, ಅದೇ ಪ್ರಕಾರ ಸಮ್ಯಗ್ದರ್ಶನವಿಲ್ಲದೆ ಧರ್ಮವಿರುವುದಿಲ್ಲ. ಜ್ಞಾನವು ಅಧಿಕವಾಗಿದ್ದರೂ ಕೂಡ ಸಮ್ಯಗ್ದರ್ಶನವಿಲ್ಲದಿದ್ದರೆ ಅವನು ಜ್ಞಾನಿಯಿಲ್ಲ, ಪಂಡಿತನಿಲ್ಲ. ಬೇಕಾದರೆ ಒಂದು ಚಿಕ್ಕದಾದ ಕಪ್ಪೆಯಿರಲಿ, ಅದಕ್ಕೆ ಒಂಭತ್ತು ತತ್ತ್ವಗಳ ಹೆಸರು ಕೂಡ ಗೊತ್ತಿರಲಿಕ್ಕಿಲ್ಲ, ಆದರೆ ಅವುಗಳ ಭಾವವನ್ನು ಗಮನಕ್ಕೆ ತಂದುಕೊಂಡು ಆತ್ಮನ ಆಶ್ರಯ ಮಾಡಿ ಸಮ್ಯಗ್ದರ್ಶನ ಪ್ರಕಟಮಾಡುವ ಸಾಧ್ಯತೆಯಿದೆ. 'ಈ ಅತೀಂದ್ರಿಯ ಆನಂದ ಸ್ವರೂಪನೇ ನಾನಿದ್ದೇನೆ, ಇದರಿಂದ ವಿಪರೀತವಾದ ಯಾವ ದುಃಖವಿದೆ ಅದು ನಾನಿಲ್ಲ'ವೆಂದು ತಿಳಿದುಕೊಂಡರೆ ಇದರಲ್ಲಿ ಎಲ್ಲವೂ ಬಂದು ಬಿಡುವುದು.

ಪರ್ಯಾಯದಲ್ಲಿ ಅತೀಂದ್ರಿಯ ಆನಂದದ ಸ್ಪರ್ಶವಾದರೆ ಅಲ್ಲಿ ನವತತ್ತ್ವಗಳ ಜ್ಞಾನವಾಗಿ ಹೋಗುವುದು. ಅತೀಂದ್ರಿಯ ಆನಂದದ ಅನುಭವವಾಗುತ್ತಿದ್ದಂತೆಯೇ ಅತೀಂದ್ರಿಯ ಜ್ಞಾನಾನಂದ ಸ್ವರೂಪದ ಆತ್ಮನು ಅವನು ನಾನು ಜೀವ ದ್ರವ್ಯ, ಆನಂದ ಮೂರ್ತಿಯಾದ ನಿಜ ದ್ರವ್ಯದಿಂದ ಭಿನ್ನವಾದ ಚೇತನ ಅಥವಾ ಅಚೇತನವು ಅದು ಅಜೀವ ತತ್ತ್ವ, ಆನಂದದಿಂದ ವಿರುದ್ಧವಾದ ಆಕುಲತೆಯ ರೂಪದ - ದುಃಖರೂಪದ ಭಾವವು ಅದು ಆಸ್ರವ-ಬಂಧ ತತ್ತ್ವ, ನಿರ್ಮಲ ಪರ್ಯಾಯವು ಪ್ರಕಟವಾಗಿರುವುದು ಅದು ಸಂವರ - ನಿರ್ಜರೆ ತತ್ತ್ವ ಮತ್ತು ಆತ್ಮನಲ್ಲಿ ಪೂರ್ಣ ಶುದ್ಧತೆಯು ಪ್ರಕಟವಾಗಿ ಹೋಗುವುದು ಅದು ಮೋಕ್ಷ ತತ್ತ್ವವಿದೆ. ಈ ಪ್ರಕಾರ ಒಂಭತ್ತು ತತ್ತ್ವಗಳ ಯಥಾರ್ಥ ಜ್ಞಾನವು ಸಮ್ಯಗ್ದರ್ಶನವಾಗುತ್ತಿದ್ದಂತೆಯೇ ಒಟ್ಟಿಗೆ ಆಗಿ ಹೋಗುತ್ತದೆ.

ಸಮಯಸಾರದ ಆರನೆಯ ಗಾಥೆಯಲ್ಲಿ ಆತ್ಮನನ್ನು ಪರದ್ರವ್ಯದಿಂದ ಭಿನ್ನ ಉಪಾಸ್ಯಮಾನನೆಂದು ಹೇಳಿದೆ. ಆತ್ಮನನ್ನು ತಿಳಿದುಕೊಳ್ಳುವುದೇ ದ್ವಾದಶಾಂಗ ವಾಣಿಯ ಸಾರವಿದೆ. ಆತ್ಮನಂತೂ ಶುದ್ಧನೇ ಇದ್ದಾನೆ, ಯಾವನು ಶುದ್ಧನೆಂದು ತಿಳಿಯುತ್ತಾನೆ ಅವನಿಗೆ ಲಾಭವಿದೆ, ಯಾವನು ಪರದ್ರವ್ಯದ ಲಕ್ಷ್ಯ ಬಿಟ್ಟುಕೊಟ್ಟು ತನ್ನ ಸ್ವಭಾವದ ಲಕ್ಷ್ಯ ಮಾಡಿ ಪರ್ಯಾಯದಲ್ಲಿ ದ್ರವ್ಯದ ಉಪಾಸನೆ ಮಾಡುತ್ತಾನೆ, ಸೇವೆ ಮಾಡುತ್ತಾನೆ ಅವನಿಗೆ ಪರ್ಯಾಯದಲ್ಲಿ ಶುದ್ಧತೆಯು ಪ್ರಕಟವಾಗುತ್ತದೆ. ಈ ಶುದ್ಧತೆಯಿಂದ ತ್ರಿಕಾಲೀ ದ್ರವ್ಯವು ಶುದ್ಧವಿದೆಯೆಂದು ತಿಳಿಯುವನು. ಪರ್ಯಾಯದಲ್ಲಿ ಶುದ್ಧತೆಯು ಬಾರದ ಹೊರತು ದ್ರವ್ಯವು ಶುದ್ಧವಿದೆಯೆಂದು ಹೇಗೆ ತಿಳಿದು ಬರುವ ಸಾಧ್ಯತೆಯಿದೆ? ಆದುದರಿಂದ ಪರ್ಯಾಯದಲ್ಲಿ ದ್ರವ್ಯದ ಉಪಾಸನೆ ಮಾಡಿ ಅದನ್ನು ಶುದ್ಧವೆಂದು ತಿಳಿಯುವುದು ಅದು ದ್ವಾದಶಾಂಗ ವಾಣಿಯ ಸಾರವಿದೆಯೆಂದು ಹೇಳಿದೆ.

ಸರ್ವಜ್ಞ ಭಗವಂತರಂತೂ ಪ್ರತಿಯೊಂದು ಜೀವವನ್ನು ಶುದ್ಧವಾಗಿಯೇ ನೋಡುತ್ತಾರೆ ; ಆದರೆ ಇದರಿಂದ ನಿನಗೇನು ಲಾಭವಿದೆ ? ನೀನು ಅದನ್ನು ಶುದ್ಧವೆಂದು ತಿಳಿದಾಗಲೇ ನಿನಗೆ ಲಾಭವಾಗುವುದು . ಸರ್ವಜ್ಞ ಭಗವಂತರ ಜ್ಞಾನದಲ್ಲಿ ಪ್ರತಿಯೊಂದು ತತ್ತ್ವವು ಹೇಗೆ ಇದೆ ಹಾಗೆಯೇ ತಿಳಿದು ಬರುತ್ತದೆ ಅಯ್ಯಾ ! ನಾಲ್ಕೂ ದಿಕ್ಕಿಗೆ ಸತ್ಯವೇ ಪ್ರಕಟವಾಗುತ್ತದೆ. ಆ ದಿವ್ಯಜ್ಞಾನದ ಮಾತನ್ನೇನು ಹೇಳುವುದು ? ಸ್ವಭಾವದ ಮರ್ಯಾದೆಯೆಲ್ಲಿದೆ ? ಲೋಕಾಲೋಕದ ಮಾತೇನು, ಆದರೆ ಅದರಿಂದ ಅನಂತ ಗುಣಿತವಾಗಿ ಲೋಕಾಲೋಕವಿದ್ದರೂ ಅದನ್ನು ಕೂಡ ತಿಳಿದುಕೊಳ್ಳುವ ಸಾಮರ್ಥ್ಯವು ಜ್ಞಾನದಲ್ಲಿ ಇದೆ, ಸ್ವಯಂ ಸ್ವಭಾವವಿದೆ. ಸಹಜ ಸಾಮರ್ಥ್ಯವಿದೆ. ಜಡ ಪರಮಾಣುವಿನೊಳಗೆ ಕೂಡ ಒಂದು ಸಮಯದಲ್ಲಿ ಪೂರ್ಣ ಹದಿನಾಲ್ಕು ರಜ್ಜು ಹೋಗುವ ಸಾಮರ್ಥ್ಯವಿದೆಯೆಂದ ಮೇಲೆ ಜ್ಞಾನದ ಸಾಮರ್ಥ್ಯದ

ಮಾತನ್ನೇನು ಹೇಳುವುದು ? ಯಾವುದು ಯಾವುದರ ಸ್ವಭಾವವಿದೆ ಅದರಲ್ಲಿ ಮರ್ಯಾದೆಯಿರುವುದಿಲ್ಲ.

ಸಮ್ಯಕ್‌ದೃಷ್ಟಿಯು ಚಾಂಡಾಲನಿದ್ದರು ಕೂಡ ಅವನು ಸ್ವರ್ಗದ ದೇವರುಗಳಿಂದ ಪೂಜಿಸಲು ಯೋಗ್ಯನಿದ್ದಾನೆ. ಅವನು ಅಲ್ಪಕಾಲದಲ್ಲಿ ಚಾರಿತ್ರದ ಸ್ವೀಕಾರ ಮಾಡಿ ಮುಕ್ತಿ ಪ್ರಾಪ್ತ ಮಾಡಿಕೊಳ್ಳುವನು. ಮತ್ತು ಸ್ವದ್ರವ್ಯದ ದೃಷ್ಟಿಯಿಲ್ಲದೆ ಅವನು ಬೇಕಾದರೆ ಒಂಭತ್ತನೆಯ ಗ್ರೈವೇಯಕದ ದೇವನಿದ್ದರು ಕೂಡ ಪೂಜ್ಯನಿಲ್ಲ. ಆಚಾರ್ಯ ಕುಂದಕುಂದದೇವರು ಅಂಥವನನ್ನು ಸಂಸಾರತತ್ತ್ವ ಇನ್ನೂ ಪಾಪಿಯೆಂದು ಹೇಳಿದ್ದಾರೆ. ಅದಕ್ಕಾಗಿಯೇ ಸಮ್ಯಗ್ದರ್ಶನ ಸಹಿತವಾದ ನರಕವಾಸವು ಕೂಡ ಒಳ್ಳೆಯದಿದೆ, ಆದರೆ ಸಮ್ಯಗ್ದರ್ಶನವಿಲ್ಲದೆ ಸ್ವರ್ಗವಾಸವು ಕೂಡ ಒಳ್ಳೆಯದಿಲ್ಲವೆಂದು ಹೇಳಲಾಗಿದೆ. ಸಮ್ಯಗ್ದರ್ಶನವಾದರೆ ದೃಷ್ಟಿ ಅಪೇಕ್ಷೆಯಿಂದ ಮೋಕ್ಷವಾಗಿ ಹೋಯಿತು.

ಸಮ್ಯಗ್ದರ್ಶನವಾಗುತ್ತಿದ್ದಂತೆಯೇ ಅನಾದಿಯ ಅಜ್ಞಾನ ಅಂಧಕಾರದ ನಾಶವಾಗಿ ಜ್ಞಾನವು ಪ್ರಕಟವಾಗುತ್ತದೆ. ಸಮ್ಯಕ್‌ದೃಷ್ಟಿಗೆ 'ಸಬ ಆಗಮ ಭೇದ ಸು ಉರ ಬಸೆ' ಎಂದರೆ ಸಮಸ್ತ ಆಗಮದ ಸಾರವು ಜ್ಞಾನದಲ್ಲಿ ಬಂದು ಬಿಡುತ್ತದೆ. ಬಾಹ್ಯದಲ್ಲಿ ಎಲ್ಲಿಯೂ ಅನ್ವೇಷಣೆ ಮಾಡಲು ಹೋಗಬೇಕಾಗುವುದಿಲ್ಲ.

ಅಜ್ಞಾನದ ಅವಸ್ಥೆಯಲ್ಲಿ ಯಾವ ಸಂಸಾರವು ಪ್ರಿಯವೆನಿಸುತ್ತಿತ್ತು ಅದೇ ಸಂಸಾರವು ಸಮ್ಯಗ್ದರ್ಶನವಾಗುತ್ತಿದ್ದಂತೆ ತ್ಯಾಗ ಯೋಗ್ಯವಾಗಿ ತೋರಲಾರಂಭಿಸುತ್ತದೆ. ಇಂದ್ರಿಯ ಸುಖದ ರುಚಿಯು ಕೂಡ ಹೊರಟು ಹೋಗುತ್ತದೆ ಎಂದರೆ ದೃಷ್ಟಿಯಲ್ಲಿ ಮೂರು ಲೋಕದ ಇಂದ್ರಿಯ ಸುಖಗಳ ತ್ಯಾಗವಾಗಿ ಹೋಗುತ್ತದೆ.

ಸಮ್ಯಗ್ದರ್ಶನವಾಗುತ್ತಿದ್ದಂತೆಯೇ ಜೀವನು ಅನಂತ ಜ್ಞಾನ - ದರ್ಶನ - ವೀರ್ಯ - ಸುಖ ಮೊದಲಾದ ಸಂಪತ್ತಿಯ ಉತ್ತರಾಧಿಕಾರಿಯಾಗಿ ಹೋಗುತ್ತಾನೆ ಮತ್ತು ಅದೇ ಅನಂತ ಗುಣಗಳ ಅಂಶವು ಪರ್ಯಾಯದಲ್ಲಿ ಪ್ರಕಟವಾಗಿ ಹೋಗುತ್ತದೆ. ಅನಂತರ ಅವನು ಪರವಸ್ತುವಿನ ಅಧಿಪತಿಯಾಗುವುದೇ ಇಲ್ಲ. ಮಿಥ್ಯಾತ್ವ ಅವಸ್ಥೆಯಲ್ಲಿ ಶರೀರ ಮತ್ತು ಪರದ್ರವ್ಯಗಳಲ್ಲಿ ಅಹಂಕಾರ-ಮಮಕಾರ ಮಾಡುತ್ತಿದ್ದನು. ಈಗ ಆತ್ಮನಲ್ಲಿ ಅಹಂಕಾರ ಹಾಗೂ ಅವನ ಗುಣಗಳಲ್ಲಿ ಮಮಕಾರ ಮಾಡತೊಡಗುವನು.

ಚೈತನ್ಯರವಿಯು-ಸಮ್ಯಕ್ತ್ವಸೂರ್ಯನು ಉದಿಸುತ್ತಿದ್ದಂತೆಯೇ ಮಿಥ್ಯಾತ್ವರೂಪದ ಅಂಧಕಾರವು ನಷ್ಟವಾಗಿ ಹೋಗುತ್ತದೆ. ಮಿಥ್ಯಾತ್ವ ಅವಸ್ಥೆಯಲ್ಲಿ ಯಾವಾಗಲೂ ಇಷ್ಟದ ಪ್ರಾಪ್ತಿ ಮತ್ತು ಅನಿಷ್ಟದ ನಾಶ ಮಾಡುವ ಸಲುವಾಗಿ ಉದ್ಯಮಶೀಲನಿರುತ್ತಿದ್ದನು. ಈಗ ಅವನು ಇಷ್ಟ- ಅನಿಷ್ಟದ ದೃಷ್ಟಿಯನ್ನು ಬಿಟ್ಟುಕೊಟ್ಟು ಸ್ವಭಾವ ಪ್ರಾಪ್ತಿಯ ಸಲುವಾಗಿ ಉದ್ಯಮಶೀಲನಾಗುತ್ತಾನೆ. ದೃಷ್ಟಿಯು ಪರಿವರ್ತಿಸುತ್ತಿದ್ದಂತೆಯೇ ಎಲ್ಲವೂ ಬದಲಾಗಿ ಹೋಗುತ್ತದೆ. ಅದರ ಮಹಿಮೆಯನ್ನು ಹೇಗೆ ಎಷ್ಟೆಂದು ಮಾಡುವುದು !

ಸಮ್ಯಕ್‌ದೃಷ್ಟಿಯು ಗೃಹಸ್ಥಾವಸ್ಥೆಯಲ್ಲಿ ಎಲ್ಲಿಯೂ ಲಿಪ್ತನಾಗುವುದಿಲ್ಲ. ಆಂತರ್ಯದಲ್ಲಿ ವಿರಕ್ತನಾಗಿರುತ್ತಾನೆ. ಮತ್ತು ಭೇದವಿಜ್ಞಾನವನ್ನು ಭಾವಿಸುತ್ತ ನಿದಾನವಾಗಿ ನಿರ್ಮಲನಾಗುತ್ತ ಕೊನೆಯಲ್ಲಿ ಮುನಿಯಾಗಿ ಕೇವಲಜ್ಞಾನದವರೆಗೆ ತಲುಪಿ ಬಿಡುತ್ತಾನೆ. ಸಮ್ಯಗ್ದರ್ಶನವೊಂದೇ ನಿಜವಾದ ಮಿತ್ರನಿದ್ದು ಅದು ಸಂಸಾರದ ದುಃಖಗಳಿಂದ ಬಿಡುಗಡೆ ಮಾಡಿಸಿ ನಿರ್ವಾಣದಲ್ಲಿ ತಲುಪಿಸಿ ಬಿಡುತ್ತದೆ.

ಈಗ ಇಲ್ಲಿ ಆತ್ಮಾನುಶಾಸನದ ದೃಷ್ಟಾಂತ ಕೊಡುತ್ತಾರೆ - ಸಮ್ಯಗ್ದರ್ಶನವಿಲ್ಲದೆ ಶಾಂತಭಾವ, ಜ್ಞಾನ, ಚಾರಿತ್ರ ಮೊದಲಾದವುಗಳೆಲ್ಲವೂ ಪಾಷಾಣದ ಸಮಾನವಾಗಿ ತುಚ್ಛವಿವೆ. ಮತ್ತು ಅದೇ ಶಾಂತಭಾವ, ಜ್ಞಾನ, ಚಾರಿತ್ರ ಮೊದಲಾದವುಗಳೆಲ್ಲವೂ ಸಮ್ಯಗ್ದರ್ಶನಸಹಿತವಾಗಿದ್ದರೆ ಅವುಗಳ ಬೆಲೆಯು ಮಹಾರತ್ನದ ಸಮಾನವಾಗಿ ಹೋಗುತ್ತವೆ.

ಈ ಪ್ರಕಾರ ಮೂಲ ಬೆಲೆಯು ಸಮ್ಯಗ್ದರ್ಶನದ್ದಿದೆ. ಆದುದರಿಂದ ಸಮ್ಯಕ್‌ದೃಷ್ಟಿಯೇ ಮುಖ್ಯನಿದ್ದಾನೆ, ಪಂಡಿತನಿದ್ದಾನೆ, ಜಗತ್ತಿನಲ್ಲಿ ಶ್ರೇಷ್ಠನಿದ್ದಾನೆ. ಆದುದರಿಂದ ಧರ್ಮದ ಮೂಲ ರೂಪದಲ್ಲಿ ಸಮ್ಯಗ್ದರ್ಶನದ ಹೊರತಾಗಿ ಬೇರೆ ಯಾವ ಪದಾರ್ಥವೂ ಮಹಿಮಾವಂತವಿಲ್ಲ.

ಆತ್ಮನಲ್ಲಿ ಸ್ಥಿರವಾಗುವುದೇ ಸಂವರ - ನಿರ್ಜರೆಯ ಕಾರಣವಿದೆಯೆಂದು ಈಗ ಹೇಳುತ್ತಾರೆ, -

ಅಜರು ಅಮರು ಗುಣ-ಗಣ-ಣಿಲಉ ಜಹಿಂ ಅಪ್ಪಾ ಥಿರು ಠಾಇ
ಸೋ ಕಮ್ಮೇಹಿಂ ಣ ಬಂಧಿಯಉ ಸಂಚಿಯ ಪುವ್ವ-ವಿಲಾಇ ॥91॥

ಅಜರ ಅಮರ ಗುಣನಿಧಿ ಆತ್ಮ ತನ್ನೊಳಗೇ ತಾ ನೆಲೆಸಿದರೆ
ಸೃಜಿಸಿದ ಕರ್ಮವು ಕಳೆಯುವುದು ನೂತನ ಕರ್ಮವು ಬಂಧಿಸದು ॥91॥

ಅರ್ಥ : ಅಜರ ಅಮರ ಗುಣಗಳ ನಿಧಾನನಾದಂಥ ಆತ್ಮನು ತನ್ನಲ್ಲಿ ತಾನು ಸ್ಥಿರಗೊಂಡರೆ ಆ ಆತ್ಮನು ನವೀನ ಕರ್ಮಗಳಿಂದ ಬದ್ಧನಾಗುವುದಿಲ್ಲ, ಆದರೆ ಪೂರ್ವದಲ್ಲಿ ಸಂಚಯಿಸಿದ ಕರ್ಮಗಳ ಕ್ಷಯ ಮಾಡುತ್ತಾನೆ.

ಆತ್ಮನು ಅಜರ, ಅಮರನಿದ್ದಾನೆಂದು ಆಚಾರ್ಯ ಯೋಗೀಂದುದೇವರು ಹೇಳುತ್ತಾರೆ. ಅಮರ ಎಂದರೆ ಶಾಶ್ವತ, ಧ್ರುವ ಅಕೃತ್ರಿಮ, ಅಕೃತ, ಚೈತನ್ಯ ಮೂರ್ತಿಯಿದ್ದಾನೆ. ಅವನಲ್ಲಿ ಎಂದೂ ಶಿಥಿಲತೆಯು ಬರುವುದೇ ಇಲ್ಲ ಮತ್ತು ಅವನ ಮರಣವೆಂದೂ ಆಗುವುದೇ ಇಲ್ಲ, ಆತ್ಮನು ಅನಾದಿ ಅನಂತ ಅಜನ್ಮ ಮತ್ತು ಅಮರಣ ಸ್ವಭಾವಿಯಿದ್ದಾನೆ. ಇಂಥ ಗುಣಸ್ವಭಾವಿಯಾದ ಆತ್ಮನಲ್ಲಿ ಯಾವನು ಸ್ಥಿರನಾಗುತ್ತಾನೆ ಅವನು ನವೀನ ಕರ್ಮಗಳನ್ನು ಕಟ್ಟಿಕೊಳ್ಳುವುದಿಲ್ಲ ಮತ್ತು ಪೂರ್ವಬದ್ಧ ಕರ್ಮಗಳ ನಾಶ ಮಾಡಿ ಮುಕ್ತನಾಗುತ್ತಾನೆ.

ಜೀವನು ಅನಾದಿಯಿಂದ ಪುಣ್ಯ - ಪಾಪದ ರಾಗದಲ್ಲಿ ಮತ್ತು ವಿಕಲ್ಪಗಳಲ್ಲಿ ಸ್ಥಿರನಿರುವುದರಿಂದ ಅವನಿಗೆ ಕರ್ಮಗಳ ಬಂಧನವಿದೆ. ಆದರೆ ಯಾವ ಜೀವನು ಶುದ್ಧ ಚೈತನ್ಯ ಸ್ವರೂಪದ ಪ್ರಾಪ್ತಿ ಮಾಡಿಕೊಂಡು ಅದರಲ್ಲಿಯೇ ಸ್ಥಿರನಾಗುತ್ತಾನೆ ಅವನಿಗೆ ನವೀನ ಕರ್ಮಗಳು ಕಟ್ಟುವುದಿಲ್ಲ ಮತ್ತು ಮೊದಲಿನ ಕರ್ಮಗಳ ನಾಶವಾಗಿ ಹೋಗುತ್ತದೆ.

ಇಲ್ಲಿ ಉತ್ಪಾದ, ವ್ಯಯ ಮತ್ತು ಧ್ರೌವ್ಯ ಇವು ಮೂರನ್ನೂ ಸ್ವೀಕರಿಸಲಾಗಿದೆ. ಆತ್ಮನು ಧ್ರುವ, ಅಜರ, ಅಮರನಿದ್ದಾನೆ; ಅವನ ದೃಷ್ಟಿ, ಜ್ಞಾನ, ಸ್ಥಿರತೆ ಮಾಡುತ್ತಿದ್ದಂತೆಯೇ ಕರ್ಮ ರಹಿತವಾದ ನಿರ್ಮಲ ಪರ್ಯಾಯದ ಉತ್ಪಾದವಾಗುತ್ತದೆ ಮತ್ತು ಮೊದಲಿನ ಅಶುದ್ಧ ಪರ್ಯಾಯದ ನಾಶವಾಗುತ್ತದೆ, ನಿರ್ಮಲತೆಯ ಉತ್ಪಾದ ಮಲಿನತೆಯ ವ್ಯಯ ಮತ್ತು ಧ್ರೌವ್ಯವಂತೂ ತ್ರಿಕಾಲ ಇದ್ದೇ ಇದೆ. ಇಂಥ ಉತ್ಪಾದ - ವ್ಯಯರೂಪವು ಇದುಧಾರ್ಮಿಕ ಕ್ರಿಯೆಯಿದ್ದು ಇದುವೇ ಜಿನಧರ್ಮದ ಕ್ರಿಯೆಯಿದೆ. ಚೈತನ್ಯ ಬಿಂಬ ಧ್ರುವಸ್ವಭಾವದಲ್ಲಿ ಅಭಿರುಚಿ ಮಾಡುವ ರೂಪದ ಪರಿಣತಿ ಮಾಡಿ ಸ್ಥಿರವಾಗುವುದು ಅದು ಸಂವರ - ನಿರ್ಜರೆ ರೂಪದ ಜೈನ ಧರ್ಮದ ಧಾರ್ಮಿಕ ಕ್ರಿಯೆಯಿದೆ. ಲಕ್ಷಾಂತರ ಶಾಸ್ತ್ರಗಳ ರಚನೆ ಮಾಡುವುದರ ಸಾರವೆಂದರೆ - ಹೇತುವೆಂದರೆ ಈ ಕ್ರಿಯೆಯನ್ನು ಮಾಡಿಸುವುದೇ ಆಗಿದೆ.

ಭಗವಾನ ಆತ್ಮನು ಜನ್ಮ - ಮರಣಗಳಿಂದ ರಹಿತ ಅವಿನಾಶಿಯಿದ್ದಾನೆ. ಜಗತ್ತಿನ ಜನರು ಶರೀರದ ಸಂಯೋಗವನ್ನು ಜನ್ಮವೆಂದು ಹೇಳುತ್ತಾರೆ ಮತ್ತು ಶರೀರದ ವಿಯೋಗವನ್ನು ಮರಣವೆಂದು ಹೇಳುತ್ತಾರೆ. ಆತ್ಮನಂತೂ ಅನಾದಿ ಅನಂತನಿದ್ದಾನೆ, ಜನ್ಮ-ಮರಣಗಳಿಂದ ರಹಿತನಿದ್ದಾನೆ. ಆತ್ಮನು ಅಸ್ತಿತ್ವ, ವಸ್ತುತ್ವ ಮೊದಲಾದ ಸಾಮಾನ್ಯ ಗುಣಗಳಿಂದ ಮತ್ತು ಜ್ಞಾನ, ದರ್ಶನ ಮೊದಲಾದ ವಿಶೇಷ ಗುಣಗಳಿಂದ ಸಹಿತನಿದ್ದಾನೆ. ಆತ್ಮನು ವಿಶೇಷ ಗುಣಗಳ ಸಮೂಹನಿದ್ದು ಅವನಲ್ಲಿ ಏಕಾಗ್ರವಾಗುವುದರಿಂದ ಸಂವರ - ನಿರ್ಜರೆಗಳು ಪ್ರಕಟವಾಗುತ್ತವೆ.

ಆತ್ಮನಲ್ಲಿ ಆನಂದವೆಂಬ ಹೆಸರಿನ ಒಂದು ವಿಶೇಷ ಗುಣವಿದ್ದು ಆ ಗುಣವು ಆತ್ಮನ ಎಲ್ಲ ಅವಸ್ಥೆಗಳಲ್ಲಿ ಇರುತ್ತದೆ. ಹೀಗೆ ಇದ್ದರೂ ಕೂಡ ಆನಂದವು ಅದೇಕೆ ಬರುತ್ತಿಲ್ಲವೆಂಬ ಪ್ರಶ್ನೆಯು ಇಲ್ಲಿ ಸ್ವಾಭಾವಿಕವಾಗಿ ಉತ್ಪನ್ನವಾಗುತ್ತದೆ. ಇದರ ಕಾರಣವೇನೆಂದರೆ ಅಜ್ಞಾನ ದಶೆಯಲ್ಲಿ ಜೀವದ ಅಭಿರುಚಿಯು ಪುಣ್ಯ-ಪಾಪ ಮೊದಲಾದವುಗಳಲ್ಲಿ ಇರುವುದರಿಂದ ಗುಣದ ಪರಿಣಮನವು ದುಃಖ ರೂಪವಾಗುತ್ತದೆ. ಪ್ರತಿಯೊಂದು ಗುಣದ ಪರಿಣಮನವು ಪ್ರತಿಯೊಂದು ಸಮಯದಲ್ಲಿ ಆಗುತ್ತಲೇ ಇದೆ, ಆದರೆ ಅದು ಅಜ್ಞಾನ ದಶೆಯಲ್ಲಿ ದುಃಖರೂಪದಿಂದ ಪರಿಣಮಿಸುತ್ತದೆ ಮತ್ತು ಸ್ವಭಾವದ

ಶ್ರದ್ಧೆಯಾಗುತ್ತಿರುವಂತೆಯೇ ಮುಖ್ಯ ರೂಪದಿಂದ ಆನಂದ ರೂಪದ ಪರಿಣಮನವಾಗುತ್ತದೆ. ಮತ್ತು ಗೌಣ ರೂಪದಿಂದ ಸಾಧಕನಿಗೆ ದುಃಖವು ಕೂಡ ಇದೆ; ಆದರೆ ಇಲ್ಲಿ ಆ ಮಾತಿನ ಗೌಣತೆಯಿದೆ.

ಅಂತರ್ಮುಖಿ ದೃಷ್ಟಿಯಿಂದ ಅನಂತ ಗುಣ ಸಮುದಾಯನಾದ ಆತ್ಮನ ಶ್ರದ್ಧೆ-ವಿಶ್ವಾಸ ಮೂಡುತ್ತಿರುವಂತೆಯೇ ಸಮ್ಯಗ್ದರ್ಶನವು ಪ್ರಾಪ್ತವಾಗುತ್ತದೆ, ಎಂದರೆ ಸಮ್ಯಗ್ದರ್ಶನವು ಪೂರ್ಣ ದ್ರವ್ಯದ ಪ್ರತೀತಿ ಮಾಡುತ್ತದೆ. ಇದರಿಂದ ದ್ರವ್ಯದಲ್ಲಿರುವಂಥ ಎಲ್ಲ ಅನಂತ ಗುಣಗಳ ಪರಿಣಮನವು ಕೂಡ ಆಂಶಿಕ ನಿರ್ಮಲವಾಗಿ ಹೋಗುತ್ತದೆ.

ಭಗವಾನ ಆತ್ಮನು ಪ್ರಕಟ ದ್ರವ್ಯನಿದ್ದಾನೆ. ಪ್ರಕಟ ಎಂದರೆ 'ಇದ್ದಾನೆ' ಮತ್ತು ಅವನು ಅಸ್ತಿತ್ವವುಳ್ಳ - ಸತ್ತಾವುಳ್ಳ ತತ್ತ್ವನಿದ್ದಾನೆ. ಅದರಂತೆ ಆ ಸತ್ ತತ್ತ್ವದ ಗುಣಗಳು ಕೂಡ ಸತ್ - ಶಾಶ್ವತವಿವೆ. ಆತ್ಮನು ಅಜರ - ಅಮರನಿದ್ದಾನೆಂದ ಮೇಲೆ ಅವನ ಗುಣಗಳು ಕೂಡ ಅಜರ - ಅಮರವಿವೆ. ಮತ್ತು ಗುಣಗಳು ಅಜರ - ಅಮರವಿರುವುದರಿಂದ ದ್ರವ್ಯವು ಅಜರ - ಅಮರವಿದೆ.

ಮುಖ್ಯ ಮಾತೆಂದರೆ ಈ ಜೀವನು ಈ ಮೊದಲೆಂದೂ ಆತ್ಮ ತತ್ತ್ವದ ವಿಶ್ವಾಸವನ್ನೇ ಮಾಡಲಿಲ್ಲ. ಒಂದು ವೇಳೆ ಆತ್ಮ ತತ್ತ್ವದ ವಿಶ್ವಾಸ ಮಾಡುತ್ತಿದ್ದರೆ ಒಂದು ಸೇಕಂದದ ಅಸಂಖ್ಯಾತದ ಭಾಗದಲ್ಲಿ ಇವನ ಅನಂತ ಗುಣಗಳ ಅಂಶರೂಪವಾದ ಶುದ್ಧ ಪರ್ಯಾಯವು ಪ್ರಕಟವಾಗಿ ಬಿಡುತ್ತದೆ.

ಅಜ್ಞಾನ ಅವಸ್ಥೆಯ ಸಮಯದಲ್ಲಿ ಕೂಡ ಆತ್ಮನನ್ನು ಶರೀರ ಮತ್ತು ಕರ್ಮದಿಂದ ರಹಿತವಾಗಿ ನೋಡಿದರೆ ಆತ್ಮನು ಶುದ್ಧನೇ ಇದ್ದಾನೆ. ಪರ್ಯಾಯದಲ್ಲಿ ಅಶುದ್ಧತೆಯಿದೆ ಅದಂತೂ ಆಸ್ರವ ತತ್ತ್ವವಿದೆ. ಜ್ಞಾಯಕ ತತ್ತ್ವವಂತೂ ಅಜೀವ ತತ್ತ್ವದಿಂದ ಅತ್ಯಂತ ಭಿನ್ನವಿದೆ. ಅನಿತ್ಯ ತಾದಾತ್ಮ್ಯದ ಅಪೇಕ್ಷೆಯಿಂದ ಆತ್ಮನ ಜತೆಯಲ್ಲಿ ಆಸ್ರವ ತತ್ತ್ವದ್ದೂ ಕೂಡ ಏಕರೂಪತೆಯು ಕಂಡು ಬರುತ್ತದೆ. ಆದರೆ ನಿತ್ಯ ತಾದಾತ್ಮ್ಯ ಭಾವದ ಅಪೇಕ್ಷೆಯಿಂದ ಪರ್ಯಾಯವು ಕೂಡ ಸಂಯೋಗಿಯಿದೆ. ಪರ ದ್ರವ್ಯವಿದೆ. ಸಮಯಸಾರ ಗ್ರಂಥದಲ್ಲಿ ಕರ್ತಾ - ಕರ್ಮ ಅಧಿಕಾರದ ೭೬-೭೦ ನೆಯ ಗಾಥೆಗಳಲ್ಲಿ ಕೂಡ ಇದೇ ಮಾತನ್ನು ಹೇಳಿದೆ, ಏಕೆಂದರೆ ಇದು ಆತ್ಮನ ಸ್ವರೂಪವಲ್ಲ.

ಯಾವ ಪ್ರಕಾರ ಮಲಿನವಾದ ನೀರನ್ನು ನೀರಿನ ಸ್ವಭಾವದ ದೃಷ್ಟಿಯಿಂದ ನೋಡಿದರೆ ಆ ನೀರಂತೂ ತ್ರಿಕಾಲ ಶುದ್ಧವಾಗಿಯೇ ಕಂಡು ಬರುತ್ತದೆ. ಮಲಿನತೆಯಂತೂ ಅದು ಮಣ್ಣಿನ ಅಂಶವಿದೆ, ಅದು ನೀರಿನ ಅಂಶವಲ್ಲ. ಅದೇ ಪ್ರಕಾರ ಆತ್ಮನು ವರ್ತಮಾನದಲ್ಲಿ ಶುಭಾಶುಭ ಭಾವ ಸಹಿತನಿದ್ದಾನೆ. ಅವನನ್ನು ಭೇದ ಜ್ಞಾನದ ಶಕ್ತಿಯಿಂದ ಶರೀರ, ಕರ್ಮ ಮತ್ತು ಶುಭಾಶುಭ ಭಾವಗಳಿಂದ ರಹಿತವಾಗಿ ನೋಡಬಹುದಾಗಿದೆ.

ರಾಗಾದಿಗಳ ಭಾವವಾಗುವುದು ಅದು ಆತ್ಮನ ಅಪರಾಧವಿದೆ. ಅದು ಭಗವಾನ ಆತ್ಮನ ಸ್ವಭಾವದ ವಿರುದ್ಧವಿರುವುದರಿಂದ ಅದು ಹೇಯವಿದೆ. ಅದನ್ನು ಹೇಯವೆಂದು ಹೇಳಿರುವುದರಿಂದ ಉಪಾದೇಯವು ಯಾವುದೆಂದರೆ ಶುದ್ಧ ಭಗವಾನ ಜ್ಞಾಯಕ ಭಾವವು ಉಪಾದೇಯವಿದೆ. ಶರೀರ ಮೊದಲಾದ ಪರದ್ರವ್ಯಗಳು ಜ್ಞೇಯವಿವೆ. ಅವು ಯಾವವೂ ಆಶ್ರಯ ಮಾಡಲು ಯೋಗ್ಯವಿಲ್ಲ. ಈ ಜ್ಞೇಯ ಮತ್ತು ಹೇಯ ಭಾವಗಳಿಂದ ರಹಿತನಾದ ನಿರ್ಮಲ ಶುದ್ಧಾತ್ಮನೇ ಉಪಾದೇಯನಿದ್ದಾನೆ.

ವರ್ತಮಾನದಲ್ಲಿ ಕೂಡ ಪ್ರತಿಯೊಬ್ಬರ ಹತ್ತಿರ ದೃಷ್ಟಿಯಂತೂ ಇದೆ, ದೃಷ್ಟಿಯಿದ್ದರೂ ಕೂಡ ಆ ದೃಷ್ಟಿಯಲ್ಲಿ ರಾಗ ಮತ್ತು ವಿಕಾರವನ್ನೇ ನೋಡುತ್ತಾನೆ, ಅದು ನಿಜ ಸ್ವಭಾವದಿಂದ ವಿರುದ್ಧವಾದ ಕ್ಷಣಿಕ ವಿಕೃತ ಅವಸ್ಥೆಯಿದ್ದು ಅದನ್ನು ನೋಡುತ್ತಾನೆ. ಅದೇ ದೃಷ್ಟಿಯಿಂದ ರಾಗಾದಿಗಳಿಂದ ರಹಿತನಾದ ಭಗವಾನ ಆತ್ಮನನ್ನು ನೋಡಿದರೆ ಭಗವಾನ ಆತ್ಮನು ಶುದ್ಧನಾಗಿಯೇ ಕಂಡು ಬರುತ್ತಾನೆ. ಭಗವಾನ ಆತ್ಮನನ್ನು ಅನ್ಯದ ಮೂಲಕ ತಿಳಿದುಕೊಳ್ಳಬೇಕಾದರೆ ಅವನು ಅಜ್ಞಾತನೆಲ್ಲಿದ್ದಾನೆ, ಜ್ಞಾನವಿಲ್ಲದವನೆಲ್ಲಿದ್ದಾನೆ? ಅವನು ತನ್ನನ್ನು ತಾನೇ ತಿಳಿದುಕೊಳ್ಳುವಂಥವನಿದ್ದಾನೆ ಮತ್ತು ನೋಡುವಂಥವನಿದ್ದಾನೆ.

ದ್ರವ್ಯವಂತೂ ರಾಗದ ಜತೆಯಲ್ಲಿ ಏಕತೆಗೆ ಪ್ರಾಪ್ತವಾಗುವುದಿಲ್ಲ. ದ್ರವ್ಯದ ದೃಷ್ಟಿಯಾದರೆ ಆ ದೃಷ್ಟಿಯು ಕೂಡ ರಾಗದ ಜತೆಯಲ್ಲಿ ಏಕತ್ವವಾಗುವುದಿಲ್ಲ. ದೃಷ್ಟಿಯು ಶುದ್ಧ ಸಂವರ-ನಿರ್ಜರೆ ರೂಪವಾದರೆ ಅದು ಎಂದೂ ಆಸ್ರವ-ಬಂಧ ರೂಪವಾಗುವುದಿಲ್ಲ. ಈ ಶ್ರದ್ಧೆ ಮತ್ತು ಜ್ಞಾನದ ಬಲದಿಂದ ಸಮ್ಯಕ್‌ದೃಷ್ಟಿಯು ಸ್ವಭಾವದಲ್ಲಿ ಸ್ಥಿರತೆಯ ಪುರುಷಾರ್ಥ ಮಾಡುತ್ತಾನೆ ಮತ್ತು ಸ್ಥಿರತೆಯಾಗುವುದೇ ಸಂವರ-ನಿರ್ಜರೆ ರೂಪದ ಮೋಕ್ಷಮಾರ್ಗವಿದೆ, ಉಳಿದ ವ್ರತ, ಉಪವಾಸ ಮೊದಲಾದ ಕ್ರಿಯೆಗಳು ಮೋಕ್ಷ ಮಾರ್ಗವಲ್ಲ.

ಸ್ವರೂಪದ ನಿರ್ವಿಕಲ್ಪ ಅನುಭವದ ಸಮಯದಲ್ಲಿ ಧರ್ಮಾತ್ಮನಿಗೆ ಅಧಿಕ ನಿರ್ಜರೆಯಾಗುತ್ತದೆ. ಶಾಸ್ತ್ರ ಸ್ವಾಧ್ಯಾಯದಿಂದ ನಿರ್ಜರೆಯಾಗುತ್ತದೆಯೆಂದು ಜನರು ಹೇಳುತ್ತಾರೆ, ಆದರೆ ಸೊದರನೇ ! ಪರಾಶ್ರಯದಿಂದ ನಿರ್ಜರೆ ಹೇಗಾಗುತ್ತದೆ ? ನಿರ್ಜರೆಯಂತೂ ಸ್ವರೂಪದಲ್ಲಿ ಸ್ಥಿರತೆ ಮಾಡುವುದರಿಂದಲೇ ಆಗುತ್ತದೆ.

ಪ್ರಶ್ನೆ :- ನನ್ನ ಪರಿಣತಿಯ ವಿಶುದ್ಧತೆಯ ಸಲುವಾಗಿ ನಾನು ಈ ಸಮಯಸಾರದ ಮೇಲೆ ಟೀಕೆಯ ರಚನೆ ಮಾಡುತ್ತಿದ್ದೇನೆಂದು ಆಚಾರ್ಯ ಅಮೃತಚಂದ್ರದೇವರು ಹೇಳುತ್ತಾರೆ. ಇಲ್ಲಿ ಟೀಕೆ ಬರೆಯುವುದರಿಂದ ನಿರ್ಜರೆಯಾಗುತ್ತದೆಯೆಂಬ ಮಾತಂತೂ ಬಂದಿದೆಯಲ್ಲವೇ ?

ಉತ್ತರ :- ಅಯ್ಯಾ ಸೋದರನೇ ! ಅದರ ಯಥಾರ್ಥ ಅರ್ಥವನ್ನು ತಿಳಿದುಕೊಳ್ಳಬೇಕಾಗುವುದು. ನಿರ್ಜರೆಯಂತೂ ಸ್ವರೂಪದ ಸ್ಥಿರತೆಯಿಂದಲೇ ಆಗುತ್ತದೆ. ಟೀಕೆ ಬರೆಯುವ ಸಮಯದಲ್ಲಿ ಆಚಾರ್ಯಶ್ರೀಯವರ ಯಾವ ಪ್ರಕಟ ವೀತರಾಗರೂಪದ ಶುದ್ಧ ಪರಿಣತಿಯಿದೆ ಅದರಿಂದ ನಿರ್ಜರೆಯಾಗುತ್ತದೆ.

ನಾಲ್ಕನೆಯ ಗುಣಸ್ಥಾನದಿಂದ ಸ್ವರೂಪಾಚರಣ ಚಾರಿತ್ರವು ಪ್ರಾರಂಭವಾಗಿ ಬಿಡುತ್ತದೆಯೆಂಬುದು ನ್ಯಾಯದಿಂದಲೇ ಸಿದ್ಧವಿದೆ. ಶುದ್ಧ ಸ್ವಭಾವದ ದೃಷ್ಟಿಯಾಗುತ್ತಿರುವಂತೆಯೇ ಆಂಶಿಕ ಸ್ಥಿರತೆಯಾಗುತ್ತದೆ. ಸಮ್ಯಕ್‌ದೃಷ್ಟಿಯಾಗುತ್ತಿದ್ದಂತೆ ಮಿಥ್ಯಾತ್ವದ ನಾಶವಾಗುತ್ತದೆ ಮತ್ತು ಸಮ್ಯಕ್ತ್ವದ ಉತ್ಪತ್ತಿಯಾಗುತ್ತದೆ. ಅದೇ ಪ್ರಕಾರ ಅನಂತಾನುಬಂಧಿಯ ನಾಶವಾಗುವುದರಿಂದ ಸ್ವರೂಪಾಚರಣ ಚಾರಿತ್ರವು ಪ್ರಕಟವಾಗುತ್ತದೆ.

ಯಾವ ಪ್ರಕಾರ ಅಬ್ಜಾಧೀಶನ ಅಂಗಡಿಯಲ್ಲಿ ಗುಮಾಸ್ತನು ಕೂಡ ಬುದ್ಧಿಶಾಲಿಯಿರುತ್ತಾನೆ ಮತ್ತು ಅಧಿಕ ವೇತನವುಳ್ಳವನಿರುತ್ತಾನೆ ಅವನು ಗಾಣಿಗನಂತೆ ಇರುವುದಿಲ್ಲವೆಂದ ಮೇಲೆ ಇದಂತೂ ಸರ್ವಜ್ಞರ ಅಂಗಡಿಯಿದೆ. ಧರ್ಮದ ಅಧಿಪತಿಯಾದಂಥ ಸರ್ವಜ್ಞರ ಅಂಗಡಿಯಲ್ಲಿ ಕುಳಿತುಕೊಳ್ಳುವಂಥವನು ಬಹಳಷ್ಟು ಹೊಣೆಗಾರಿಕೆಯನ್ನು ತಿಳಿದುಕೊಳ್ಳಬೇಕಾಗುವುದು. ಇಲ್ಲಿ ವಿಪರೀತವಾದ ಮತ್ತು ನ್ಯಾಯವಿಲ್ಲದ ಮಾತುಗಳು ನಡೆಯುವುದಿಲ್ಲ. ಪ್ರಭುಗಳ ವೀತರಾಗ ಮಾರ್ಗವು ಅಪ್ಪಟ ನ್ಯಾಯಮಾರ್ಗವಿದೆ.

ನಾಲ್ಕನೆಯ ಗುಣಸ್ಥಾನದಲ್ಲಿ ಸ್ವರೂಪಾಚರಣ ಚಾರಿತ್ರವು ಇರುವುದಿಲ್ಲವೆಂದು ಕೆಲವರು ಮನ್ನಿಸುತ್ತಾರೆ. ಆದರೆ ಸೋದರನೇ ! ಸಮ್ಯಕ್ತ್ವವಾಗುತ್ತಿದ್ದಂತೆಯೇ ಅನಂತ ಗುಣಗಳ ಅಂಶವು ಪ್ರಕಟವಾಗುತ್ತದೆ. ಅದರಲ್ಲಿ ಅನಂತಾನುಬಂಧೀ ಕಷಾಯದ ನಾಶವಾಗುವುದರಿಂದ ಆಂಶಿಕ ಅಕಷಾಯ ಭಾವವು ಎಂದರೆ ವೀತರಾಗ ಭಾವವು ಪ್ರಕಟವಾಗುತ್ತದೆ ಅದುವೇ ಸ್ವರೂಪಾಚರಣ ಚಾರಿತ್ರವಿದೆ. ವಸ್ತುಸ್ಥಿತಿಯೇ ಈ ಪ್ರಕಾರವಿದೆ, ಅಲ್ಲಿ ವಾದವಿವಾದಕ್ಕೆ ಯಾವ ಆಸ್ಪದವೇ ಇಲ್ಲ.

ಆಹಹಾ ! ಅನಂತ ಕಾಲದಲ್ಲಿ ತುಂಬ ಕಠಿಣತೆಯಿಂದ ಇಂಥ ಅವಕಾಶವು ದೊರಕಿದೆ. ನಿಗೋದದಿಂದ ಹೊರ ಹೊರಟು ಪಂಚೇಂದ್ರಿಯವಾಗುವುದೂ ದುರ್ಲಭವಿದೆ ಅದರಲ್ಲಿ ಮನುಷ್ಯತನ ದೊರಕುವುದು ಮತ್ತು ಯಥಾರ್ಥ ಮಾತುಗಳು ಕೇಳಲು ಸಿಗುವುದು ಹಾಗೂ ಅದರ ರುಚಿಯಾಗುವುದು ಅದು ಅತ್ಯಂತ ದುರ್ಲಭವಿದೆ.

ಈಗ ಐದನೆಯ ಗುಣಸ್ಥಾನದ ಮಾತು ಹೇಳುತ್ತಾರೆ. ಇಲ್ಲಿ ಸ್ವರೂಪ ಸ್ಥಿರತೆಯ ವೃದ್ಧಿಯಾಗುತ್ತದೆ ಮತ್ತು ಅಪ್ರತ್ಯಾಖ್ಯಾನ ಕಷಾಯದ ನಾಶವಾಗುತ್ತದೆ.

ಭಗವಾನ ಆತ್ಮನು ಅಕ್ರಿಯ ಶುದ್ಧ ಬಿಂಬನಿದ್ದು ಅವನು ನಿಶ್ಚಯನಿದ್ದಾನೆ ಮತ್ತು ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಪರ್ಯಾಯವಾಗುತ್ತದೆ ಅದು ಭೇದರೂಪವಿರುವುದರಿಂದ ಅದನ್ನು ವ್ಯವಹಾರವೆಂದು ಹೇಳಿದೆ. ಮೋಕ್ಷ ಮಾರ್ಗದ ಪರ್ಯಾಯದ ಆಶ್ರಯದಿಂದ ಮೋಕ್ಷ ಮಾರ್ಗವಾಗುವುದಿಲ್ಲ, ಅದು ಶುದ್ಧ ಆತ್ಮ ದ್ರವ್ಯದ ಆಶ್ರಯದಿಂದಲೇ ಆಗುತ್ತದೆ, ಶುದ್ಧ ಪರ್ಯಾಯವನ್ನು ಇಲ್ಲಿ ವ್ಯವಹಾರವೆಂದು ಹೇಳಿದೆ.

ಪಂಚಮ ಗುಣಸ್ಥಾನಾವರ್ತಿಯಾದ ಶ್ರಾವಕನ ಶಾಂತಿಯು ಸರ್ವಾರ್ಥಸಿದ್ಧಿಯ ದೇವನಿಗಿಂತಲೂ ಅಧಿಕವಾಗಿರುತ್ತದೆ. ಜ್ಞಾನವು ವಿಶೇಷವಿಲ್ಲದಿದ್ದರೂ ಸ್ಥಿರತೆಯು ವೃದ್ಧಿಸಿರುತ್ತದೆ. ಯಾವನು ದೃಷ್ಟಿಯಲ್ಲಿ ಆತ್ಮನನ್ನು ಹಿಡಿದುಕೊಂಡಿದ್ದಾನೆ ಮತ್ತು ಅವನಲ್ಲಿ ಮುಂದುವರೆದಿದ್ದಾನೆ ಅವನಿಗೆ ಯಾವುದು ಬಾಕಿ ಉಳಿದಿದೆ ? ಶ್ರಾವಕನಿಗೆ ಪ್ರತಿಮೆಯಿರುತ್ತದೆ ಅದಂತೂ ವ್ಯವಹಾರವಿದೆ, ಆದರೆ ಅಂತರ್ಯದಲ್ಲಿ ಸ್ಥಿರತೆಯ ಅಂಶವು ವೃದ್ಧಿಸಿದೆ ಅದು ವಾಸ್ತವಿಕ ಪ್ರತಿಮೆಯಿದೆ. ಅದರಿಂದ ಮುಂದೆ ಆರನೆಯ ಗುಣಸ್ಥಾನದಲ್ಲಿ ಸ್ಥಿರತೆಯು-ಶುದ್ಧ ಪರಿಣತಿಯು ವಿಶೇಷವಾಗಿ ಹೆಚ್ಚುತ್ತದೆ ಮತ್ತು ಪ್ರತ್ಯಾಖ್ಯಾನ ಕಷಾಯವು ನಾಶವಾಗಿ ಹೋಗುತ್ತದೆ. ಏಳನೇಯದಾದ ಅಪ್ರಮತ್ತ ಗುಣಸ್ಥಾನದಲ್ಲಿ ಆರನೇಯದರಿಗಿಂತ ಅಧಿಕವಾದ ಸ್ಥಿರತೆಯು ವೃದ್ಧಿಸಿ ಹೋಗಿರುತ್ತದೆ. ಹೀಗೆ ಕ್ರಮದಿಂದ ವೃದ್ಧಿಸುತ್ತ - ವೃದ್ಧಿಸುತ್ತ ಹನ್ನೆರಡನೆಯ ಗುಣಸ್ಥಾನದಲ್ಲಿ ವೀತರಾಗತೆಯಾಗುತ್ತಿದ್ದಂತೆಯೇ ಅಂತರ್ಮುಹೂರ್ತದಲ್ಲಿ ಕೇವಲಜ್ಞಾನವಾಗಿ ಹೋಗುತ್ತದೆ.

ಸೋದರನೇ ! ಈ ತತ್ತ್ವವಂತೂ ತಾಳ್ಮೆಯಿಂದ ತಿಳಿದುಕೊಂಡರೆ ತಿಳಿದು ಬರುವಂತಿದೆ. ಪಕ್ಷ ಮೋಹದಿಂದ ಅಥವಾ ಆಗ್ರಹದಿಂದ ಈ ಮಾತು ತಿಳಿದು ಬರುವುದಿಲ್ಲ, ಓರ್ವ ತನ್ನ ಆತ್ಮನ ಹುಚ್ಚು ಹಿಡಿದವನಿಗೇ ಇದು ತಿಳಿದು ಬರುವಂತಿದೆ. ನೀನು ಓರ್ವ ಆತ್ಮನ ಸಂಬಂಧವಾಗಿಯೇ ಪ್ರಶ್ನೆ ಕೇಳು. ಅದರದೇ ಉತ್ತರ ಬಯಸು. ಕೇವಲ ತಿಳಿದುಕೊಳ್ಳುವ ವಿಷಯದಲ್ಲಿ ಮುಂದುವರೆದು ಏನು ಮಾಡುವೆ ? ಮೊದಲು ಆತ್ಮನನ್ನಾದರೂ ತಿಳಿದುಕೊಳ್ಳು. ಆತ್ಮನ ಸಂಬಂಧದಲ್ಲಿಯೇ ಪ್ರಶ್ನೆ ಮಾಡುವುದು ಇದು ಮೋಕ್ಷೇಚ್ಛುವಿನ ಆದ್ಯ ಕರ್ತವ್ಯವಿದೆಯೆಂದು ಇಷ್ಟೋಪದೇಶದಲ್ಲಿ ಹೇಳಿದೆ. ಆತ್ಮನ ತಿಳಿವಳಿಕೆಯಿಲ್ಲದೆ ಧ್ಯಾನವು ವ್ಯರ್ಥವಿದೆ.

ಆತ್ಮನಲ್ಲಿ ಲೀನನಿರುವ ಜೀವನು ಕರ್ಮಗಳಿಂದ ಬದ್ಧನಾಗುವುದಿಲ್ಲವೆಂದು ಈಗ ಹೇಳುತ್ತಾರೆ, -

ಜಹ ಸಲಿಲೇಣ ಣ ಲಿಪ್ಪಿಯಇ ಕಮಲಣಿ-ಪತ್ತ ಕಯಾ ವಿ
ತಹ ಕಮ್ಮೇಹಿಂ ಣ ಲಿಪ್ಪಿಯಇ ಜಇ ರಇ ಅಪ್ಪ-ಸಹಾವಿ ||92||

ಸ್ಪರ್ಶಿಸದೆಂದು ಕಮಲ ಪತ್ರವು ನೀರಿನಲ್ಲಿದ್ದರು ನೀರನ್ನು
ಸ್ಪರ್ಶಿಸನೆಂದು ಕರ್ಮವ ಆತ್ಮ ಆತ್ಮರೂಪದಲಿ ಲೀನನಿರೆ ||92||

ಅರ್ಥ :- ಯಾವ ಪ್ರಕಾರ ಕಮಲದ ಪತ್ರವು ಎಂದೂ ನೀರಿನಿಂದ ಲಿಪ್ತವಾಗುವುದಿಲ್ಲ, ಅದೇ ಪ್ರಕಾರ ಆತ್ಮನು ಒಂದು ವೇಳೆ ಸ್ವಭಾವದಲ್ಲಿ ನಿಮಗ್ನನಿದ್ದರೆ ಅವನು ಕರ್ಮಗಳಿಂದ ಲಿಪ್ತನಾಗುವುದಿಲ್ಲ, ಬದ್ಧನಾಗುವುದಿಲ್ಲ.

ನೀನು ನಿನ್ನ ಆತ್ಮನ ಪ್ರತೀತಿ ಮಾಡು ಮತ್ತು ಅವನಲ್ಲಿಯೇ ವಿಹಾರ ಮಾಡು ಎಂದರೆ ನೀನು ಅವಶ್ಯವಾಗಿ ಕರ್ಮಗಳಿಂದ ಬಿಡುಗಡೆಯಾಗುವೆ ಮತ್ತು ನಿರ್ವಾಣ ಪಡೆಯುವೆಯೆಂದು ಇಲ್ಲಿ ಒಂದು ನಿಯಮ ಹೇಳಿದ್ದಾರೆ. ಸಮಯಸಾರದ ನಿರ್ಜರಾ ಅಧಿಕಾರದ ಇನ್ನೂರಾ ಆರನೆಯ ಗಾಥೆಯಲ್ಲಿ ಹೇಳುತ್ತಾರೆ - 'ನೀನು ನಿನ್ನ ಆತ್ಮನ ಮೇಲೆ ಪ್ರೀತಿ ಮಾಡು, ಆತ್ಮನಲ್ಲಿಯೇ ಸಂತುಷ್ಟನಾಗು, ಅವನಲ್ಲಿಯೇ ಕ್ರೀಡೆ ಮಾಡು, ಅವನಲ್ಲಿಯೇ ಅನುರಕ್ತನಾಗು ಎಂದರೆ ನಿನಗೆ ಉತ್ತಮ ಸುಖದ ಪ್ರಾಪ್ತಿಯಾಗುವುದು.

ಜನರು ವ್ರತ, ಭಕ್ತಿ, ಪೂಜೆ, ಸಿದ್ಧ ಕ್ಷೇತ್ರಗಳ ದರ್ಶನ ಮೊದಲಾದವುಗಳಿಂದ ಲಾಭವಿದೆಯೆಂದು ಮನ್ನಿಸುತ್ತಾರೆ ಮತ್ತು ಆತ್ಮನ ಮಾತನ್ನು ಕೇಳಿ ರೇಗಿ ಹೋಗುತ್ತಾರೆ. ಆದರೆ ಸೋದರನೇ ! ಸಿದ್ಧಕ್ಷೇತ್ರವಂತೂ ನೀನು ಸ್ವಯಂ ಇರುವೆ. ನೀನು ನಿನ್ನ ದರ್ಶನ ಮಾಡು ! ನಿನ್ನ ಆತ್ಮನು ತನ್ನ ಅಂತರ್ಯದಲ್ಲಿ ಅನಂತ ಸಿದ್ಧ ಪರ್ಯಾಯಗಳನ್ನು ಧಾರಣ ಮಾಡಿ ಕುಳಿತುಕೊಂಡಿದ್ದಾನೆ. ಈ ನಿನ್ನ ಆತ್ಮರೂಪದ ಸಿದ್ಧ ಕ್ಷೇತ್ರದ ಮೇಲೆ ಆರೂಢನಾದೆಯೆಂದರೆ ನಿನ್ನ ಯಾತ್ರೆಯು ಸಾರ್ಥಕವಾಗುವುದು. ಶತ್ರುವಿನ ಮೇಲೆ ಜಯ ಪ್ರಾಪ್ತಮಾಡಿಕೊಳ್ಳುವಂಥ ಶತ್ರುಂಜಯ ಕ್ಷೇತ್ರವು ಕೂಡ ನಿನ್ನ ಭಗವಾನ ಆತ್ಮನೇ ಇದ್ದಾನೆ, ನೀನು ಅವನ ಯಾತ್ರೆ ಮಾಡು ! ಅಶುಭದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಶುಭ ಭಾವಗಳು ಬರುತ್ತವೆ, ಬರುವುದಿಲ್ಲ ಎನ್ನುವಂತಿಲ್ಲ. ಆದರೆ ಸ್ವಾಶ್ರಯದಿಂದಲ್ಲದೆ ಎಂದೂ ಮುಕ್ತಿಯಾಗುವುದಿಲ್ಲ ಮತ್ತು ಕಲ್ಯಾಣವು ಕೂಡ ಆಗುವುದಿಲ್ಲವೆಂದು ಅಂತರ್ಯದಲ್ಲಿ ನಿಶ್ಚಿತ ನಿರ್ಣಯ ಮಾಡಿಕೊಳ್ಳಬೇಕಾಗುವುದು.

ಗಾಥೆಯಲ್ಲಿ ದೃಷ್ಟಾಂತ ಕೊಡುತ್ತಾರೆ-ಯಾವ ಪ್ರಕಾರ ಕಮಲದ ಪತ್ರವು ನೀರಿನಿಂದ ಎಂದೂ ಲಿಪ್ತವಾಗುವುದಿಲ್ಲ-ಸ್ಪರ್ಶ ಮಾಡುವುದಿಲ್ಲ, ಅದೇ ಪ್ರಕಾರ ತನ್ನ ಸ್ವಭಾವದಲ್ಲಿ ಲೀನನಿರುವಂಥ ಆತ್ಮನು ಕರ್ಮಗಳಿಂದ ಲಿಪ್ತನಾಗುವುದಿಲ್ಲ. ಆತ್ಮ ಲೀನನಾದ ಭವ್ಯ ಜೀವನು ಮೋಕ್ಷ ಮಾರ್ಗಿಯಿದ್ದಾನೆ. ಅವನೇ ರತ್ನತ್ರಯದ ಏಕತೆಯನ್ನು ಧಾರಣ ಮಾಡಿದ್ದಾನೆ. ಆ ಭವ್ಯ ಜೀವನು ವೀತರಾಗ ಸ್ವಭಾವದಲ್ಲಿ ಲೀನನಿರುತ್ತಾನೆ ಮತ್ತು ರಾಗ - ದ್ವೇಷಗಳಿಂದ ಭಿನ್ನನಿರುತ್ತಾನೆ. ಅದಕ್ಕಾಗಿಯೇ ಅವನು ಕರ್ಮಗಳಿಂದ ಬದ್ಧನಾಗುವುದಿಲ್ಲ.

ವೀತರಾಗ ಸ್ವರೂಪದ ಭಗವಾನ ಆತ್ಮ ಮತ್ತು ಅವನೊಳಗಿಂದ ಉತ್ಪನ್ನವಾದ ವೀತರಾಗ ಭಾವವು ಬಂಧದ ನಾಶಮಾಡುವಂಥದ್ದಿದೆ. ಸಮ್ಯಗ್ದರ್ಶನವು ಕೂಡ ಅಂಶಿಕ ವೀತರಾಗ ಭಾವರೂಪವಿದೆ. ಅದೇ ಕಾರಣದಿಂದ ಸಮ್ಯಕ್‌ದೃಷ್ಟಿಗೆ ನಲವತ್ತೊಂದು ಕರ್ಮಪ್ರಕೃತಿಗಳ ಬಂಧವಾಗುವುದಿಲ್ಲ. ಸಮ್ಯಕ್‌ದೃಷ್ಟಿಯು ಸಮರ ಭೂಮಿಯಲ್ಲಿ ಯುದ್ಧ ಮಾಡುತ್ತಿದ್ದರೂ ಕೂಡ ಯಾವ ಕರ್ಮಗಳಿಂದ ಅವನು ಬದ್ಧನಾಗುವುದಿಲ್ಲ ಅವೇ ಕರ್ಮಗಳಿಂದ ಪರದ್ರವ್ಯದಲ್ಲಿ ಅಹಂ ಬುದ್ಧಿ ಮಾಡುವಂಥ ಅಜ್ಞಾನಿಯು ಬದ್ಧನಾಗುತ್ತಾನೆ. ಅಜ್ಞಾನಿಯು ಅನಂತ ಸಂಸಾರವನ್ನು ವೃದ್ಧಿಸುವಂಥ ಕರ್ಮಗಳಿಂದ ಬದ್ಧನಾಗುತ್ತಾನೆ, ಆದರೆ ಜ್ಞಾನಿಯು ಬದ್ಧನಾಗುವುದಿಲ್ಲ.

ಇಲ್ಲಿ ಸಮಯಸಾರದ ಕೊನೆಯ ಕಲಶದ ಆಧಾರ ಕೊಟ್ಟಿದಾರೆ. ಧರ್ಮಾತ್ಮನ ದೃಷ್ಟಿ ಮತ್ತು ದೃಷ್ಟಿಯ ವಿಷಯದಲ್ಲಿ ರಾಗ - ದ್ವೇಷ - ಮೋಹಗಳಿರುವುದಿಲ್ಲ. ಆದುದರಿಂದ ಧರ್ಮಾತ್ಮನಿಗೆ ರಾಗ - ದ್ವೇಷ - ಮೋಹಗಳು ಇರುವುದೇ ಇಲ್ಲವೆಂದು ಹೇಳಲಾಗಿದೆ. ಆದರಿಂದಾಗಿ ಧರ್ಮಾತ್ಮನಿಗೆ ಕರ್ಮದ ಬಂಧವಿರುವುದಿಲ್ಲ, ಮತ್ತು ಸ್ವಭಾವದಲ್ಲಿ ರಮಿಸುವುದರ ಕಾರಣ ವೀತರಾಗತೆಯು ಬೆಳೆಯುತ್ತ ಹೋಗುತ್ತದೆ ಮತ್ತು ಅಸ್ಥಿರತೆಯ ಯಾವ ರಾಗವಿರುತ್ತದೆ ಅದು ಕಡಿಮೆಯಾಗುತ್ತ ಹೋಗುತ್ತದೆ.

ಹೀಗೆ ಅಬಂಧ ಸ್ವಭಾವದ ದೃಷ್ಟಿಯುಳ್ಳ ಧರ್ಮಾತ್ಮನಿಗೆ ಬಂಧವಿರುವುದಿಲ್ಲವೆಂಬ ತಾತ್ಪರ್ಯ ಹೇಳಿದ್ದಾರೆ.

ಈಗ ಸಮಸುಖ ಭೋಗಿಯೇ ನಿರ್ವಾಣಕ್ಕೆ ಪಾತ್ರನಿದ್ದಾನೆಂದು ಹೇಳುತ್ತಾರೆ, -

ಜೋ ಸಮ-ಸುಕ್ಖ-ಣಿಲೀಣು ಬುಹು ಪುಣ ಪುಣ ಅಪ್ಪು ಮುಣೇಇ
ಕಮ್ಮಕ್ಖಉ ಕರಿ ಸೋ ವಿ ಫುಡು ಲಹು ಣಿವ್ವಾಣು ಲಹೇಇ ॥93॥

ಶಮಸುಖದಲಿ ವಿಲೀನ ಬುಧ ತಿಳಿವನು ಆತ್ಮನ ಪುನಃ ಪುನಃ
ವಿಮುಕ್ತನಾಗುವ ಬೇಗದಲಿ ನಿಜದಲಿ ಕರ್ಮ ಕ್ಷಯ ಮಾಡಿ ॥93॥

ಅರ್ಥ :- ಯಾವ ಜ್ಞಾನಿಯು ಸಮತೆಯ ಸುಖದಲ್ಲಿ ಲೀನನಾಗಿ ಪುನಃ ಪುನಃ ಆತ್ಮನ ಅನುಭವ ಮಾಡುತ್ತಾನೆ ಅವನೇ ಸ್ಪಷ್ಟ ರೂಪದಿಂದ ಕರ್ಮಗಳ ಕ್ಷಯಮಾಡಿ ಶೀಘ್ರದಲ್ಲಿ ನಿರ್ವಾಣ ಪಡೆಯುತ್ತಾನೆ.

ಈ ಆತ್ಮನು ಜ್ಞಾನಾನಂದ ಸ್ವರೂಪದ ಶುದ್ಧ ಚೈತನ್ಯನಿದ್ದಾನೆ. ಅವನು ಶರೀರ, ಕರ್ಮ, ಪುಣ್ಯ - ಪಾಪ ಮೊದಲಾದ ವಿಕಾರಗಳಿಂದ ರಹಿತನಿದ್ದಾನೆ. ಯಾವನಿಗೆ ಇಂಥ ಆತ್ಮನ ಅರಿವು ಇಲ್ಲ ಅವನು ಜ್ಞಾನಿಯಿಲ್ಲ, ಧರ್ಮಿಯಿಲ್ಲ. ಹಿಂಸೆ, ಅಸತ್ಯ, ಕಳವು ಮೊದಲಾದ ಭಾವಗಳು ಅವು ಪಾಪವಿವೆ ಮತ್ತು ದಯೆ, ದಾನ, ಭಕ್ತಿ ಮೊದಲಾದ ಭಾವಗಳು ಅವು ಪುಣ್ಯವಿವೆ. ಇವೆಲ್ಲವುಗಳಿಂದ ರಹಿತ ಶುದ್ಧ ಅತೀಂದ್ರಿಯ ಜ್ಞಾನಾನಂದ ಸ್ವರೂಪದ ಭಗವಾನ ಆತ್ಮನು ಅಂತರ್ಯದಲ್ಲಿ ವಿರಾಜಿಸುತ್ತಿದ್ದಾನೆ, ಅಂತರ್ಯದಲ್ಲಿ ಅವನ ಅಭಿರುಚಿಯಾಗುವುದು ಅವನ ಅನುಭವ ಮಾಡುವುದು ಅದು ಧರ್ಮವಿದೆ. ಧರ್ಮವು ಧರ್ಮಿಯನ್ನು ಬಿಟ್ಟು ಬಾಹ್ಯದಲ್ಲಿ ಇರುವುದಿಲ್ಲ.

ಸೋದರನೇ ! ಸೂಕ್ಷ್ಮ ಮಾತುಗಳಿವೆ. ಅದೆಷ್ಟೋ ಜನರಿಗೆ ಇಂಥ ಮಾತುಗಳು ಕೇಳುವುದಕ್ಕೆ ಕೂಡ ದೊರಕುವುದಿಲ್ಲ. ಯಾವ ಪ್ರಕಾರದ ಆನಂದವು ಸಿದ್ಧರಿಗೆ ಇದೆ. ಅದೇ ಪ್ರಕಾರದ ಆನಂದವು ಆತ್ಮನ ಅಂತರ್ಯದ ಸ್ವರೂಪದಲ್ಲಿ ತುಂಬಿಕೊಂಡಿದೆ. ಅನಾದಿಯಿಂದ ಮಿಥ್ಯಾದೃಷ್ಟಿಯು ಇಂಥ ಆನಂದ ಸ್ವರೂಪವನ್ನು ಮರೆತು ಬಿಟ್ಟು ಶುಭಾಶುಭ ವಿಕಾರಗಳನ್ನೇ ತನ್ನ ಸ್ವರೂಪವೆಂದು ಮನ್ನಿಸುತ್ತಿದ್ದಾನೆ. ಮತ್ತು ಪರದ್ರವ್ಯದಲ್ಲಿ ನನ್ನ ಸುಖವಿದೆಯೆಂಬ ಮಿಥ್ಯಾ ಮನ್ನಣೆಯ ಸೇವನೆ ಮಾಡುತ್ತಿದ್ದಾನೆ. ಅವನಿಗೆ ಸರ್ವಜ್ಞ ಪರಮೇಶ್ವರರಾದ ಕೇವಲೀ ಭಗವಂತರು ಎಲೈ ಸೋದರನೇ ! ಪರದ್ರವ್ಯವು ನಿನ್ನ ವಸ್ತುವಲ್ಲ. ನೀನಂತೂ ಅತೀಂದ್ರಿಯ ಸುಖದ ಸಾಗರನಿರುವೆಯೆಂದು ಹೇಳುತ್ತಾರೆ. ಪರವಸ್ತುವು ನಿನ್ನ ಸ್ವಭಾವವಲ್ಲವೆಂದು ತಿಳಿಸಿಕೊಡುತ್ತಾರೆ.

ಕಳೆದ ಅನಂತ ಕಾಲದಲ್ಲಿ ಅಜ್ಞಾನಿ ಜೀವನು ಅನಂತ ಬಾರಿ ತ್ಯಾಗಿಯಾಗಿದ್ದಾನೆ, ಭೋಗಿಯಾಗಿದ್ದಾನೆ, ರಾಜನಾಗಿದ್ದಾನೆ, ರಂಕನಾಗಿದ್ದಾನೆ, ರೋಗಿಯಾಗಿದ್ದಾನೆ, ನಿರೋಗಿಯಾಗಿದ್ದಾನೆ. ಅನಂತ ಭವಗಳಲ್ಲಿ ಭ್ರಮಣ ಮಾಡಿದ್ದಾನೆ, ಆದರೆ ಆತ್ಮನೆಂದರೆ ಯಾರೆಂಬುದನ್ನು ಎಂದೂ ಒಂದು ಸಲವೂ ವಿಚಾರ ಮಾಡಲಿಲ್ಲ.

ಎಲೈ ಸೋದರನೇ ! ನಮಗೆ ಯಾವ ಶಮ ಸುಖ ಸ್ವರೂಪದ ವೀತರಾಗ ಆನಂದವು ಪ್ರಕಟವಾಗಿದೆ ಅದೇ ಅತೀಂದ್ರಿಯ ಆನಂದವು ನಿನ್ನ ವಸ್ತುವಿನಲ್ಲಿ ಕೂಡ ತುಂಬಿಕೊಂಡಿದೆಯೆಂದು ವೀತರಾಗ ಪರಮೇಶ್ವರ ದೇವರು ಹೇಳಿದ್ದಾರೆ. ಆತ್ಮನು ಧರ್ಮಿಯಿದ್ದಾನೆ, ಅತೀಂದ್ರಿಯ ಜ್ಞಾನ, ಆನಂದ ಮೊದಲಾದವು ಅವನ ಧರ್ಮಗಳಿವೆ. ಆದರೆ ಜೀವನು ಅನಂತ ಕಾಲದಲ್ಲಿ ಒಂದು ಸೇಕಂದವು ಕೂಡ ತನ್ನ ಧರ್ಮಗಳ ಅಭಿರುಚಿ ಮಾಡಲಿಲ್ಲ. ಮತ್ತು ಪುಣ್ಯ - ಪಾಪದ ಅಭಿರುಚಿಯನ್ನು ಬಿಟ್ಟುಕೊಡಲಿಲ್ಲ.

ಯಾವನು ಒಂದು ಬಾರಿ ತನ್ನ ಅತೀಂದ್ರಿಯ ಆನಂದದ ಸ್ವಾದ ತೆಗೆದುಕೊಂಡಿದ್ದಾನೆ ಎಂದರೆ ಸಮ್ಯಗ್ದರ್ಶನ ಪ್ರಕಟ ಮಾಡಿಕೊಂಡಿದ್ದಾನೆ ಆ ಜೀವನು ಜ್ಞಾನಿಯಿದ್ದಾನೆ, ಧರ್ಮಿಯಿದ್ದಾನೆ. ಇನ್ನು ಅವನು ಬೇಕಾದರೆ ಆರು ಖಂಡದ ಅಧಿಪತಿಯಾದ ಚಕ್ರವರ್ತಿಯಿರಲಿ ಅಥವಾ ಇಂದ್ರನಾಗಿರಲಿ, ಆದರೆ ಅವನು ತನ್ನ ಸ್ವಭಾವದ ಹೊರತಾಗಿ ಎಲ್ಲಿಯೂ ಸುಖವನ್ನು ಮನ್ನಿಸುವುದೇ ಇಲ್ಲ. ಇಂಥ ಜ್ಞಾನಿಯೇ ಶಮ ಭಾವದಲ್ಲಿ ನಿಮಗ್ನನಾಗಿ ಮತ್ತೆ ಮತ್ತೆ ಆತ್ಮನ ಅನುಭವ ಮಾಡುತ್ತಾನೆ.

ಯಾವನು ಪುಣ್ಯ-ಪಾಪ ಭಾವದ ಅಭಿರುಚಿಯನ್ನು ಬಿಟ್ಟುಕೊಟ್ಟು ಅಂತರ್ಯದ ಶ್ರದ್ಧೆ-ಜ್ಞಾನದಲ್ಲಿ ಅತೀಂದ್ರಿಯ ಆನಂದದ ಸ್ವಾದ ತೆಗೆದುಕೊಂಡಿದ್ದಾನೆ ಅವನು ಗೃಹಸ್ಥಾಶ್ರಮದಲ್ಲಿದ್ದರು ಕೂಡ ಧರ್ಮಿಯಿದ್ದಾನೆ.

ಎಲೈ ಸೋದರನೇ ! ನಿನ್ನಲ್ಲಿ ಬಿದ್ದುಕೊಂಡಿರುವ ಅತೀಂದ್ರಿಯ ಆನಂದ ಸ್ವಭಾವದ ಅರುಚಿ ಮತ್ತು ಪುಣ್ಯ-ಪಾಪ ಭಾವದ ಅಭಿರುಚಿಯೇ ನಿನ್ನ ಅನಂತ ಸಂಸಾರ ಪರಿಭ್ರಮಣಕ್ಕೆ ಮೂಲ ಕಾರಣವಾಗಿದೆಯೆಂದು ಸರ್ವಜ್ಞ ಭಗವಂತರು ನೂರು ಇಂದ್ರರುಗಳ ಉಪಸ್ಥಿತಿಯಲ್ಲಿ ಈ ಮಾತನ್ನು ಹೇಳಿದ್ದಾರೆ .

ಯಾರು ಸಿದ್ಧ ಭಗವಂತರಾಗಿದ್ದಾರೆ ಅವರು ಎಲ್ಲಿಂದ ಆಗಿದ್ದಾರೆ ? ಅವರು ನಿರ್ದೋಷ ದಶೆಯನ್ನು ಯಾವುದರೊಳಗಿಂದ ಪ್ರಾಪ್ತ ಮಾಡಿಕೊಂಡಿದ್ದಾರೆ ? ಅದೇನು ಬಾಹ್ಯದೊಳಗಿಂದ ಬರುತ್ತದೆಯೇನು? ಅಯ್ಯಾ!

ಅದು ಸ್ವಭಾವದೊಳಗಿದೆ ಅದರೊಳಗಿಂದ ಪ್ರಕಟವಾಗುತ್ತದೆ. ಬಾಹ್ಯದಿಂದ ಸ್ವಲ್ಪವೂ ಬರುವುದಿಲ್ಲ. ಚಿಕ್ಕದಾದ ಮೆಣಸಿನಕಾಳಿನಲ್ಲಿ ಪೂರ್ಣ-ಪೂರ್ಣರೀತಿಯಿಂದ ಕಾರತನವು ತುಂಬಿಕೊಂಡಿದೆ. ಅದನ್ನು ಅರೆಯುವುದರಿಂದ ಅದು ಪ್ರಕಟವಾಗುತ್ತದೆ. ಅದೇನು ಅರೆಯುವ ಸಾಧನದೊಳಗಿಂದ ಬರುವುದಿಲ್ಲ. ಹಾಗಿದ್ದರೆ ಮೆಣಸಿನ ಕಾಳಕ್ಕೆ ಪ್ರತಿಯಾಗಿ ಚಿಕ್ಕ ಕಲ್ಲನ್ನು ಕುಟ್ಟುವುದರಿಂದಲೂ ಕಾರತನವು ಬರಬೇಕಾಗುವುದು, ಆದರೆ ಹಾಗೆ ಇಲ್ಲ. ಪ್ರಾಪ್ತದ ಪ್ರಾಪ್ತಿಯೇ ಆಗುತ್ತದೆ. ಭಾವಿಯೊಳಗೆ ನೀರು ಇದ್ದರಲ್ಲವೇ ಕೊಡದಲ್ಲಿ ಬರುವುದು ! ಅದೇ ಪ್ರಕಾರ ಆತ್ಮನ ಶಕ್ತಿಯಲ್ಲಿ-ಧ್ರುವ ಸ್ವಭಾವದಲ್ಲಿ ಸರ್ವಜ್ಞ ಪದವು ಬಿದ್ದುಕೊಂಡಿದೆ, ಅದರಲ್ಲಿ ಎಂದರೆ ಸ್ವಭಾವದಲ್ಲಿ ಲೀನವಾಗುವುದರಿಂದ ಅದು ಪ್ರಕಟವಾಗುತ್ತದೆ. ವೀತರಾಗ ಸರ್ವಜ್ಞ ಭಗವಂತರ ಸಮಸ್ತ ಕಥನವು ನ್ಯಾಯದಿಂದ ಸಿದ್ಧವಾಗುತ್ತದೆ.

ಕಪ್ಪು ಮೆಣಸಿನ ಕಾಳಿನಲ್ಲಿ ಕಾರತನವು ತುಂಬಿಕೊಂಡಿರುವಂತೆ ಆತ್ಮನಲ್ಲಿ ಅತೀಂದ್ರಿಯ ಆನಂದವು ಪರಿಪೂರ್ಣ ತುಂಬಿಕೊಂಡಿದೆಯೆಂದು ಧರ್ಮಾತ್ಮನಿಗೆ ಶ್ರದ್ಧೆಯಾಗಿ ಹೋಗಿದೆ. ಆದುದರಿಂದಲೇ ಅವನಿಗೆ ಸ್ತ್ರೀ-ಕುಟುಂಬ-ಪರಿವಾರ, ರಾಜ್ಯವೈಭವಗಳಲ್ಲಿ ಅಥವಾ ಪುಣ್ಯದಲ್ಲಿ ಎಲ್ಲಿಯೂ ಆನಂದವು ಕಂಡು ಬರುವುದಿಲ್ಲ, ಎಲ್ಲಿಯೂ ಸುಖವೆನಿಸುವುದಿಲ್ಲ.

ಇವರು ಯಾವ ಮಾತು ಹೇಳುತ್ತಿದ್ದಾರೆಂಬುದು ಯಾರಿಗೆ ಗೊತ್ತೆಂದು ಜನರಿಗೆ ಎನಿಸುತ್ತದೆ. ಆದರೆ ಪ್ರಭು ! ನೀನು ಅರೂಪಿ ಅತೀಂದ್ರಿಯ ಆನಂದದ ಪುಂಜನಿರುವೆ. ಯಾವ ಪ್ರಕಾರ ಮಂಜುಗಡ್ಡೆಯು ಎಷ್ಟೇ ವಿಶಾಲವಾದ ಶಿಲೆಯಿರಲಿ ಅದನ್ನು ನಾಲ್ಕೂ ಪಾರ್ಶ್ವಗಳಿಂದ ಮೇಲಿನಿಂದ ಕೆಳಗಿನಿಂದ ಎಲ್ಲಿಂದ ನೋಡಿದರೂ ಅಲ್ಲಿ ಕೇವಲ ತಂಪು ... ತಂಪು .... ತಂಪೇ ತುಂಬಿಕೊಂಡಿದೆ. ಅದೇ ಪ್ರಕಾರ ಈ ಆತ್ಮನು ದೇಹವ್ಯಾಪಕನಿದ್ದರೂ ಕೂಡ ಆ ದೇಹದಿಂದ ಭಿನ್ನ ಅತೀಂದ್ರಿಯ ಆನಂದದ ಶಿಲೆಯಿದ್ದಾನೆ. ಆದರೆ ಜೀವರುಗಳಿಗೆ ಬಾಹ್ಯ ಶಿಲೆಯ ವಿಶ್ವಾಸವಾಗುತ್ತದೆ, ಆದರೆ ತನ್ನ ಅತೀಂದ್ರಿಯ ಆನಂದ ಶಿಲೆಯ ವಿಶ್ವಾಸವುಂಟಾಗುವುದಿಲ್ಲ. ಎಲ್ಲಿಯವರೆಗೆ ಇಂಥ ಆತ್ಮನ ವಿಶ್ವಾಸ ಬರುವುದಿಲ್ಲ, ಅಂತರ್ಯದಲ್ಲಿ ಜ್ಞಾನ ಮತ್ತು ಅನುಭವವಾಗುವುದಿಲ್ಲ ಅಲ್ಲಿಯವರೆಗೆ ಅವನಿಗೆ ಧರ್ಮದ ಗಂಧವು ಕೂಡ ಬರುವುದಿಲ್ಲ.

ಪ್ರತಿಯೊಂದು ಗಾಥೆಯಲ್ಲಿ ಮಹಾ ಸಿದ್ಧಾಂತವು ತುಂಬಿಕೊಂಡಿದೆ. 'ಶಮ ಸುಖದಲ್ಲಿ ಯಾರು ಲೀನರಿರುತ್ತಾರೆ' ಎಂದರೆ ಪುಣ್ಯ - ಪಾಪದ ಭಾವಗಳು ವಿಷಮವಿವೆ, ದುಃಖರೂಪವಿವೆ. ಅವುಗಳಿಂದ ವಿರುದ್ಧವಾದಂಥ ಶಮಸುಖದಲ್ಲಿ ಯಾರು ಲೀನರಿರುತ್ತಾರೆ - ಅತೀಂದ್ರಿಯ ಆನಂದದಲ್ಲಿ ಅಭಿರುಚಿ ಮಾಡುತ್ತಾರೆ, ಮತ್ತೆ ಮತ್ತೆ ಅದರ ಅಭ್ಯಾಸ ಮಾಡುತ್ತಾರೆ ಅವರಿಗೆ ಸಂವರ-ನಿರ್ಜರೆಯಾಗುತ್ತದೆ.

ಮಕ್ಷಿಕದಂಥ ಪ್ರಾಣಿಗೆ ಕೂಡ ಪಟಿಕವು ನೀರಸವೆನಿಸುತ್ತದೆ ಮತ್ತು ಸಕ್ಕರೆಯು ರುಚಿಕರವೆನಿಸುತ್ತದೆ. ಆದುದರಿಂದ ಅದು ಸಕ್ಕರೆಯ ಮೇಲಿಂದ ಹೋಗುವುದೇ ಇಲ್ಲ ಮತ್ತು ಪಟಿಕದ ಮೇಲೆ ಕೂಡ್ರುವುದೇ ಇಲ್ಲ. ಇದೇ ಪ್ರಕಾರ ಪುಣ್ಯ - ಪಾಪದ ಭಾವಗಳು ಪಟಿಕದ ಹಾಗೆ ದುಃಖರೂಪವಿವೆ ಮತ್ತು ಆತ್ಮನ ಅತೀಂದ್ರಿಯ ಆನಂದದ ಸ್ವಾದವು ಧರ್ಮಾತ್ಮನಿಗೆ ರುಚಿಕರವೆನಿಸುತ್ತದೆ. ಅದಕ್ಕಾಗಿಯೇ ಧರ್ಮಾತ್ಮನು ಆತ್ಮನಲ್ಲಿ ಲೀನನಾಗುತ್ತಾನೆ. ಶರೀರವಂತೂ ಅಜೀವ ತತ್ತ್ವವಿದೆ ಮತ್ತು ಪುಣ್ಯ-ಪಾಪಗಳು ಆಸ್ರವ ತತ್ತ್ವವಿದ್ದು ಅವುಗಳಿಂದ ರಹಿತನಾದ ನಾನು ಜೀವತತ್ತ್ವನಿದ್ದೇನೆಂಬ ದೃಷ್ಟಿಯುಳ್ಳ ಧರ್ಮಾತ್ಮನು ತನ್ನ ಶಮ ಸುಖದಲ್ಲಿ ಲೀನನಾಗಿ ಪುನಃ ಪುನಃ ಆತ್ಮನ ಅನುಭವ ಮಾಡುತ್ತಾನೆ.

ಶಮ-ಸುಖದಲ್ಲಿ ಲೀನತೆಯ ಮಾತು ಹೇಳಿ ಮುನಿರಾಜರು ಹೇಳ ಬಯಸುವುದೇನೆಂದರೆ ನಿರ್ವಾಣದ ಉಪಾಯದಲ್ಲಿ ಕಷ್ಟವಿಲ್ಲ, ದುಃಖವಿಲ್ಲ. ಕಷ್ಟ-ದುಃಖ ಸಹನೆ ಮಾಡುವುದರಲ್ಲಂತೂ ಆಕುಲತೆಯಿದೆ. ಮೋಕ್ಷಮಾರ್ಗದಲ್ಲಿ ಆಕುಲತೆಯಿರುವುದಿಲ್ಲ, ಮೋಕ್ಷಮಾರ್ಗದಲ್ಲಂತೂ ಶಮಸುಖದಲ್ಲಿ ಲೀನತೆಯ ರೂಪದ ಸುಖವಿರುತ್ತದೆ. ವೀತರಾಗದ ಮಾರ್ಗವು ನ್ಯಾಯದ ಮಾರ್ಗವಿದೆ, ಸುಖದ ಮಾರ್ಗವಿದೆ.

ಸಮ್ಯಗ್ದರ್ಶನವಾಗುತ್ತಿದ್ದಂತೆಯೇ ಜ್ಞಾನಿಯು ಆತ್ಮನ ಅತೀಂದ್ರಿಯ ಆನಂದದಲ್ಲಿ ಆಕರ್ಷಿತನಾಗುತ್ತಾನೆ. ಆತ್ಮನಲ್ಲಿ

ಆನಂದವಿದೆಯೆಂಬ ಅನುಭವದಿಂದ ಜ್ಞಾನಿಯು ಪುನಃ ಪುನಃ ಆತ್ಮ ರಸದ ಸ್ವಾದ ತೆಗೆದುಕೊಳ್ಳುತ್ತ ಕರ್ಮಗಳನ್ನು ನಾಶಪಡಿಸಿ ಶೀಘ್ರವಾಗಿ ನಿರ್ವಾಣ ಪದವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಜ್ಞಾನಿಯ ದೃಷ್ಟಿಯಲ್ಲಿ ಒಂಭತ್ತೂ ತತ್ತ್ವಗಳು ದೃಷ್ಟಿಗೋಚರವಾಗುತ್ತವೆ. ಅತೀಂದ್ರಿಯ ಆನಂದದ ಮೂರ್ತಿಯಾದ ಭಗವಾನ ಆತ್ಮನು ನಾನಿದ್ದೇನೆಂಬುದು ಇದು ಜೀವ ತತ್ತ್ವವಿದೆ, ಕರ್ಮ-ಶರೀರ ಮೊದಲಾದವು ಅಜೀವತತ್ತ್ವವಿದೆ, ಪುಣ್ಯ-ಪಾಪದ ಭಾವಗಳು ಆಸ್ರವತತ್ತ್ವವಿದೆ, ವಿಕಾರೀ ಭಾವಗಳಲ್ಲಿ ಇವು ಒಳ್ಳೆಯವಿವೆಯೆಂಬುದು ಬಂಧತತ್ತ್ವವಿದೆ, ಆತ್ಮನ ದೃಷ್ಟಿ ಹಾಗೂ ಅನುಭವ ಮಾಡುವುದು ಅದು ಸಂವರ ತತ್ತ್ವ ಹಾಗೂ ನಿರ್ಜರೆತತ್ತ್ವವಿದೆ, ಮತ್ತು ಈ ಸಂವರ-ನಿರ್ಜರೆಗಳ ಪೂರ್ಣತೆಯಾದಾಗ ಪೂರ್ಣಾನಂದವು ಪ್ರಕಟವಾಗುತ್ತದೆ. ಅದು ಮೋಕ್ಷತತ್ತ್ವವಿದೆ. ಹೀಗೆ ಒಂದೇ ಗಾಥೆಯಲ್ಲಿ ನವತತ್ತ್ವಗಳ ಸಮಾವೇಶ ಮಾಡಲಾಗಿದೆ.

ಜೀವರುಗಳಿಗೆ ವೀತರಾಗರು ಹೇಳಿರುವ ತತ್ತ್ವಗಳು ಕೇಳುವುದಕ್ಕೆ ಕೂಡ ದೊರಕದಿದ್ದರೆ ಅವರು ಏನು ತಿಳಿದುಕೊಳ್ಳುವರು? ಯಾವಾಗ ರುಚಿ ಮಾಡುವರು? ಮತ್ತು ಅನುಭವವನ್ನು ಹೇಗೆ ಎಲ್ಲಿಂದ ಮಾಡಿಕೊಳ್ಳುವರು ? ಜೀವನು ತಿಳಿದುಕೊಂಡಲ್ಲದೆ ಅನಂತಾನಂತ ಭವಗಳನ್ನು ಕಳೆದಿದ್ದಾನೆ. ಕಾಗೆ, ನಾಯಿ, ಹಂದಿ ನಿಗೋದ ಮೊದಲಾದ ಭವಗಳೊಳಗಿಂದ ಅತ್ಯಂತ ಕಠಿಣತೆಯಿಂದ ಅನಂತಕಾಲದಲ್ಲಿ ಒಂದು ಬಾರಿ ಮನುಷ್ಯ ಭವವು ದೊರಕಿಕೊಂಡಿದೆ. ಅದರಲ್ಲಿ ಕೂಡ ತಿಳಿದುಕೊಳ್ಳದಿದ್ದರೆ ಪುನಃ ಅದೇ ಭವಗಳಲ್ಲಿ ಸುತ್ತಾಡಬೇಕಾಗುವುದು.

ವರ್ತಮಾನಕಾಲದಲ್ಲಿ ಮಹಾವಿದೇಹ ಕ್ಷೇತ್ರದೊಳಗೆ ಸೀಮಂಧರ ಪ್ರಭುಗಳು ವಿರಾಜಮಾನರಿದ್ದಾರೆ. ಅವರ ಆಯುಷ್ಯವು ಒಂದು ಕೋಟಿ ಪೂರ್ವವಿದೆ. ಮುನಿಸುವ್ರತ ಭಗವಂತರ ಸಮಯದಲ್ಲಿ ಆಗಿದ್ದಾರೆ. ಮತ್ತು ಭವಿಷ್ಯದಲ್ಲಿ ಆಗಲಿರುವ ಇಪ್ಪತ್ತಾಲ್ಕು ತೀರ್ಥಂಕರರಲ್ಲಿ ಯಾವಾಗ ಹದಿಮೂರು ತೀರ್ಥಂಕರರು ಆಗಿ ಹೋಗುವರು ಆಗ ಸೀಮಂಧರ ಭಗವಂತರ ನಿರ್ವಾಣವಾಗುವುದು. ಅವರ ಸಮವಸರಣದಲ್ಲಿ ಈಗ ಲಕ್ಷಾಂತರ ಕೇವಲಿಗಳು, ಗಣಧರರು, ಮುನಿವರರು ವಿರಾಜಮಾನರಿದ್ದಾರೆ. ಭಗವಂತರ ವಾಣಿಯನ್ನು ಆಲಿಸಲು ಇಂದ್ರನು ಸ್ವರ್ಗದಿಂದ ಇಳಿದು ಬರುತ್ತಾನೆ. ಇದು ಅದೇ ವಾಣಿಯಿದೆ. ಸಮಸ್ತ ಸಂತರುಗಳು ಹೇಳುವುದು ಕೂಡ ಅದೇ ವಾಣಿಯಿದೆ.

ಜೀವರುಗಳಿಗೆ ತತ್ತ್ವ ನಿರ್ಣಯ ಮಾಡುವ ಸಲುವಾಗಿ ಅತ್ಯಂತ ಕಠಿಣತೆಯಿಂದ ಮನುಷ್ಯತನದ ಅವಸರವು ದೊರಕುತ್ತದೆ. ಅದನ್ನು ಕೂಡ ಹಾಗೇ ಕಳೆದುಕೊಳ್ಳುತ್ತಾನೆ. ಈ ದೃಷ್ಟಿಯಿಂದ ಮನುಷ್ಯ ಅಥವಾ ನಿಗೋದದ ಜೀವಗಳಲ್ಲಿ ಯಾವುದೇ ಅಂತರವಿಲ್ಲ. ಮನುಷ್ಯ ಭವದಲ್ಲೂ ಯಾವನು ಆತ್ಮನ ಅನುಭವ ಮಾಡಿಕೊಳ್ಳುವುದಿಲ್ಲ ಅವನಿಗೆ ಮನುಷ್ಯ ದೇಹವಿರಲಿ ಅಥವಾ ನಿಗೋದದ ಶರೀರವಿರಲಿ ಅದರಲ್ಲಿ ಯಾವುದೇ ಅಂತರವಿಲ್ಲ. ಏಕೆಂದರೆ ಒಂದರಲ್ಲಿ ಕೂಡ ಆತ್ಮನ ಲಾಭವಾಗಲಿಲ್ಲ.

ಈ 'ಶಮಸುಖ'ವೆಂಬ ಒಂದು ಶಬ್ದದಲ್ಲಿ ಕೂಡ ಮುನಿರಾಜರು ಬಹಳಷ್ಟು ಭಾವ ತುಂಬಿದ್ದಾರೆ. ಶಮಸುಖದಲ್ಲಿ ಲೀನನಿರುವವನು ಚಕ್ರವರ್ತಿಯಿದ್ದರೂ ಕೂಡ ಅವನು ಈ ಬಾಹ್ಯದಲ್ಲಿನ ಸ್ವಾದಗಳು-ಭೋಗ ವೈಭವಗಳು ನನ್ನವಿಲ್ಲ. ನನ್ನ ಸ್ವಾದವಂತೂ ನನ್ನ ಅಂತರ್ಯದಲ್ಲಿದೆಯೆಂದು ತಿಳಿಯುತ್ತಾನೆ. ಒಂದಿಷ್ಟು ರಾಗವಿರುವುದರಿಂದ ಆರು ಖಂಡಗಳ ರಾಜ್ಯದಲ್ಲಿ ಬಿದ್ದುಕೊಂಡಿದ್ದೇನೆ. ಆದರೆ ಸ್ವಭಾವದ ಆನಂದವನ್ನು ಮರೆಯುವುದಿಲ್ಲ. ಯಾವ ಪ್ರಕಾರ ತಂತಿಯ ಮೇಲೆ ನಡೆಯುವ ಸಮಯದಲ್ಲಿ ಡೊಂಬರವನು ನನ್ನ ಕಾಲುಗಳು ತಂತಿಯ ಮೇಲೆ ಇವೆಯೆಂಬುದನ್ನು ಮರೆಯುವುದಿಲ್ಲ, ಒಂದು ವೇಳೆ ಮರೆತನೆಂದರೆ ಉರುಳಿ ಬೀಳುವನು. ಅದೇ ಪ್ರಕಾರ ಚಕ್ರವರ್ತಿಗೆ ತೊಂಭತ್ತಾರು ಸಹಸ್ರ ರಾಣಿಯರಿದ್ದಾರೆ, ಇಂದ್ರನು ಅವನ ಮಿತ್ರನಿದ್ದಾನೆ, ವಜ್ರ-ವೈಢೂರ್ಯಗಳಿಂದ ನಿರ್ಮಿಸಿದ ಸಿಂಹಾಸನವಿದೆ, ವೈಭವಗಳಿಗೆ ಸೀಮೆಯೇ ಇಲ್ಲ; ಆದಾಗ್ಯೂ ಅವನು ಅವುಗಳಲ್ಲಿ ಮಗ್ನನಾಗಿ ತನ್ನ ಸ್ವಭಾವದ ಆನಂದವನ್ನು ಮರೆತು ಬಿಡುವುದಿಲ್ಲ. ಅವನ ರುಚಿಯಂತೂ ಸ್ವಭಾವದಲ್ಲಿಯೇ ಬಿದ್ದುಕೊಂಡಿರುತ್ತದೆ. ಅವನ ಹೆಸರೇ ಸಮ್ಯಕ್‌ದೃಷ್ಟಿಯಿದೆ.

ಎಷ್ಟು ಹೆಚ್ಚು ಪರೀಷಹಗಳನ್ನು ಸಹನೆ ಮಾಡುವೆಯೋ ಅಷ್ಟು ಹೆಚ್ಚು ಲಾಭವಾಗುವುದೆಂದು ಜನರು ಹೇಳುತ್ತಾರೆ. ಅಯ್ಯಾ ! ಪರೀಷಹ ಸಹನೆ ಮಾಡುವುದಂತೂ ದುಃಖವಿದೆ, ಅದರಲ್ಲಿ ಲಾಭವೆಂಥದು ? ಸ್ವಭಾವದಲ್ಲಿ ಶೋಭಿಸುತ್ತಿರುವ ವೀರ್ಯ ಮತ್ತು ಅತೀಂದ್ರಿಯ ಆನಂದದ ಎದುರಿಗೆ ಬಾಹ್ಯದಲ್ಲಿ ಲಕ್ಷಾಂತರ ಪ್ರತಿಕೂಲತೆಗಳಿದ್ದರು ಕೂಡ ಜ್ಞಾನಿಗಳು ಅವನ್ನು ಜ್ಞೇಯ ಮಾತ್ರವೆಂದು ತಿಳಿಯುತ್ತಾರೆ. ಬಾಹ್ಯದಲ್ಲಿ ನಮಗೆ ಯಾವುದೇ ಪ್ರತಿಕೂಲತೆಯಾಗಲಿ ಅಥವಾ ಅನುಕೂಲತೆಯಾಗಲಿ ಇಲ್ಲ. ನಮಗಂತೂ ನಮ್ಮ ವಿಕಾರೀ ಭಾವಗಳೇ ಪ್ರತಿಕೂಲವಿವೆ, ಅನಿಷ್ಟವಿವೆ, ದುಃಖರೂಪವಿವೆ. ಮತ್ತು ನಮ್ಮ ಸ್ವಭಾವವು ನಮಗೆ ಅನುಕೂಲವಿದೆಯೆಂದು ಜ್ಞಾನಿಗಳು ತಿಳಿಯುತ್ತಾರೆ, ಮನ್ನಿಸುತ್ತಾರೆ. ಆದುದರಿಂದ ದುಃಖ ಸಹನೆ ಮಾಡುವುದು ಅದು ಮೋಕ್ಷದ ಉಪಾಯವಲ್ಲ. ಆದರೆ ಚಂದನದ ಶೀತಲ ಛಾಯೆಯ ಸಮಾನವಾಗಿ ಅತೀಂದ್ರಿಯ ಸ್ವಭಾವದ ಶಾಂತಿ ಮತ್ತು ಸುಖದ ಅನುಭವ ಮಾಡುವುದು ಅದು ಮೋಕ್ಷದ ಉಪಾಯವಿದೆ.

ಯಾವ ಪ್ರಕಾರ ಸಮುದ್ರದಲ್ಲಿ ಭರತಿ - ಉಬ್ಬರ ಬರುತ್ತದೆ. ಅದೇ ಪ್ರಕಾರ ಆತ್ಮನು ಆನಂದದ ಮಹಾಸಾಗರನಿದ್ದಾನೆ, ಅವನ ದೃಷ್ಟಿ ಮತ್ತು ಏಕಾಗ್ರತೆ ಮಾಡುತ್ತಿರುವಂತೆಯೇ ವರ್ತಮಾನ ಪರ್ಯಾಯದಲ್ಲಿ ಆನಂದದ ಭರತಿ ಎಂದರೆ ಉಬ್ಬರ ಬರುತ್ತದೆ ಅದು ನಿಜವಾಗಿ ಮೋಕ್ಷದ ಉಪಾಯವಿದೆ. ಶಮಸುಖವಿದೆ.

ಸೋದರನೇ ! ನಿನ್ನ ಮಾರ್ಗವು ಭಿನ್ನವಿದೆ ರಾಯರೇ ! ಜಗತ್ತು ಅನ್ಯ ಮಾರ್ಗವನ್ನು ಮನ್ನಿಸುವುದರಿಂದ ಅದೇನು ವೀತರಾಗ ಮಾರ್ಗವಾಗಿ ಹೋಗುವುದಿಲ್ಲ, ವೀತರಾಗದ ಮಾರ್ಗವಂತೂ ಶಮಸುಖರೂಪವಿದೆ. ಪುಣ್ಯ - ಪಾಪದ ಭಾವವೇನು ವೀತರಾಗ ಮಾರ್ಗವಲ್ಲ. ಪರ್ಯಾಯದಲ್ಲಿ ಅತೀಂದ್ರಿಯ ಆನಂದ ಬರುವುದು ಅದು ನಿಜವಾಗಿ ವೀತರಾಗ ಮಾರ್ಗವಿದೆ.

ಸಮ್ಯಕ್‌ದೃಷ್ಟಿಯು ಆತ್ಮನ ಆನಂದದ ಎದುರಿಗೆ ಭೋಗಗಳನ್ನು ಕೃಷ್ಣ ನಾಗ ಸರ್ಪದಂತೆ ದುಃಖರೂಪವೆಂದು ತಿಳಿಯುತ್ತಿರುತ್ತಾನೆ. ಅವನಿಗೆ ಇನ್ನೂ ಹೆಚ್ಚು ಸ್ಥಿರತೆಯಿಲ್ಲದಿರುವುದರಿಂದ ಒಂದಿಷ್ಟು ರಾಗವು ಬರುತ್ತದೆ, ಆದರೆ ಅದರಲ್ಲಿ ಪ್ರೀತಿ ಮತ್ತು ಅಭಿರುಚಿಯಿಲ್ಲ. ಮೂವತ್ತೆರಡು ಲಕ್ಷ ವಿಮಾನಗಳ ಅಧಿಪತಿಯಾದ ಸಮ್ಯಕ್‌ದೃಷ್ಟಿ ಇಂದ್ರನು ಬಾಹ್ಯದಲ್ಲಿ ಎಲ್ಲಿಯೂ ಆನಂದವನ್ನು ಮನ್ನಿಸುವುದಿಲ್ಲ ; ಆನಂದವಂತೂ ಅಂತರ್ಯದಲ್ಲಿ ಇದೆಯೆಂದು ಅವನು ಮನ್ನಿಸುತ್ತಾನೆ. ಇಂದ್ರನು ಸಾವಿರಾರು ಅಪ್ಸರೆಯರ ಭೋಗ ಮಾಡುತ್ತಾನೆಂದು ಜನರಿಗೆ ಎನಿಸುತ್ತಿರಬೇಕು, ಆದರೆ ಅವನಿಗಂತೂ ಅಂತರ್ಯದಲ್ಲಿ ದುಃಖವೆನಿಸುತ್ತದೆ, ಉಪಸರ್ಗವೆನಿಸುತ್ತದೆ. ಅವನು ರಾಗವನ್ನು ದೂರ ಮಾಡುತ್ತ ಹೋಗುತ್ತಾನೆ. ಆದರೆ ಅದೇ ಭೋಗದಲ್ಲಿ ಮಿಥ್ಯಾದೃಷ್ಟಿಗಳು ಸಿಹಿತನದ ಅನುಭವ ಮಾಡುತ್ತಾರೆ. ಸಮ್ಯಕ್‌ದೃಷ್ಟಿ ಮತ್ತು ಮಿಥ್ಯಾದೃಷ್ಟಿಯ ದೃಷ್ಟಿಯಲ್ಲಿ ಇದೇ ಭೂಮ್ಯಾಕಾಶದ ಅಂತರವಿರುತ್ತದೆ.

ಚಿನ್ನದ ತುಂಡಿನ ಮೇಲೆ ಭಿನ್ನ ಪ್ರಕಾರದ ಚಿತ್ರವುಳ್ಳ ಬಟ್ಟೆಯನ್ನು ಅಂಟಿಸಿ ಬಿಟ್ಟಿದ್ದರೂ ಕೂಡ ಆ ಚಿನ್ನದ ತುಂಡು ಎಂದೂ ಆ ಚಿತ್ರವುಳ್ಳದ್ದಾಗುವುದಿಲ್ಲ. ಅದೇ ಪ್ರಕಾರ ಭಗವಾನ ಆತ್ಮನು ಚಿನ್ನದ ತುಂಡು ಇದ್ದಾನೆ. ಅವನ ಮೇಲೆ ಒಮ್ಮೆ ಸ್ತ್ರೀಯ, ಒಮ್ಮೆ ಪುರುಷನ, ಒಮ್ಮೆ ಆನೆಯ, ಒಮ್ಮೆ ಕುದುರೆಯ, ಒಮ್ಮೆ ನಿಗೋದದ ಇವೇ ಮೊದಲಾದವುಗಳ ಶರೀರರೂಪದ ಬಟ್ಟೆಯನ್ನು ಹೊದೆಸಿರಬಹುದು, ಮೆತ್ತಿಸಿರಬಹುದು, ಆದರೆ ಆತ್ಮ - ವಸ್ತು ಭಗವಾನ ಚಿದಾನಂದ ಆನಂದ ಕಂದನು ಯಾವಾಗಲೂ ಅವುಗಳಿಂದ ಭಿನ್ನ ತತ್ತ್ವನಿದ್ದಾನೆ. ಅವನು ಎಂದೂ ಭಿನ್ನ - ಭಿನ್ನ ಪ್ರಕಾರದ ಶರೀರಗಳ ರೂಪನಾಗುವುದಿಲ್ಲ, ಆಗುವುದೇ ಇಲ್ಲ.

ಸೋದರನೇ! ನೀನು ಯಾರು, ನಿನ್ನ ಅವಸ್ಥೆಯೇನು ? ನೀನು ಎಂದರೆ ಅತೀಂದ್ರಿಯ ಆನಂದದ ಪಿಂಡನಿರುವೆ. ಶರೀರ, ಮನಸ್ಸು, ವಾಣಿ ಎಂದರೆ ನೀನಲ್ಲ, ವಿಕಾರವೂ ಕೂಡ ನೀನಲ್ಲ, ಆನಂದ ಮತ್ತು ಶಾಂತರೂಪ ಜೀವನದಿಂದ ತುಂಬಿಕೊಂಡ ನೀನು ಜೀವನಿರುವೆ. ಆದರೆ ಯಾವ ಪ್ರಕಾರ ಕಸ್ತೂರಿ ಮೃಗದ ನಾಭಿಯಲ್ಲಿ ಕಸ್ತೂರಿಯಿದೆ ಆದರೆ

ಅದಕ್ಕೆ ಅದರ ಅರಿವಿಲ್ಲ, ಅದರ ಬೆಲೆಯಿಲ್ಲ. ಅದೇ ಪ್ರಕಾರ ನೀನು ಸ್ವಯಂ ಭಗವಾನ ಆತ್ಮನಿದ್ದು ನಿನ್ನಲ್ಲಿ ಸರ್ವಜ್ಞ ಪದವು ಬಿದ್ದುಕೊಂಡಿದ್ದರೂ ಕೂಡ ನಿನಗೆ ಅದರ ಬೆಲೆಯಿಲ್ಲ.

ಸೋದರನೇ ! ನೀನು ಒಂದಿಷ್ಟು ವಿಚಾರವನ್ನಾದರೂ ಮಾಡು ! ಅನಂತ ಸರ್ವಜ್ಞರಾಗಿದ್ದಾರೆ ಅವರು ಸರ್ವಜ್ಞ ಪದವನ್ನು ಎಲ್ಲಿಂದ ತಂದುಕೊಂಡರು ? ಹಿಪ್ಪಲಿಯಲ್ಲಿ ಕಾರತನವು ಎಲ್ಲಿಂದ ಬಂತು ? ಪಾಷಾಣದೊಳಗಿಂದ ಬಂತೋ ಅಥವಾ ಅದರೊಳಗಿದ್ದುದೇ ಪ್ರಕಟವಾಗಿದೆಯೋ ? ಪ್ರಭು ! ನೀನು ಸ್ವಯಂ ಸುಖದ ಸಾಗರನಿದ್ದು ಬಾಹ್ಯ ಪದಾರ್ಥಗಳಲ್ಲಿ ಸುಖ ಬಯಸುತ್ತಿರುವುದು ಅದು ನಿನ್ನ ಸ್ವಭಾವಕ್ಕೆ ಕಲಂಕವಿದೆ.

ಯಾವ ಪ್ರಕಾರ ಸಕ್ಕರೆ ತಿನ್ನುವುದರಿಂದ ಸಿಹಿಯೆನಿಸುತ್ತದೆ, ಬೇವು ತಿನ್ನುವುದರಿಂದ ಕಹಿಯೆನಿಸುತ್ತದೆ, ಉಪ್ಪು ಕ್ಷಾರವೆನಿಸುತ್ತದೆ. ಅದೇ ಪ್ರಕಾರ ನೀನು ಸ್ವಯಂ ಭಗವಾನ ಆತ್ಮನ ಅನುಭವ ಮಾಡುವುದರಿಂದ ಆನಂದವು ಬರುತ್ತದೆ. ಆತ್ಮನಲ್ಲಿ ವಿಹಾರ ಮಾಡುವುದರಿಂದ ಅತೀಂದ್ರಿಯ ಆನಂದವು ಬರುತ್ತದೆ ಅದೇ ಆತ್ಮ ಧರ್ಮವಿದೆ.

ಪ್ರಶ್ನೆ :- ಆತ್ಮನನ್ನು ತಿಳಿದುಕೊಳ್ಳುವ ಸಲುವಾಗಿ ಇಷ್ಟೆಲ್ಲವನ್ನು ತಿಳಿದುಕೊಳ್ಳಬೇಕಾಗುತ್ತದೆಯೇನು ?

ಉತ್ತರ :- ವ್ಯಾಪಾರ ಉದ್ಯೋಗದಲ್ಲಿ ಅದೆಷ್ಟು ತಲೆಕೆಡಿಸಿಕೊಳ್ಳುತ್ತೀರಿ ? ಅದರ ಲೆಕ್ಕವನ್ನಾದರೂ ಮಾಡಿ ನೋಡಿರಿ ಮತ್ತು ತಲೆ ಕೆಡಿಸಿಕೊಂಡುದರ ಪ್ರತಿಫಲವೆಷ್ಟು ದೊರಕುತ್ತದೆ, ಅದು ಯಾವ ಉಪಯೋಗಕ್ಕೆ ಬರುತ್ತದೆ. ಇಲ್ಲಿ ಆತ್ಮನು ಹೇಗಿದ್ದಾನೆ ಹಾಗೆ ತಿಳಿದುಕೊಳ್ಳುವಲ್ಲಿ ತೊಂದರೆಯೇನಿದೆ ! ಆತ್ಮನು ಸಿಹಿಯಾಗಿ ಸಕ್ಕರೆಯ ಸ್ವಾದ ತೆಗೆದುಕೊಳ್ಳುವುದಿಲ್ಲ, ಕ್ಷಾರವಾಗಿ ಉಪ್ಪಿನ ಸ್ವಾದ ತೆಗೆದುಕೊಳ್ಳುವುದಿಲ್ಲ, ಅವುಗಳಿಂದ ಭಿನ್ನವಿದ್ದುಕೊಂಡು ಜ್ಞಾನ ಮಾಡಿಕೊಳ್ಳುತ್ತಾನೆ, ಆದರೆ ತನ್ನ ಸ್ವಭಾವದಲ್ಲಿ ಅಭೇದನಾಗಿ ಅತೀಂದ್ರಿಯ ಆನಂದದ ಸ್ವಾದ ತೆಗೆದುಕೊಳ್ಳುತ್ತಾನೆ. ಇದೆಲ್ಲವನ್ನು ತಿಳಿದುಕೊಳ್ಳಬೇಕಾಗುವುದು .

ಆತ್ಮನ ಸ್ವಭಾವದ ರುಚಿ ಮತ್ತು ಸ್ವಸನ್ಮುಖವಾಗಿ ಅದರ ಜ್ಞಾನ ಮಾಡಿಕೊಳ್ಳುವುದು, ಆ ರೂಪದಿಂದ ಪರಿಣಮಿಸುವುದು ಮತ್ತು ಅನುಭವ ಮಾಡಿಕೊಳ್ಳುವುದು ಅದು ಧರ್ಮದ ಪ್ರಾರಂಭವಿದೆ ಎಂದರೆ ಸಂವರವಿದೆ, ಅದರಲ್ಲಿ ಅತೀಂದ್ರಿಯ ಆನಂದದ ಸ್ವಾದ ಬರುತ್ತದೆ. ಅಲ್ಲಿಂದ ಮೋಕ್ಷಮಾರ್ಗದ ಪ್ರಾರಂಭವಾಗುತ್ತದೆ. ಅನಂತರ ಅಂತರ್ಯದ ಸ್ವಭಾವದಲ್ಲಿ ಏಕಾಗ್ರತೆ ಮಾಡುವುದರಿಂದ ಆಸ್ರವವು ಕಡಿಮೆಯಾಗುತ್ತದೆ ಮತ್ತು ನಿರ್ಜರೆಯು ಹೆಚ್ಚುತ್ತದೆ. ನನ್ನ ಸ್ವಭಾವದಲ್ಲಿಯೇ ನನ್ನ ಆನಂದವಿದೆಯೆಂದು ತಿಳಿದಾಗಲೇ ಜೀವನು ಅತೀಂದ್ರಿಯ ಆನಂದದ ಸ್ವಾದದಲ್ಲಿ ವೃದ್ಧಿ ಮಾಡುತ್ತಾನೆ ಎಂದರೆ ಅವನ ನಿರ್ಜರೆಯು ಹೆಚ್ಚುತ್ತ ಹೋಗುತ್ತದೆ. ಇದುವೇ ಸಾಧಕದಶೆ ಇದೆ.

ಯಾವನಿಗೆ ಕೇವಲ ಆಸ್ರವವೇ ಇದೆ ಅವನು ಮಿಥ್ಯಾದೃಷ್ಟಿಯಿದ್ದಾನೆ. ಆಸ್ರವ ಮತ್ತು ನಿರ್ಜರೆ ಇವೆರಡೂ ಇರುವುದು ಅದು ಸಾಧಕ ದಶೆಯಿದೆ. ಯಾರಿಗೆ ಸರ್ವಥಾ ಆಸ್ರವದ ಅಭಾವವಾಗಿ ಪೂರ್ಣ ನಿರ್ಮಲತೆಯು ಪ್ರಾಪ್ತವಾಗಿದೆ ಅವರು ಅರಹಂತರಿದ್ದಾರೆ. ಇಲ್ಲಿ ಕೇವಲ ಒಂದು ಸಮಯದ ಸ್ಥಿತಿಯುಳ್ಳ ಅರಹಂತರ ಸಾತಾವೇದನೀಯದ ಆಸ್ರವವನ್ನು ಗೌಣ ಮಾಡಿದೆ. ಏಕೆಂದರೆ ಅದು ಬರುತ್ತದೆ ಮತ್ತು ಎರಡನೇ ಸಮಯದಲ್ಲಿ ಉದುರಿ ಹೋಗುತ್ತದೆ. ಅದು ಒಂದು ಸಮಯಕ್ಕಿಂತ ಹೆಚ್ಚು ವೇಳೆ ನಿಂತುಕೊಳ್ಳುವುದಿಲ್ಲ.

ಆತ್ಮನ ಸನ್ಮುಖವಾಗುವುದರಿಂದಲೇ ನಿಜವಾದ ಸುಖದ ಅನುಭವವಾಗುತ್ತದೆ. ಕರ್ಮಚೇತನಾ ಮತ್ತು ಕರ್ಮಫಲಚೇತನಾದ ಅನುಭವ ಮಾಡುವುದು ಅದು ದುಃಖದಶೆಯಿದೆ, ಅದು ಮಿಥ್ಯಾದೃಷ್ಟಿಯ ಬಾಧಕ ದಶೆಯಿದೆ. ಆತ್ಮ ಸ್ವಭಾವದ ಸನ್ಮುಖತೆಯ ಪುರುಷಾರ್ಥವು ಅದು ಧರ್ಮಧ್ಯಾನವಿದೆ ಮತ್ತು ಅದರಲ್ಲಿ ಉಗ್ರತೆಯಿಂದ ಲೀನವಾಗುವುದು ಅದು ಶುಕ್ಲಧ್ಯಾನವಿದೆ.

ತನ್ನ ಸ್ವಭಾವದ ಪ್ರಜ್ಞೆಯಿಲ್ಲದ ಕಾರಣ ಮೂಢ ಮಿಥ್ಯಾದೃಷ್ಟಿ ಜೀವನು ಜಗತ್ತಿನ ಇಂದ್ರ, ಚಕ್ರವರ್ತಿ ಮೊದಲಾದ ವೈಭವಗಳಲ್ಲಿ ಸುಖದ ಕಲ್ಪನೆ ಮಾಡುತ್ತಾನೆ, ಆದರೆ ನಿಜವಾಗಿ ಅವು ದುಃಖವಿವೆ. ಧರ್ಮಾತ್ಮನ ದೃಷ್ಟಿಯಲ್ಲಿ ಆತ್ಮನಲ್ಲಿಯೇ

ಸುಖ ಬುದ್ಧಿಯಿದೆ. ಕೇವಲ ರಾಗ-ದ್ವೇಷ, ಪುಣ್ಯ-ಪಾಪ ಭಾವದ ಅನುಭವ ಮಾಡುವುದು ಅದು ಆರ್ತರೌದ್ರಧ್ಯಾನವಿದೆ. ಅವುಗಳ ಅಭಿರುಚಿಯನ್ನು ಬಿಟ್ಟುಕೊಟ್ಟು ಸ್ವಭಾವದ ದೃಷ್ಟಿ ಮಾಡಿದರೆ ಧರ್ಮಧ್ಯಾನವು ಪ್ರಕಟವಾಗುತ್ತದೆ. ಧರ್ಮಧ್ಯಾನ ಎಂದರೆ ಶುಭ ಭಾವವೆಂದು ಹೇಳುವುದು ಅದು ಅಸತ್ಯವಿದೆ.

ಅಹಹ ! ಈ ಜೀವನು ಕಳೆದ ಅನಂತ ಕಾಲದಲ್ಲಿ ಅನೇಕ ಬಾರಿ ಪ್ರಭುಗಳ ಹತ್ತಿರವೂ ಎಂದರೆ ಪ್ರತ್ಯಕ್ಷ ಕೇವಲೀ ಭಗವಂತರ ಹತ್ತಿರ ಹೋಗಿ ಬಂದಿದ್ದಾನೆ. ಆದರೆ ತನ್ನ ಬಹಿರ್ಮುಖ ದೃಷ್ಟಿಯನ್ನು ಬಿಟ್ಟು ಕೊಡಲಿಲ್ಲ. ಈ ಪ್ರಕಾರ ತಾನು ಅಂತರ್ಮುಖ ಆತ್ಮನನ್ನು ದೃಷ್ಟಿಯೊಳಗಿಂದ ಕಣ್ಮರೆ ಮಾಡಿ ಬಿಟ್ಟಿದ್ದಾನೆ.

ಅಹಹ ! ಭಗವಾನ ಪೂರ್ಣಾನಂದ ಸ್ವರೂಪದ ಆತ್ಮನು ಹೇಗಿದ್ದಾನೆಂದರೆ ಸರ್ವಜ್ಞ ಭಗವಂತರ ವಾಣಿಯಲ್ಲಿ ಕೂಡ ಯಾರ ಸಂಪೂರ್ಣ ಗುಣಗಳು ಬರುವ ಸಾಧ್ಯತೆಯಾಗಲಿಲ್ಲ ಅಂಥವನು ಈ ಭಗವಾನ ಆತ್ಮನಿದ್ದಾನೆಂದು ಹೇಳುತ್ತಾರೆ. ಶ್ರೀಮದ್ ರಾಯಚಂದರು ಹೇಳುತ್ತಾರೆ- 'ಜೋ ಸ್ವರೂಪ ಸರ್ವಜ್ಞೇ ದೀಠೂ ಜ್ಞಾನ ಮಾ, ಕಹೀ ಶಕ್ಯಾ ನಹೀ ತೆ ಪಣ ಶ್ರೀ ಭಗವಾನ ಜೀ', 'ಭಗವಂತರು ಎಷ್ಟು ತಿಳಿದಿದ್ದಾರೆ ಅದರ ಅನಂತದ ಒಂದು ಭಾಗವೇ ಅವರ ವಾಣಿಯಲ್ಲಿ ಬರುತ್ತದೆ'ಯೆಂದು ಗೊಮ್ಮಟಸಾರದಲ್ಲಿ ಕೂಡ ಬರುತ್ತದೆ.. ಅರಹಂತ ಭಗವಂತರು ಕೂಡ ದಿವ್ಯ ಧ್ವನಿಯಲ್ಲಿ ಆತ್ಮನ ಸ್ವರೂಪವನ್ನು ಪೂರ್ಣ ರೂಪದಿಂದ ಹೇಳುವ ಸಾಧ್ಯತೆಯಿಲ್ಲವೆಂದ ಮೇಲೆ ಆ ಆತ್ಮನ ಸ್ವರೂಪವನ್ನು ಅನ್ಯರ ವಾಣಿಯಲ್ಲಿ ಹೇಗೆ ಹೇಳುವ ಸಾಧ್ಯತೆಯಿದೆ ? ಅದಂತೂ ಕೇವಲ ಅನುಭವ ಗೋಚರವಿದೆ. ಯಾವ ಮಾಧ್ಯಮದಿಂದಲೂ ಹೇಳುವ ಸಾಧ್ಯತೆಯಿಲ್ಲ.

ಯಾವ ಪ್ರಕಾರ ಮೂಗನು ರಸದ ಸ್ವಾದ ಹೇಳುವ ಸಾಧ್ಯತೆಯಿಲ್ಲ, ಆದರೆ ಅನುಭವ ಮಾಡುವ ಸಾಧ್ಯತೆಯಿದೆ. ಅದೇ ಪ್ರಕಾರ ಆತ್ಮನ ಸ್ವರೂಪವು ಪೂರ್ಣವಾಗಿ ವಾಣಿಯಲ್ಲಿ ಬರುವ ಸಾಧ್ಯತೆಯಿಲ್ಲ, ಆದರೆ ಅನುಭವ ಗೋಚರವಾಗುವ ಸಾಧ್ಯತೆಯಿರುವಂಥ ಸ್ವರೂಪವಿದೆ. ಪುಣ್ಯ-ಪಾಪದಿಂದ ರಹಿತನಾದ ಆತ್ಮನು ಅನುಭವದಲ್ಲಿ ಬರುವ ಸಾಧ್ಯತೆಯಿದೆ.

ಭಗವಾನ ಆತ್ಮನು ಚೈತನ್ಯ ಪಿಂಡ, ಚೈತನ್ಯ ಪುಂಜ, ಚೈತನ್ಯ ಪ್ರಕಾಶ, ಚೈತನ್ಯ ಪ್ರವಾಹನಾದಂಥ ಪೂರ್ಣಾನಂದ ಪ್ರಭುವಿನ ದೃಷ್ಟಿ ಮತ್ತು ಧ್ಯಾನದಿಂದ ಗುಣಸ್ಥಾನದ ಶ್ರೇಣಿಯು ಹೆಚ್ಚುತ್ತದೆ. ರಾಗದ ಅಥವಾ ಪುಣ್ಯದ ಅವಲಂಬನದಿಂದ ಗುಣಸ್ಥಾನಗಳು ಹೆಚ್ಚುವುದಿಲ್ಲ, ಚೈತನ್ಯದ ಏಕಾಗ್ರತೆಯಿಂದ ಅವು ವೃದ್ಧಿಸುತ್ತವೆ.

ನಿಶ್ಚಯ ನಯವು ತ್ರಿಕಾಲ ಶುದ್ಧ ಆತ್ಮನ ಸ್ವಭಾವದ ದರ್ಶನ ಮಾಡಿಸುತ್ತದೆ, ಆದರೆ ವ್ಯವಹಾರ ನಯವು ಭೇದ, ರಾಗ ಮತ್ತು ನಿಮಿತ್ತದ ದರ್ಶನ ಮಾಡಿಸುತ್ತದೆ. ಸಮಯಸಾರದ ಆರನೆಯ ಗಾಥೆಯಲ್ಲಿ ಪುಣ್ಯ - ಪಾಪದ ಭೇದವನ್ನು ತೆಗೆದು ಹಾಕಿದೆ, ಅಸದ್ಭೂತ ಉಪಚಾರ ಮತ್ತು ಅನುಪಚಾರ ವ್ಯವಹಾರನಯವನ್ನು ತೆಗೆದು ಹಾಕಿದೆ, ಇನ್ನು ಏಳನೆಯ ಗಾಥೆಯಲ್ಲಿ ಸದ್ಭೂತ ಅನುಪಚಾರ ಯಾವುದು ಗುಣ - ಗುಣಿಯ ಭೇದ ರೂಪವಾದ ವ್ಯವಹಾರವಿದೆ ಅದನ್ನು ಕೂಡ ತೆಗೆದು ಹಾಕಿದೆ. ಕೇವಲ ಓರ್ವ ಜ್ಞಾಯಕ ಸ್ವರೂಪನಾದ ಆತ್ಮನನ್ನು ಎಲ್ಲವುಗಳಿಂದ ಭಿನ್ನವಾಗಿ ತೋರಿಸಿಕೊಡಲಾಗಿದೆ.

ಏಕಾಕಿ ಭಗವಾನ ಆತ್ಮನು ಜ್ಞಾಯಕ .... ಜ್ಞಾಯಕ .... ಜ್ಞಾಯಕ ('ಜ್ಞಾಯಕ'ವೆಂಬ ವಿಕಲ್ಪವೂ ಇಲ್ಲ) ಚೈತನ್ಯದ ಪ್ರಕಾಶ ರಹಿತ ಪುಣ್ಯ - ಪಾಪದ ವಿಕಲ್ಪಗಳಿಂದ ಭಿನ್ನವಾಗಿರುವ 'ಜ್ಞಾಯಕ'ದ ಜ್ಞಾನ ಭಾವರೂಪ ಪರಿಣಮನ ಮಾಡುತ್ತ ಹೋದರೆ ದೃಷ್ಟಿಯಲ್ಲಿ ಜ್ಞಾಯಕ ಭಾವವೇ ಬರುತ್ತದೆ. ಈ ದೃಷ್ಟಿಬರದ ಹೊರತಾಗಿ ಮೂರು ಕಾಲದಲ್ಲಿ ಮೋಕ್ಷವಾಗುವುದಿಲ್ಲ.

ಪಂಚಮಕಾಲದಲ್ಲಿ ನಿಶ್ಚಯ ಮೋಕ್ಷಮಾರ್ಗವಾಗುವುದಿಲ್ಲ, ಆದುದರಿಂದ ವ್ಯವಹಾರ ಮೋಕ್ಷಮಾರ್ಗವಾದ ಯಾವ ಪುಣ್ಯ ಪರಿಣಾಮವಿದೆ ಅದರ ಆಚರಣೆ ಮಾಡಿರಿ, ಅದು ಮೋಕ್ಷ ಮಾರ್ಗವಿದೆಯೆಂದು ಕೆಲವರು ಹೇಳುತ್ತಾರೆ.